
ವಿಶ್ವರಂಗ

ದುಡಿವ ಜನರ ಪ್ರಾಣ ಮಿತ್ರ


ಸಂಪುಟ 25 ಸಂಚಿಕೆ 32
ಆಗಸ್ಟ್ 10, 2003 ಬೆಲೆ ರೂ. 3.00



ಕೃಷಿ ಬಿಕ್ಕಟ್ಟು ಮತ್ತು ದುಷ್ಟ ನೀತಿಗಳು








ರೈತರ ಸಾವು: ವಂಚಿಸುತ್ತಿರುವ ಕೃಷ್ಣ-ಖರ್ಗೆ




ನೇಪಾಳ: ಮೂಗು ತೂರಿಸುತ್ತಿರುವ ಅಮೆರಿಕ



ಮುರ್ಡೋಡಕ್‌ಗೆ ಮಣೆ

ಭಾವೈಕ್ಯತೆ ಬೆಸೆಯುವ 'ಮಿಸ್ಟರ್ ಅಂಡ್ ಮಿಸಸ್ ಅಯ್ಯರ್' ಚಿತ್ರ

ವಿಮೋಚನಾ ಸಮರದಲ್ಲಿ....



ಮೇಜರ್ ಜಯಪಾಲ್ ಸಿಂಗ್

ಆತ್ಮಕಥನ

38



ಹಿಂದಿನ ಸಂಚಿಕೆಯಲ್ಲಿ ರೈಲಿನಲ್ಲಿ ತೆಲಂಗಾಣ ಜನರ ಕೊಲೆ ಹಾಗೂ ಅತ್ಯಾಚಾರದ ಬಗೆ ಉಪ್ಪು ಖಾರಸೇರಿಸಿ ವರ್ಣಿಸಿ ಆನಂದ ಪಡುತ್ತಿದ್ದ ಸೈನಿಕರು, ಪತ್ತೇದಾರಿಕಾದಂಬರಿ ಓದುವಂತೆ ನಟಿಸಿ ಅವರ ಸಂಭಾಷಣೆಗೆ ಕಿವಿಯೊಡ್ಡಿದ ಜಯಪಾಲ್ ಸಿಂಗ್, ಶರಣಾದರೆ ಗಲ್ಲು ಶಿಕ್ಷೆ ಖಂಡಿತ ಎಂದು ಭಾವಿಸಿದ ಜನರ ಹೋರಾಟ ಎಂದ ಸಂಗಾತಿ ಮತ್ತು ಇನ್ನೂ ಕೆಲವು ಸಂಗಾತಿಗಳ ಪ್ರಕಾರ ತೆಲಂಗಾಣವು ಭಾರತೀಯ ಕ್ರಾಂತಿಕಾರಿ ರೈತರ ಜೀವಂತ ಸಂಕೇತ.. ಈ ಬಗ್ಗೆ ಓದಿರುವಿರಿ. ಮುಂದೆ...

ಕನ್ನಡಕ್ಕೆ: ವಿಶ್ವ ಕುಂದಾಪುರ

ಕಣ್ಣಮುಂದೆ ಸುಳಿದಾಡಿದ ಕಷ್ಟಕೋಟಲೆ....

ನಾನು ಪಯಣಿಸಿದ ರೈಲು ಬೋಗಿಯಲ್ಲಿ ತುಂಬಿಕೊಂಡಿದ್ದ ಪೊಲೀಸರು ಮಾತಾಡಿಕೊಳ್ಳುತ್ತಿದ್ದುದನ್ನು ಕೇಳಿಸಿಕೊಂಡರೆ ಎಂಥವರ ಎದೆಯಾದರೂ ಝುಲ್ಲೆನಿಸುತ್ತಿತ್ತು. ಅಬ್ಬಾ ಅವರು ಮನುಷ್ಯರೇ ಅಲ್ಲ. ಮನುಷ್ಯರ ಮಾಂಸಕ್ಕಾಗಿ ಹಪಹಪಿಸುವ ನಾಯಿಗಳಂತೆ ಭಾಸವಾಯಿತು. ಅವರ ಪೈಕಿ ಒಬ್ಬ ಅಧಿಕಾರಿಯಂತೂ 'ಕೊಲೆ ಮತ್ತು ಅತ್ಯಾಚಾರ'ದ ಬಗ್ಗೆ ಅತ್ಯಂತ ಸಹಜವೆನ್ನುವಂತೆ, ಖುಷಿಯಿಂದ ಮಾತಾಡುತ್ತಿದ್ದ.

ತೆಲಂಗಾಣದ ಬಗ್ಗೆ ಬಂಡವಾಳಶಾಹಿ ನೀಡಿದ ಮಾಹಿತಿಯೇ ಮೊದಲಿನ 'ಪ್ರವೃತ್ತಿ'ಗೆ ಆಧಾರ. ಶತ್ರುಗಳ ಪ್ರಚಾರಕ್ಕೆ ಅವರು ಹೆಚ್ಚು ಮಾನ್ಯತೆ ನೀಡಿದರು ಹಾಗೂ ಅರ್ಧಸತ್ಯ ಮತ್ತು ಸುಳ್ಳು ಅಭಿಪ್ರಾಯಗಳನ್ನು ರೂಪಿಸಿಕೊಂಡರು.

ನಂತರದ 'ಪ್ರವೃತ್ತಿ'ಗಳು ತೆಲಂಗಾಣ ಕುರಿತು ವಸ್ತುಸ್ಥಿತಿ ತಿಳಿಸುತ್ತೇವೆ. ಆ ಬಗ್ಗೆ ಯಾರೂ ಪ್ರಶ್ನಿಸುವಂತಿಲ್ಲ. ಆಂಧ್ರ ಪ್ರಾಂತೀಯ ಸಮಿತಿಯು ದೇಶದ ಒಳಗೇ ಆಗಲಿ. ಹೊರಗಡೆಯೇ ಆಗಲಿ ಸಂಗಾತಿಗಳಿಗೇ ಅಪ್ರಾಮಾಣಿಕ ಚಿತ್ರಣವನ್ನು ನೀಡಲಿಲ್ಲ.

ಹೋರಾಟದಲ್ಲಿನ ಕೆಲವು ದೋಷಗಳನ್ನು ನಿರ್ಲಕ್ಷಿಸಿದ್ದು ತೊಂದರೆಗೆ ಕಾರಣವೇ ಹೊರತು ಅವುಗಳನ್ನು ಅಲಕ್ಷಿಸಲು ಹಾಗೂ ಮುಚ್ಚಿಡಲು ಅಪ್ರಾಮಾಣಿಕ ಪ್ರಯತ್ನ ನಡೆಸಿದ್ದಲ್ಲ; ಅಂತ ಯಾವುದೇ ಪ್ರಯತ್ನ ನಡೆಯಲಿಲ್ಲವೆಂದು ನಾನು ಖಡಾಖಂಡಿತವಾಗಿ ಹೇಳಬಲ್ಲೆ. ತೆಲಂಗಾಣ ಸಂಗಾತಿಗಳು ಮತ್ತು ಅವರ ನಾಯಕರ ಜತೆಗಿನ ಅನುಭವದಿಂದಾಗಿ ಅವರು ಅಸಮರ್ಥರು ಎಂದು ನನಗೆ ಮನವರಿಕೆಯಾಯಿತು. ಆದರೆ ಈ ಬಗ್ಗೆ ಪಕ್ಷದ ವಲಯ ಹಾಗೂ ಹೊರಗಡೆ ಗಾಳಿ ಸುದ್ದಿಗಳನ್ನು ಹಬ್ಬಿಸಲಾಯಿತು. ಈ ವಿಚಾರ ನನ್ನ ಗಮನಕ್ಕೆ ಬಂತು.

ಇವೆಲ್ಲ ಹುಸಿಯೇ? ಇಲ್ಲ, ಅದು ಹಾಗಲ್ಲ ಎಂದು ನನಗೆ ಪೂರ್ಣ ಮನವರಿಕೆಯಾಯಿತು.

ಆದರೆ ಈ ಬಗೆಗಿನ ನನ್ನ 'ದೃಷ್ಟಿಕೋನ' ವೇ ಭಿನ್ನವಾಗಿತ್ತು. ಭಾರತ ಗ್ರಾಮೀಣ ಭಾಗಗಳಲ್ಲಿ ಕಳೆದ 25 ವರ್ಷಗಳಿಂದ ಹೊಗೆಯಾಡುತ್ತಿದ್ದ ಬೆಂಕಿಯ ಕಿಡಿ ಸ್ಫೋಟಗೊಂಡು ಜ್ವಾಲೆಯಾಗಿ ಆವರಿಸಿರುವುದೇ ತೆಲಂಗಾಣ ಸಂಘರ್ಷ ಎಂಬುದು ನನ್ನ ಅನಿಸಿಕೆ.

ಗಾಂಧಿ ರಕ್ಷಣೆ

ಕಳೆದ 25 ವರ್ಷಕ್ಕಿಂತ ಹೆಚ್ಚು ಸಮಯದಿಂದ ಸಾಮ್ರಾಜ್ಯಶಾಹಿಗಳು ಮತ್ತು ಪಾಳೇಗಾರಿ ಭೂಮಾಲೀಕರನ್ನು ಗಾಂಧಿ ಈ ಬೆಂಕಿಯ ಜ್ವಾಲೆಯಿಂದ ರಕ್ಷಿಸುತ್ತಾ ಬಂದಿದ್ದರು. ಅವರು ಜನತೆಯ ಅತೃಪ್ತಿಯ ಜ್ವಾಲೆಯ ಮೇಲೆ ಸುಧಾರಣಾವಾದಿ ನೀರನ್ನು ಸುರಿಸುತ್ತಿದ್ದರು. ಅವರು ಸಾಮ್ರಾಜ್ಯಶಾಹಿ-ಪಾಳೇಗಾರಿ ಕೂಟದ ಜತೆ ಅಪ್ರಾಮಾಣಿಕ, ಮಾನಗೆಟ್ಟ ರಾಜಿ ಮಾಡಿಕೊಳ್ಳುತ್ತಿದ್ದರು! ಜನತೆಯ ಅತೃಪ್ತಿಯ ಜ್ವಾಲೆ ಎಲ್ಲೆಲ್ಲಿ ಭುಗಿಲೇಳುತ್ತಿತ್ತೋ ಅಲ್ಲೆಲ್ಲಾ ಅವರು ಹಾಗೆ ಮಾಡುತ್ತಿದ್ದರು.

ಗಾಂಧಿವಾದದ ಪ್ರಭಾವ ಮತ್ತು ಹೋರಾಟಗಳ ಶಕ್ತಿ ಮೊದಲ ಬಾರಿಗೆ ಮುರಿದು ಬಿದ್ದದ್ದರ ಸಂಕೇತವಾಗಿತ್ತು ತೆಲಂಗಾಣ. ನಮ್ಮ ಪ್ರಜಾಸತ್ತಾತ್ಮಕ ಕ್ರಾಂತಿ ಸರಿಯಾದ ಹಾದಿಯನ್ನು ಕಂಡುಕೊಳ್ಳುತ್ತಿತ್ತು.

ಆ ರೀತಿಯಾಗಿ ಯೋಚಿಸುವುದರಲ್ಲಿ ಏನೂ ತಪ್ಪಿರಲಿಲ್ಲ. ಏನಿದ್ದರೂ ನಾನು, ನನ್ನಂಥ ಇತರ ಹಲವು ಸಂಗಾತಿಗಳಂತೆ, ನನ್ನ ರೈತಾಪಿ ಮೂಲವನ್ನು ಬೆಳೆಸಿಕೊಳ್ಳುವಲ್ಲಿ ಅಸಮರ್ಥರಾಗಿರುವುದರಲ್ಲೇ ತಪ್ಪು ಅಡಗಿದೆ. ನಮ್ಮ ಕೆಲವು ಸಂಗಾತಿಗಳಿಗೆ ತೆಲಂಗಾಣ ಇನ್ನೂ ಒಂದು ಅಕಾಡೆಮಿಕ್ ವಿಷಯ, ಆದರೆ ನಮಗೆ ಹಾಗಲ್ಲ. ತೆಲಂಗಾಣದಲ್ಲಿ ನಮ್ಮ ಜನರು ಹಾಗೂ ಸಂಗಾತಿಗಳು ಅಪಾರವಾದ ಕಷ್ಟನಷ್ಟಗಳನ್ನು ಅನುಭವಿಸುತ್ತಿರುವುದನ್ನು ನಿರ್ಲಕ್ಷಿಸುವಂತಿಲ್ಲ. ಕಾಲಕಾಲಾಂತರದಿಂದ ಮಡುಗಟ್ಟಿದ ನೋವು ಒಡೆದು ಹೋಗುತ್ತಿರುವುದನ್ನು ತೆಲಂಗಾಣದಲ್ಲಿ ನಾವು ಕಂಡೆವು; ಸಂತೋಷಪಟ್ಟೆವು.

ಸಂಕಷ್ಟದ ಸಮಾಧಿ!

ನನ್ನ ಬಾಲ್ಯ ಜೀವನದ ಸಂಕಷ್ಟಗಳೆಲ್ಲ ಸೂಕ್ತ ರೀತಿಯಲ್ಲಿ ಸಮಾಧಿಯಾಗುತ್ತಿರುವುದನ್ನು ನನ್ನ ಜೀವನದಲ್ಲಿ ಮೊದಲ ಬಾರಿಗೆ ನಾನು ಕಂಡೆ. ಎತ್ತುಗಳು ಮತ್ತು ಹಸುಗಳ ಜತೆ ಒಂದೇ ಕೋಣೆಯನ್ನು ಹಂಚಿಕೊಂಡು ನನಗೆ ಜನ್ಮವಿತ್ತ ತಾಯಿ, ದನಗಳ ಮಲಮೂತ್ರದ ವಾಸನೆಯನ್ನೇ ಹುಟ್ಟಿದ ತಕ್ಷಣವೇ ಉಸಿರೆಳೆದ ನಾನು, ವ್ಯಾಪಾರಿಗಳ ದುರಾಸೆಯಿಂದಾಗಿ ತನ್ನ ಸಣ್ಣ ಜಮೀನಿನಿಂದಲೂ ವಂಚಿತರಾಗಿ ಸಾಮ್ರಾಜ್ಯಶಾಹಿಗಳ ಬಾಡಿಗೆ ಸೇನೆಯ ಬಂಟನಾಗಬೇಕಾಗಿ ಬಂದ ನನ್ನ ತಂದೆ... ಕೃಶದೇಹ, ಅನಕ್ಷರತೆ, ಹಸಿವಿನಿಂದ ಬಳಲುತ್ತಾ ಬಾಲ್ಯವನ್ನು ಬಡ ರೈತನ ಮನೆಯಲ್ಲಿ ಕಳೆದದ್ದು - ಇವೆಲ್ಲವೂ ನನ್ನ ಕಣ್ಣಮುಂದೆ ಹಾದು ಹೋದವು.... ಹೀಗಾಗಿ ತೆಲಂಗಾಣ ನನ್ನ ಪಾಲಿಗೆ ಕೇವಲ ಒಂದು ಅಕಾಡೆಮಿಕ್ ವಿಷಯವಾಗಿ ಉಳಿಯಲು ಸಾಧ್ಯವಿರಲಿಲ್ಲ.

ಪಾಳೇಗಾರಿಯಿಂದ ಕೂಡಿದ ಭಾರತದ ಗ್ರಾಮೀಣ ಪ್ರದೇಶದ ಇತಿಹಾಸದ ಒಂದು ವಿಲಕ್ಷಣ ಪುಟ ನಾನು. ಸಾಮ್ರಾಜ್ಯಶಾಹಿ-ಭೂಮಾಲಿಕ ದಾಹಿಗಳು ಗ್ರಾಮೀಣ ಭಾರತದ ಮೇಲೆ ನಡೆಸಿದ ಅನಾಚಾರದ ಫಲವಾದ ವಿನಾಶ, ಸಂಕಷ್ಟ, ಹತಾಶೆಗಳ ಪ್ರತಿನಿಧಿ ನಾನು.

ಇಲ್ಲಿ.... ಇದೇ ಮೊದಲ ಬಾರಿಗೆ ಅದೇ ಸಂಕಷ್ಟಕ್ಕೊಳಗಾದ ಶೋಷಿತ ಜನತೆ ಕೈಯಲ್ಲಿ ಶಸ್ತ್ರಗಳನ್ನು ಹಿಡಿದು ಶತಶತಮಾನಗಳ ಕಷ್ಟಕೋಟಲೆಯ ನೊಗವನ್ನು ಕಿತ್ತೊಗೆಯಲು ಬಂಡೆದ್ದಿದ್ದಾರೆ. ಯಾಕೆಂದರೆ ಬದುಕು ಮತ್ತು ಸಾವು - ಇವೆರಡೇ ಅವರ ಮುಂದಿರುವ ಆಯ್ಕೆಗಳು. ಬದುಕನ್ನೇ ಅವರು ಆಯ್ಕೆ ಮಾಡಿಕೊಂಡರು. ಬದುಕಿಗೇ ಅವರ ಪ್ರಾಶಸ್ತ್ಯ.

ರೈಲಿನ ಆ ಬೋಗಿಯಲ್ಲಿ ನನ್ನ ತಲೆ ತುಂಬಾ ಯೋಚನೆಗಳೇ ತುಂಬಿಕೊಂಡವು.

ಯಾಕಿಷ್ಟು ವಿಳಂಬವಾಗುತ್ತಿದೆ, ಯಾಕೆ ಈ ಶೋಷಕರನ್ನೆಲ್ಲ ರಾತ್ರಿ ಬೆಳಗಾಗುವುದರೊಳಗೆ ನಿರ್ನಾಮ ಮಾಡಲಾಗುವುದಿಲ್ಲ, ರೈತರ ಇತರ ವಿಭಾಗಗಳೆಲ್ಲ ಯಾಕೆ 'ಸತ್ತು ಹೋಗಿದೆ', ಇಂಥ ನಿರ್ಣಾಯಕ ಕಾಲಘಟ್ಟದಲ್ಲಿ ನಾವೇಕೆ ಹೊಡೆದಾಡುತ್ತಿದ್ದೇವೆ - ನನ್ನ ತಲೆಯಲ್ಲಿ ಪ್ರಶ್ನೆಗಳ ಸುರಿಮಳೆಯಾಯಿತು. ವ್ಯಕ್ತಿನಿಷ್ಠ ಅಸಹನೆಯ ಕಟ್ಟೆ ಒಡೆಯುತ್ತಿತ್ತು.

ಇಲ್ಲೇ ರೈತ ಮತ್ತು ಕಾರ್ಮಿಕರ ನಡುವಿನ ವ್ಯತ್ಯಾಸ ಬೆಳಕಿಗೆ ಬರುವುದು. ತಾಕಲಾಟವೂ ಗೊತ್ತಾಗುವುದು. ರೈತರ ಸಂಕುಚಿತ ಮನೋಭಾವ, ಹೊಸ ಹಾಗೂ ಮುಕ್ತ ಜೀವನದ ಆಸೆಗೆ ಬೇಗನೆ ಎಚ್ಚೆತ್ತುಕೊಳ್ಳುವುದು, ವರ್ಗ ಮೂಲದ ಬಗ್ಗೆ ಭಾವನಾತ್ಮಕ ಸಂಬಂಧ ಇವು ನನ್ನನ್ನು ದತ್ತು ತೆಗೆದುಕೊಂಡ ವರ್ಗದ ದೃಷ್ಟಿಕೋನ ಹಾಗೂ ವಿಚಾರಗಳ ಜತೆ ಸಂಘರ್ಷಕ್ಕಿಳಿಯುತ್ತದೆ. ಈ ವರ್ಗ ನನಗೆ ಮಾರ್ಕ್ಸ್‌ವಾದ-ಲೆನಿನ್‌ವಾದ ನೀಡಿತು. ಸಾಮಾಜಿಕ ಪ್ರಗತಿ ಮತ್ತು ಶೋಷಿತರ ವಿಮೋಚನೆಗೆ ಸರಿಯಾದ ಒಳನೋಟ ಮತ್ತು ಮಾರ್ಗಗಳನ್ನು ತೋರಿಸುತ್ತದೆ.

ಆದರೆ ಆ ಸಮಯದಲ್ಲಿ, ಭಾವನೆಗಳು, ಸಂಕುಚಿತತೆ ಹಾಗೂ ಅನಗತ್ಯ ಅಸಹನೆ ಇವುಗಳು ತಾರ್ಕಿಕತೆ, ವಿಶಾಲ ಹಾಗೂ ವೈಜ್ಞಾನಿಕ ವಿಶ್ವ ಕಣ್ಣೋಟ ಇವುಗಳ ಮೇಲೆ ಮೇಲುಗೈ ಪಡೆದವು. ದತ್ತು ಪಡೆದ ಕಾರ್ಮಿಕನ ಮೇಲೆ ಮೂಲ ರೈತನೇ ಮೇಲುಗೈ ಸಾಧಿಸಿದ!

ತೆಲಂಗಾಣ ಜತೆ ಇಂಥ ಭಾವನಾತ್ಮಕ ಬಂಧವನ್ನು ನಾನು ಬೆಳೆಸಿಕೊಂಡಿದ್ದೆ. ಹಿನ್ನೆಲೆಯಲ್ಲಿ ಯಾವುದೇ ಕಪ್ಪು ಕಲೆ ಕಾಣಲು ಸಾಧ್ಯವಿರಲಿಲ್ಲ. "ಇಲ್ಲ! ತೆಲಂಗಾಣ ನಮ್ಮ ಆಶಾಕಿರಣ, ನಮ್ಮ ಭವಿಷ್ಯ, ಅದರ ವಿರುದ್ಧ ಒಂದು ಮಾತೂ ಇಲ್ಲ"

ಈ ಭಾವನಾತ್ಮಕ ಸಂಬಂಧದ ಕೆಳಗಡೆ ಒಂದು ಕುತೂಹಲವನ್ನು ಅದುಮಿಟ್ಟುಕೊಂಡಿದ್ದೆ. ಇತಿಹಾಸವನ್ನು ಸೃಷ್ಟಿಸುತ್ತಿರುವ, ಅದನ್ನು ಮುಂದಕ್ಕೊಯ್ಯುತ್ತಿರುವ ಹಾಗೂ ನಮ್ಮ ಪ್ರಜಾಸತ್ತಾತ್ಮಕ ಕ್ರಾಂತಿಯನ್ನು ಅಭಿವೃದ್ಧಿಯ ಸರಿಯಾದ ಪಥದಲ್ಲಿ ಇಡುತ್ತಿರುವ ಜನರಿಗೆ ಎಂಥ ಅವಕಾಶ ದೊರಕೀತು, ಎಂಥ ಬೆಂಬಲ ಸಿಕ್ಕೀತು ಎಂಬ ಕುತೂಹಲ ನನ್ನದಾಗಿತ್ತು.

ಸಾಮ್ರಾಜ್ಯಶಾಹಿಗಳು ಮತ್ತು ಭೂಮಾಲೀಕರನ್ನು ಜನಸಮೂಹದ ಆಕ್ರೋಶದ ಜ್ವಾಲೆಯಿಂದ ಗಾಂಧಿ ತಮ್ಮ ಸುಧಾರಣಾವಾದಿ ತಂತ್ರಗಳಿಂದ ರಕ್ಷಿಸುತ್ತಾ ಬಂದಿದ್ದರು. ಜನಸಮೂಹದ ಅತೃಪ್ತಿಯ ಜ್ವಾಲೆಗೆ ಗಾಂಧಿ ಸುಧಾರಣೆಯೆಂಬ ತಣ್ಣೀರನ್ನು ಸುರಿಯುತ್ತಿದ್ದರು... ಈ ಗಾಂಧಿವಾದದ ಪ್ರಭಾವ ಕುಸಿದುಬಿದ್ದದ್ದರ ಸಂಕೇತವೇ ತೆಲಂಗಾಣ ಸಂಘರ್ಷ.

ಕ್ರಾಂತಿಕಾರಿಗಳೂ ಶಿಸ್ತಿನ ಸಿಪಾಯಿಗಳೂ....

ಪಕ್ಷದ ಭೂಗತ ಕೇಂದ್ರ ಕಚೇರಿಗಳಿಗೆ ಕ್ರಾಂತಿಕಾರಿ ಹಾಗೂ ಪಿತೂರಿ ಚಟುವಟಿಕೆಗಳ ನರನಾಡಿಗಳಿಗಿಂತ ಹೆಚ್ಚಿನ ಪ್ರಾಮುಖ್ಯತೆಯಿದೆ. ಕಾರ್ಯಕರ್ತರು ತಮಗೆ ವಹಿಸಿಕೊಟ್ಟ ಕೆಲಸಗಳ ಬಗ್ಗೆ ಯಾವ ರೀತಿಯ ವರ್ತನೆ ತೋರುತ್ತಿದ್ದಾರೆ ಎಂಬುದಕ್ಕೆ ಭೂಗತ ಕೇಂದ್ರ ಕಚೇರಿಗಳು ಸರಿಯಾದ ಹಾಗೂ ಖಾತರಿಯಾದ ಕನ್ನಡಿಯಾಗಿವೆ. ಕಳೆದ ಮೂರು ವರ್ಷಗಳ ನನ್ನ ಬೇಕಾಬಿಟ್ಟಿ, ಯೋಜಿತವಲ್ಲದ 'ಅಲೆದಾಟ'ಗಳಿಂದಾಗಿ ನಾನು ಪಕ್ಷದ ಅನೇಕ ಭೂಗತ ಕೇಂದ್ರಗಳಿಗೆ ಭೇಟಿ ನೀಡಬೇಕಾಯಿತು. ಈ ಕನ್ನಡಿಯ ಮೂಲಕ ನಾನು ಹೊರಗಿನ ವಿಚಾರಗಳನ್ನು ಬಹುಮಟ್ಟಿಗೆ ತಿಳಿಯಬಹುದಾಗಿತ್ತು.

(ಮುಂದುವರಿಯುವುದು)

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

ಆಗಸ್ಟ್ 9, 2003
ಕರ್ನಾಟಕ ಸಮಾಜ ವೇದಿಕೆ (ಕೆಎಸ್‌ಎಫ್)
(WSF ಕರ್ನಾಟಕ ಘಟಕ)
ರಾಜ್ಯ ಸಮಾವೇಶ
ಸೆನೆಟ್ ಹಾಲ್-ಬೆಂಗಳೂರು

ಆಗಸ್ಟ್ 16 ರಿಂದ 31, 2003
ಕೇಂದ್ರ ಸರ್ಕಾರದ ಅಮೆರಿಕ ಪರ ವಿದೇಶಿ - ನೀತಿ, ಜನವಿರೋಧಿ ಆರ್ಥಿಕ ನೀತಿ ಹಾಗೂ ಕೋಮುವಾದೀಕರಣದ ವಿರುದ್ಧ ಪ್ರಚಾರಾಂದೋಲನ-ಸಿಪಿಐ(ಎಂ) ಕರೆ.
ಸೆಪ್ಟೆಂಬರ್ 8 ರಂದು ಬೆಂಗಳೂರಿನಲ್ಲಿ ರ್‍ಯಾಲಿ
ಸೆಪ್ಟೆಂಬರ್ 18 ರಂದು ಮಂಗಳೂರಿನಲ್ಲಿ ರ್‍ಯಾಲಿ


ಸೆಪ್ಟೆಂಬರ್ 1, 2003
ಕರ್ನಾಟಕ ಪ್ರಾಂತ ರೈತ ಸಂಘದ ರೈತರ ದಿನ-ವಿಶೇಷ ರಾಜ್ಯ ಸಮಾವೇಶ
ಗುಲ್ಬರ್ಗಾ

ಐಕ್ಯರಂಗ ಚಂದಾದಾರರಾಗಿ

ವಾರ್ಷಿಕ	ರೂ. 150
6 ತಿಂಗಳು	ರೂ. 80
ಆಜೀವ	ರೂ. 1000


ಪ್ರಕಟವಾಗಿದೆ





ಸಂಪರ್ಕ : ಚಿಂತನ ಉತ್ತರ ಕನ್ನಡ, ಪಂಡಿತ ಸಾರ್ವಜನಿಕ ಗ್ರಂಥಾಲಯ, ಶಿರಸಿ-581401

ಲಭ್ಯವಿದೆ



ಕೆಂಪು ಸೂರಿ'ಯ
ಬೆಲೆ : 25

ಕಾಂ. ಸೂರಿಯವರ ಬದುಕು - ಹೋರಾಟ ಕುರಿತಾದ ಸಂಗ್ರಹ ಯೋಗ್ಯವಾದ ಸ್ಮರಣ ಸಂಚಿಕೆ

ರೈತರ ಆತ್ಮಹತ್ಯೆ : ಕೃಷ್ಣ-ಖರ್ಗೆ ವಂಚನೆಗಳು

ಕೂಳಿಲ್ಲದೇ ಸತ್ತುಹೋದ ಯುವಕನ ಶವದ ನೆನಪು ಮಾಸಿಲ್ಲ. ನಾಡಿನ ಜನ ಸಾವನ್ನಪ್ಪುತ್ತಿದ್ದಾರೆ.ಆದರೆ ಏನೂ ಆಗಿಲ್ಲದಂತೆ ನಟಿಸುತ್ತಿವೆ ಸರ್ಕಾರಗಳು.

ಈ ಸರ್ಕಾರಕ್ಕೆ ಒಂದು ನೀತಿ-ನಿಯತ್ತು ಎಂಬುದಿದೆಯೇ? ಕಷ್ಟ-ಸುಖಗಳ ಬಗ್ಗೆ ಚಿಂತಿಸುವ ಮನಸ್ಸಿದೆಯಾ? ತಾನು ನಾಡಿನ ಜನರ ಪ್ರತಿನಿಧಿ ಎಂಬ ಹೊಣೆಗಾರಿಕೆಯಾದರೂ ಇದೆಯಾ? ಮನಸೂ ಇಲ್ಲದ, ಮಾನವೀಯತೆಯೂ ಇಲ್ಲದ ಒಂದು ದುರಾಡಳಿತ ಎಂಬುದನ್ನು ಕೃಷ್ಣರ ಸರ್ಕಾರ ಹೆಜ್ಜೆ ಹೆಜ್ಜೆಗೂ ಸಾಬೀತು ಪಡಿಸುತ್ತಿದೆ.

ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ಎಂ.ರಾಮಪುರ ಗ್ರಾಮದ ಕೃಷಿಕ ಕುಟುಂಬದ ಏಳು ಜನ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ತೀವ್ರ ಬಡತನ, ಅನಾರೋಗ್ಯ, ಸಾಲದಬಾಧೆ, ಮುಂದುವರೆದ ಭೀಕರ ಬರದಿಂದಾಗಿ ಕೂಲಿ ನಾಲಿಗೂ ಪರದಾಟ. ಕೆಲವು ತಿಂಗಳಿನಿಂದ ಅರೆಹೊಟ್ಟೆಯಲ್ಲೇ ಬದುಕಿನ ಸಾಗಾಟ. 2 ದಿನಗಳ ಹಿಂದಿನಿಂದಲಂತೂ ತಿನ್ನಲು ಏನೂ ಇಲ್ಲ. ಉಪವಾಸ-ನರಳಾಟ! ಈ ಯಾತನಾ ಸ್ಥಿತಿ ತಾಳದೇ ಏಳು ಜನರೂ ಆತ್ಮಹತ್ಯೆಗೆ ಮೊರೆ ಹೋದರು. ಈ ಸಂಗತಿ ಕಂಡು, ಸ್ವತಃ ಅನುಭವಿಸಿದ ಗ್ರಾಮದ ಅನೇಕರು ಕರುಳು ಹಿಂಡುವ ಕ್ರೂರ ಪರಿಸ್ಥಿತಿಯ ಬಗ್ಗೆ ಹೇಳುತ್ತಾರೆ. ಆದರೆ... ಹೈಟೆಕ್ ಆಡಳಿತ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಬರದ ಉಸ್ತುವಾರಿ ವಹಿಸಿಕೊಂಡಿರುವ ಗೃಹ ಸಚಿವ ಮಲ್ಲಿಕಾರ್ಜುನ ಖರ್ಗೆಯವರು ಹೇಳೋದೇ ಬೇರೆ?

ಅವರು ಸತ್ತಿರುವುದು ಹಸಿವಿನಿಂದಲ್ಲವಂತೆ. ಸಾಲದ, ಕೃಷಿ ಬಿಕ್ಕಟ್ಟು-ಬರದ ಬವಣೆಯಿಂದ ಅಲ್ಲವೇ ಅಲ್ಲವಂತೆ. ಹೀಗೆ ಸಾಯಲು ಏನೋ ಬೇರೆ ಕಾರಣಗಳಿವೆಯಂತೆ! ಹಾಗೆಂದು ತಹಶೀಲ್ದಾರ, ಅಸಿಸ್ಟೆಂಟ್ ಕಮಿಷನರ್‌ಗಳೆಂಬ ಹೃದಯಹೀನ ಅಧಿಕಾರಶಾಹಿಗಳು ಹೇಳಿದ್ದಾರಂತೆ. ಎಂತಹ ನೀಚರಿವರು. ಕಣ್ಣಿಗೆ ಹೊಡೆಯುವಂತೆ ಸತ್ಯವಿದ್ದರೂ ಅಧಿಕಾರಿಗಳು ಮಾತುಗಳನ್ನು ಪುನರುಚ್ಚರಿಸುತ್ತಿದ್ದಾರಲ್ಲ. ಅಥವಾ ಅಧಿಕಾರಿಗಳಿಗೆ ಹೀಗೆ ಹೇಳಬೇಕೆಂದು ತರಬೇತಿ ನೀಡಿರಬೇಕಲ್ಲ. ಇವರು ಹಸಿವಿನಿಂದ ಸತ್ತಿದ್ದಾರೆಂದರೆ 'ನಂಬರ್ ವನ್ ಮುಖ್ಯಮಂತ್ರಿ ಕಿರೀಟ ಉರುಳುತ್ತದೆ' ಎಂಬ ಭಯವೇ? ಪರಿಹಾರ ಕೊಡಬೇಕಾದೀತು ಎಂಬ ಕೀಳು ಯೋಚನೆಯೇ? ಬರದ ಕಾಮಗಾರಿ ರಾಜ್ಯದಲ್ಲಿ ಅಪೂರ್ವ ಯಶಸ್ವಿ ಎಂಬ ಕೇಂದ್ರ ಸರ್ಕಾರದ ಸಚಿವರ ಶಹಬ್ಬಾಸ್ ಪಡೆದದ್ದು ಮೋಸದಾಟವೆಂದು ಬಯಲಾಗಿಬಿಡುತ್ತದೆ ಎಂಬ ಆತಂಕವೇ? ಅಥವಾ ಬರದ ಹೆಸರಿನಲ್ಲಿ ನುಣ್ಣಗೆ ಮೇಯ್ದು ಕೊಬ್ಬಿದ ಹೆಗ್ಗಣಗಳಾಗಿರುವ ಭ್ರಷ್ಟ ಹಗರಣಗಳು ಹೊರಬರುತ್ತವೆ ಎಂಬ ದುಗುಡವೇ? ನಿಜಕ್ಕೂ ಮನುಷ್ಯರಾಗಿದ್ದರೆ ಕೃಷ್ಣ, ಖರ್ಗೆ ವಾಜಪೇಯಿ ಬಾಯಿ ಬಿಡಬೇಕು. ಇಂತಹ ಸಾವು ಇದೇ ಒಂದಲ್ಲ, ಕಳೆದ ವಾರದ ಹಿಂದೆ

ಈ ವಾರ ಕರ್ನಾಟಕ
ಒಂದು ನೋಟ
ಎಸ್. ವೈ. ಗುರುಶಾಂತ್



ಎಂ.ರಾಮಾಪುರದ ರೈತ ಕುಟುಂಬದ ಸಾಮೂಹಿಕ ಆತ್ಮಹತ್ಯೆ

ಬೆಂಗಳೂರಿನ ಪಕ್ಕದಲ್ಲೇ ಇರುವ ಚನ್ನಪಟ್ಟಣದ ಆರು ಜನ ರೈತ ಕುಟುಂಬ ಸಾಲದ ಬಾಧೆ-ಬರದ ಬವಣೆ-ತಿನ್ನಲು ಏನೂ ಇಲ್ಲದ ಸ್ಥಿತಿಯಿಂದ ಕಾವೇರಿ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡರು. ಎರಡು ದಿನಗಳ ಹಿಂದೆ ಮಾಹಿತಿ ತಂತ್ರಜ್ಞಾನ ನಗರದ ಪಕ್ಕದಲ್ಲೇ ಇರುವ ಹೊಸಕೋಟೆ ರೈತನೊಬ್ಬ ಕೃಷಿ ಬೆಲೆ ಕುಸಿತದಿಂದ ಸಾಲದ ಬಾಧೆ ತಾಳದೇ ಆತ್ಮಹತ್ಯೆ ಮಾಡಿಕೊಂಡ. ಈಗ ಹಾವೇರಿಯಿಂದ ಬಂದ ಸುದ್ದಿ - ದೇವಿ ಹೊಸೂರಿನ ರೈತರ ತಿರುಕಪ್ಪ ಮುದುಕಪ್ಪ ಸಾಲದ ಬಾಧೆ ತಾಳದೇ ಆತ್ಮಹತ್ಯೆಗೀಡಾಗಿದ್ದಾನೆ. ಬೆಂಗಳೂರು ನಗರದಲ್ಲೇ ಎಫ್‌ಸಿಐ ಗೋಡಾನಿನಲ್ಲಿ ಕೊಳೆಯುತ್ತಿದೆ ಕೋಟ್ಯಾಂತರ ಟನ್ ಆಹಾರ ಧಾನ್ಯ. ಅದು ತಿನ್ನಲು ಮನುಷ್ಯರಿಗಲ್ಲ, ಹೆಗ್ಗಣಗಳು, ಹುಳು ಹುಪ್ಪಡಗಳಿಗೆ. ಸಾವಿರಾರು ಕೋಟಿ ರೂಪಾಯಿಗಳ ಸಬ್ಸಿಡಿ ದಾನ ಮಾಡಲಾಗುತ್ತದೆ ಬಹುರಾಷ್ಟ್ರೀಯ ಮತ್ತು ದೇಶೀಯ ಕಂಪನಿಗಳಿಗೆ, ಆದರೆ ದುಡಿವ ಜನರಿಗಲ್ಲ. ಹೇಗಿದೆ ಜಾಗತೀಕರಣ-ಉದಾರೀಕರಣದ ನೀತಿ?

ಜನತೆ ಹೀಗೆ ದುರಂತದತ್ತ ಸಾಗುತ್ತಿರಬೇಕಾದರೆ ಹೃದಯಹೀನ ಸರ್ಕಾರಗಳ ವರ್ತನೆ ಖಂಡನೀಯ. ಜನತೆ ಇಂತಹವರಿಗೆ ಬುದ್ಧಿ ಕಲಿಸಬೇಕಾಗುತ್ತದೆ.

ಭ್ರಷ್ಟರು ಮತ್ತೊಮ್ಮೆ ಮನೆ ಬಾಗಿಲಲ್ಲಿ !

ನೂರು ಕೋಟಿ ರೂಪಾಯಿಗಳ ಬ್ರಹ್ಮಾಂಡ ಭ್ರಷ್ಟಾಚಾರದ ಮೂಲಕ ಕೃಷ್ಣರಾಜಪುರ ನಗರಸಭೆಯನ್ನು ಜಗದ್ವಿಖ್ಯಾತಗೊಳಿಸಿದ ಕಾಂಗ್ರೆಸ್ ಈ ಬಾರಿಯೂ ಜನತೆಗೆ ಟೋಪಿ ತೊಡಿಸಲು ಸಜ್ಜಾಗಿದೆ. ಭಾರೀ ಅಬ್ಬರದ ಪ್ರಚಾರವನ್ನು ಆರಂಭಿಸಿದೆ. ಕಿರಾತಕ ಸಚಿವ ಎ.ಕೃಷ್ಣಪ್ಪನವರ ವರ್ಣಮಯ ವ್ಯಕ್ತಿತ್ವವನ್ನು ಬಿಂಬಿಸುವ ಹೊಸ ಪತ್ರಿಕೆಗಳನ್ನು ಮತದಾರರ ಮಧ್ಯೆ ಹರಿಯಬಿಟ್ಟು ಸಚಿವರಿಗೆ, ಸಚಿವರ ಪಕ್ಷಕ್ಕೆ ಹೊಸ ಇಮೇಜ್ ಸೃಷ್ಟಿಸುವ ಹೊಸ ಹೊಸ ತಂತ್ರಗಳು ಚಲಾವಣೆಯಲ್ಲಿವೆ. ನಗರಸಭಾ ವ್ಯಾಪ್ತಿಯಲ್ಲಿನ ರಸ್ತೆಗಳ ಹಳ್ಳ-ಕೊಳ್ಳ ಹೊಂಡಗಳನ್ನು ಮುಚ್ಚಲು ಕನಿಷ್ಠ ಮಣ್ಣಾದರೂ ವ್ಯವಸ್ಥೆ ಮಾಡದೇ ಹೋದ ಕಾಂಗ್ರೆಸ್ ಪಕ್ಷ ಕೋಟಿಗಟ್ಟಲೆ ಹಣವನ್ನು ಚುನಾವಣೆಗಾಗಿ ಚೆಲ್ಲಾಡುತ್ತಿದೆ. ಪ್ರದೇಶದ ಜನತೆಯ ಭವಿಷ್ಯಕ್ಕಿಂತ ಕೃಷ್ಣಪ್ಪನವರ ಭವ್ಯ ರಾಜಕೀಯ ಭವಿಷ್ಯವೇ ಕಾಂಗ್ರೆಸ್ ಪಾಲಿಗೆ ಇದೊಂದು ಪ್ರತಿಷ್ಠಿತ ಚುನಾವಣೆಯಾಗಲು ಕಾರಣವಾಗಿದೆ. ಮುಂಬರುವ ವಿಧಾನಸಭಾ ಚುನಾವಣೆಯನ್ನು ಗುರಿಯಾಗಿಸಿಕೊಂಡು ಸಿಎಂಸಿಯನ್ನು ಭದ್ರ ಪಡಿಸಿಕೊಳ್ಳಲು ಮುಂದಾಗಿರುವ ಕೃಷ್ಣಪ್ಪನವರ ಪಡೆ, ಕ್ಷೇತ್ರದಲ್ಲಿ ಕಣ್ಣಿಗೆ ಕಾಣುವ ಅಂದ-ಚೆಂದದ ಮನೆಗಳನ್ನು ಕಟ್ಟಿಸಿಕೊಟ್ಟವರೂ ನಾವೇ ಎನ್ನುವ ಮಟ್ಟಕ್ಕೆ ಪ್ರಚಾರಕ್ಕಿಳಿದಿದೆ.

ಎಷ್ಟರಮಟ್ಟಿಗೆ ಎಂದರೆ ಏಷ್ಯಾದಲ್ಲೇ ಪ್ರಥಮವೆನಿಸಿರುವ ತೂಗಾಡುತ್ತಿರುವ ಸೇತುವೆ ನಮ್ಮಿಂದಾದದ್ದು ಹಾಗೆ ವಿಶ್ವವಿಖ್ಯಾತ ಐ.ಟಿ.ಪಾರ್ಕ್ ನಾವು ಮಾಡಿದ್ದು, ಬೆನ್ನಿಗಾನಹಳ್ಳಿ, ಬಿ.ನಾರಾಯಣಪುರಗಳ ಸೇತುವೆ ನಾವು ಕಟ್ಟಿದ್ದು,

ಕೃಷ್ಣರಾಜಪುರ ನಗರಸಭಾ ಚುನಾವಣೆ

ಉದ್ದುದ್ದ-ಅಗಲಗಲ ರಸ್ತೆಗಳಿಗೆ ನಾವೇ ಮಣ್ಣು ಹೊತ್ತಿದ್ದು, ಟಾರು ಹಾಕಿದ್ದು. ಇನ್ನೇನು ಕಾವೇರಿಯನ್ನು ಕೃಷ್ಣರಾಜ ಪುರಕ್ಕೆ ಹರಿಸಬೇಕೆನ್ನುವಷ್ಟರಲ್ಲಿ ಈ ಚುನಾವಣೆ ಅಡ್ಡ ಬಂತು. ಈಗಲೂ ಕಾಲ ಮಿಂಚಿಲ್ಲ, ನಮ್ಮನ್ನು ಗೆಲ್ಲಿಸಿ ನೋಡಿ 10 ಕ್ಕೆ ಚುನಾವಣೆ ಮುಗಿಯುತ್ತಿದ್ದಂತೆ 11 ಕ್ಕೆ ಕಾವೇರಿಯನ್ನು ನಿಮ್ಮ ಮನೆ ಬಾಗಿಲಲ್ಲಿ ನಿಲ್ಲಿಸುತ್ತೇವೆ. ಬಾಕಿ ಉಳಿದ ಎಲ್ಲಾ ಕೆಲಸಗಳನ್ನು ಮಾಡಿ ಮುಗಿಸುತ್ತೇವೆ ಮುಂತಾಗಿ ಕಾಂಗ್ರೆಸ್ ಎಗ್ಗಿಲ್ಲದ ಪ್ರಚಾರ ನಡೆಸಿದೆ.

3 ಲಕ್ಷ ರೂಪಾಯಿ ಬೆಲೆ ಬಾಳುವ ಹೈ ಮಾಸ್ಕ್ ಲೈಟ್‌ಗಳನ್ನು 9 ಲಕ್ಷಕ್ಕೆ ಖರೀದಿಸಿದ ಲೆಕ್ಕ ತೋರಿಸಿದ್ದು, 3000 ರೂಪಾಯಿಗಳ ಮೌಲ್ಯದ ಸೋಡಿಯಂ ಲೈಟ್‌ಗಳಿಗೆ 6000 ಬಿಲ್ ತೋರಿಸಿದ್ದು, 2,100 ರೂಪಾಯಿಗಳ ಟೈಲರಿಂಗ್ ಮೆಷಿನ್‌ಗಳನ್ನು 4,500 ರೂಪಾಯಿಯೆಂದು ಮರೆ ಮಾಚಿದ್ದು, ಇಲ್ಲದ ರಸ್ತೆಗಳಿಗೆ ಡಾಂಬರು ಹಾಕಿಸಿದ್ದು. ಫೈಲುಗಳಲ್ಲಿ ಹೊಸ-ಹೊಸ ರಸ್ತೆಗಳನ್ನು ನಿರ್ಮಿಸಿದ್ದು, ಚರಂಡಿ, ಮೋರಿಗಳ ಕಸ ತೆಗೆಸಲೆಂದು ಸುಳ್ಳು ಲೆಕ್ಕ ಬರೆದದ್ದು, ಇಷ್ಟೆಲ್ಲಾ ಅವ್ಯಹಾರದ ಒಟ್ಟು ಮೊತ್ತ 100 ಕೋಟಿ ಆದದ್ದು. ಲೋಕಾಯುಕ್ತರು ಅವ್ಯವಹಾರವನ್ನು ಬೀದಿಗೆ ತಂದಿದ್ದು ಈ ಪಟ್ಟಿಯನ್ನು ಕಾಂಗ್ರೆಸ್ ಮರೆಮಾಚಿದ್ದು ಜನ ಮರೆಯಬೇಕಲ್ಲ!

ಮುಖ್ಯ ರಸ್ತೆಗಳು ಟಾರು ಕಂಡಿರಬಹುದು. ಸಾಮಾನ್ಯ ಜನರ ಜೇಬು ಕಸಿದು ಕೇಂದ್ರ ಸರ್ಕಾರ ಸೇತುವೆಯನ್ನು ತೂಗುಬಿಟ್ಟಿರಬಹುದು. ವಿದೇಶಿ ಬಂಡವಾಳಿಗರನ್ನು ಆಕರ್ಷಿಸಿ ಕಮಿಷನ್ ಹೊಡೆಯಲು ಹೈಟೆಕ್ ಮುಖ್ಯಮಂತ್ರಿ ಐಟಿಪಿಎಲ್ ಪಾರ್ಕು ಮಾಡಿರಬಹುದು. ಆದರೆ ಬಹು ಸಂಖ್ಯಾತರ ಬದುಕನ್ನು ಕಾಣಲು ಮುಖ್ಯರಸ್ತೆಗಳಿಂದ ಜನವಾಸಿತ ಪ್ರದೇಶಗಳಿಗೆ ಪ್ರವೇಶಿಸಬೇಕು.

ನಾಲ್ಕು-ಐದು ದಿನಕ್ಕೊಮ್ಮೆ ಕಾಣಿಸಿಕೊಳ್ಳುವ ಕುಡಿಯುವ ನೀರು. ಮಣ್ಣು-ಕಸ-ಕಡ್ಡಿ ಪಾಯಖಾನೆಗಳಿಂದ ತುಂಬಿ ಹೋಗಿರುವ ಅವ್ಯಸ್ಥಿತ ಮೋರಿಗಳು, ಆಳುದ್ದ ಗುಂಡಿ ಬಿದ್ದು ಧೂಳಿದ್ದಿರುವ ರಸ್ತೆಗಳು, ಲೈಟುಗಳೇ ಇಲ್ಲದ ವಿದ್ಯುತ್ ಕಂಬಗಳು, ಮನುಷ್ಯನ ಘನತೆಗೆ ಕನಿಷ್ಠ ಅವಶ್ಯಕತೆಗಳೂ ಇಲ್ಲದ ಹತ್ತಾರು ಸ್ಲಮ್ಮುಗಳ ದಿವ್ಯ ದರುಶನವಾಗುತ್ತದೆ, ಒಳ ಹೊಕ್ಕಾಗ.

ಮುಗ್ಧ ಮಹಿಳೆಯರು ಕೇಳುತ್ತಿದ್ದಾರೆ "ಇವುಗಳನ್ನು ಸರಿಪಡಿಸುವ ಸಲುವಾಗಿ ಬಂದ ಹಣ ತಾನೆ ಅದು ನೂರು ಕೋಟಿ ರೂಪಾಯಿ ಅಂತ'. ಜನಸಾಮಾನ್ಯರ ತೆರಿಗೆಯ ಹಣ, ನೀರು, ಮೋರಿ, ರಸ್ತೆ, ಚರಂಡಿ, ಶೌಚಾಲಯ, ವಿದ್ಯುದ್ದೀಪಗಳ ನಿರ್ಮಾಣಕ್ಕಾಗಿ ಮೀಸಲಿಟ್ಟ ಕೋಟಿಗಟ್ಟಲೆ ಹಣವನ್ನು ನುಂಗಿ ನೀರು ಕುಡಿದ ಧನದಾಹಿ ಕಾಂಗ್ರೆಸ್ಸಿಗರಿಗೆ ಮತ್ತೆ ಅಧಿಕಾರವನ್ನು ಧಾರೆ ಎರದರೆ ಮುಂದಿನ ದಿನಗಳಲ್ಲಿ ನಗರಸಭೆಯ ಜಾಗವಾದರೂ ಉಳಿದೀತೆ?ಯೋಚನೆ ಮಾಡುವುದು ಮತದಾರರ ಜವಾಬ್ದಾರಿ.

ರಸ್ತೆ-ಮೋರಿ-ಶೌಚಾಲಯಗಳನ್ನೇ ನುಂಗಿದ ಕಾಂಗ್ರೆಸ್ಸಿನ ಅಪಖ್ಯಾತಿಯ ಲಾಭ ಪಡೆಯಲು ಬಿಜೆಪಿ ನುಗ್ಗಿದೆ. ಇವರ ಬಗ್ಗೆ ಈಗಾಗಲೇ ಚಿಡ್ಡಿ ಹುಡುಗರು ಮಾತಾಡಿಕೊಳ್ಳುತ್ತಿದ್ದಾರೆ. ದೇಶ ಹಾಳುಗೆಡವಲು ಕಾಂಗ್ರೆಸ್ಸಿಗೆ ಐವತ್ತು ವರ್ಷವಾದರೆ ಬಿಜೆಪಿಗೆ ಐದೇ ವರ್ಷ ಎಂದು. ಕಾಂಗ್ರೆಸ್ಸಿನ ಎಲ್ಲ ಅನಿಷ್ಟಗಳನ್ನು ಮೈಗೂಡಿಸಿ ಕೊಂಡಿರುವ ಬಿಜೆಪಿಗೆ ಮೇಲಾಗಿ ಇನ್ನೊಂದು ಖಾಯಿಲೆಯೂ ಇದೆ. ಜಾತಿ- ಧರ್ಮ-ಭಾಷೆ ಮುಂತಾದ ಹೆಸರಿನಲ್ಲಿ ಜನರ ತಲೆ ಹೊಡೆಯುವ ಕುಖ್ಯಾತಿ ಕಾಯಿಲೆಯದು.

ಇವರೇನಾದರೂ ಅಧಿಕಾರಕ್ಕೆ ಬಂದರೆ 'ಇದ್ದರೆ ಉಣ್ಣುವುದು ಇಲ್ಲವಾದರೆ ನೀರು ಕುಡಿದು ಮಲಗುವುದು' ಎನ್ನುವ ಪರಿಸ್ಥಿತಿಗೂ ಅವಕಾಶವಿಲ್ಲ. ಯಾವಾಗ ಗಲಾಟೆಯೋ? ಎಲ್ಲಿ ಗಲಾಟೆಯೋ? ಯಾರ ತಲೆ ಯಾರು ಹೊಡೆದ್ರೂ? ಮುಂತಾದ ಆತಂಕದಲ್ಲೇ ಬದುಕಿದ್ದೂ ಸಾಯಬೇಕು. ಹೀಗಾಗಿ ಹಿಂಸೆಗೆ ಕುಖ್ಯಾತವಾಗಿರುವ ಬಿಜೆಪಿಯನ್ನು ಎಲ್ಲಿಡಬೇಕೋ ಅಲ್ಲಿಡುವುದೇ ಸೂಕ್ತ.

ಒಂದೇ ನಾಣ್ಯದ ಎರಡು ಮುಖಗಳಾಗಿರುವ ಕಾಂಗ್ರೆಸ್ - ಬಿಜೆಪಿಗಳಿಗೆ ಪ್ರಾಮಾಣಿಕವಾಗಿ ಸ್ಪರ್ಧೆ ಮಾಡಿರುವ ಜನತಾದಳವು ಸಹ ಈ

ಪುಟ 10 ಕ್ಕೆ

ಕೃಷ್ಣರಾಜಪುರ ನಗರಸಭಾ ಚುನಾವಣೆಯಲ್ಲಿ ಸ್ಪರ್ಧಿಸಿರುವ ಸಿಪಿಐ(ಎಂ) ಅಭ್ಯರ್ಥಿಗಳು

ಗೌರಮ್ಮ	ವಾರ್ಡ್ ನಂ. 1
ಪಿ.ಜಯರಾಂ	" 29
ಎಂ. ಶಿವಕುಮಾರ್	" 31
ಕೆ.ಪಿ.ಜಗನ್ನಾಥ್	[illegible]
[illegible]	30
ಕೆ.ಪ್ರಭಾಕರ್	11
ಎ.ರವಿಚಂದ್ರನ್	" 32

ವಿಮಾ ಕಾರ್ಪೊರೇಷನ್ ನೌಕರರ ಐತಿಹಾಸಿಕ ವಾರ್ಷಿಕ ಸಮ್ಮೇಳನ

ವಿಮಾ ಕಾರ್ಪೊರೇಷನ್ ನೌಕರರ ಸಂಘಟನೆಯ ಬೆಂಗಳೂರು ವಿಭಾಗ 1 ಮತ್ತು 2ರ ವಾರ್ಷಿಕ ಸಮ್ಮೇಳನ ಇದೇ ಜುಲೈ 8-9 ರಂದು ಚಿಕ್ಕಬಳ್ಳಾಪುರದ ಕೆ.ವಿ. ಶ್ರೀನಿವಾಸನ್ ನಗರದಲ್ಲಿ ಯಶಸ್ವಿಯಾಗಿ ನಡೆಯಿತು. ಈ ಸಮ್ಮೇಳನದ ಯಶಸ್ಸು ಹತ್ತಾರು ವರ್ಷಗಳು ಮನಸ್ಸಿನಲ್ಲಿ ಉಳಿಯುವಂತಹುದು. 200ಕ್ಕೂ ಹೆಚ್ಚು ನೌಕರರು ಮೆರವಣಿಗೆಯಲ್ಲಿ ಭಾಗವಹಿಸಿದರು, 400ಕ್ಕೂ ಹೆಚ್ಚು ಮಹಿಳಾ ನೌಕರರು ಕೃಷಿ ಕೂಲಿಕಾರರು ಮತ್ತು ಅಸಂಘಟಿತ ವಲಯದ ನೌಕರರು ಸಹ ಈ ಮೆರವಣಿಗೆಯಲ್ಲಿ ಇದ್ದರು. ಅಖಿಲ ಭಾರತ ವಿಮಾ ನೌಕರರ ಸಂಘಟನೆಯ ಬೆಂಗಳೂರು ವಿಭಾಗ 1 ರಂತ ದೊಡ್ಡ ವಿಭಾಗಕ್ಕೆ ಪ್ರಥಮ ಮಹಿಳಾ ಪ್ರಧಾನ ಕಾರ್ಯದರ್ಶಿಯನ್ನು ಆಯ್ಕೆ ಮಾಡಿದ ಹೆಗ್ಗಳಿಕೆ ಈ ಸಮ್ಮೇಳನದ್ದು. ಯಶಸ್ವಿಯಾಗಿ ಸಮ್ಮೇಳನವನ್ನು ನಡೆಸಿಕೊಟ್ಟ ಚಿಕ್ಕಬಳ್ಳಾಪುರ ಐಸಿಇಯು ಘಟಕದ ಸಂಗಾತಿಗಳ ಶಕ್ತಿ ಸಾಮರ್ಥ್ಯ ಬೆಳಕಿಗೆ ಬಂದಿತು. ಸಮ್ಮೇಳನದ ಹಿಂದಿನ ದಿನ ನಾಲ್ಕು ಜಾಥಾಗಳನ್ನು ಹಮ್ಮಿಕೊಳ್ಳುವಂತಹ ನಿರ್ಧಾರ ಗಮನಾರ್ಹ. ಕೇಂದ್ರ ರಾಜ್ಯ ಸರ್ಕಾರಗಳ ಜನ ವಿರೋಧಿ ನೀತಿಗಳ ವಿರೋಧಿಸಿ, ಎಲ್.ಐ.ಸಿ. ಯ ಪ್ರಗತಿ, ಸಾಮಾಜಿಕ ಕಳಕಳಿಯ ಬಗ್ಗೆ ಜನ ಜಾಗೃತಿ ಮೂಡಿಸಲು ಸಹಾಯವಾಗಿದ್ದು ಈ ಸಮ್ಮೇಳನದ ವಿಶೇಷ.

ಆಕರ್ಷಕ ಮೆರವಣಿಗೆ

ಜುಲೈ 8ರ ಬೆಳಿಗ್ಗೆ ಹಳೆಯ ಬಸ್ ನಿಲ್ದಾಣದಿಂದ ಹೊರಟ ಮೆರವಣಿಗೆ ಜನಸಂದಣಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರದ ಜನವಿರೋಧಿ ನೀತಿಗಳ ವಿರೋಧಿಸಿ, ಜನಪರ ನೀತಿಗಳಿಗಾಗಿ ಒತ್ತಾಯಿಸಿ, ಎಲ್.ಐ.ಸಿ. ಸಾಧನೆಯ ಬಗ್ಗೆ, ಖಾಸಗೀ ಕಂಪನಿಗಳು ಮತ್ತು ಬಹುರಾಷ್ಟ್ರೀಯ ಕಂಪನಿಗಳ ವಿರುದ್ಧ, ಕೋಮುವಾದದ ವಿರುದ್ಧ, ಘೋಷಣೆಗಳು ಮುಗಿಲು ಮುಟ್ಟುತ್ತಿದ್ದವು. ಕೆಂಪು ಸಮವಸ್ತ್ರ ಧರಿಸಿದ 100ಕ್ಕೂ ಹೆಚ್ಚು ಸಂಗಾತಿಗಳೊಂದಿಗೆ ಶಿಸ್ತಿನಿಂದ ಕಾಂ। ಕೆ. ಶ್ರೀನಿವಾಸ ಮೂರ್ತಿ ಮಂಚ್‌ಗೆ ಬಂದು ತಲುಪಿತು. ಧ್ವಜಾರೋಹಣವನ್ನು ವಿಭಾಗ 2ರ ಅಧ್ಯಕ್ಷರಾದ ಪಿ. ನಾಗೇಂದ್ರ ನೆರವೇರಿಸಿದರೆ ಪ್ರಧಾನ ಕಾರ್ಯದರ್ಶಿ ನಾಗರಾಜ್ ಸ್ವಾಗತಿಸಿದರು.


ಉದ್ಘಾಟನಾ ಸಮಾರಂಭದಲ್ಲಿ ವೇಣುಗೋಪಾಲ್ ಪ್ರಧಾನ ಕಾರ್ಯದರ್ಶಿ ಎಐಐಇಎ, ಅಮಾನುಲ್ಲಾ ಖಾನ್ ಜಂಟಿ ಕಾರ್ಯದರ್ಶಿ, ಎಐಐಇಎ, ವಿ. ರಮೇಶ್ ಜಂಟಿ ಕಾರ್ಯದರ್ಶಿ ಎಸ್‌ಸಿಜೆಡ್‌ಐಇಎಫ್, ಎಲ್.ಸಿ. ಜೈನ್ ಭಾರತ ಜನಪರ ವೇದಿಕೆಯ ಛೇರ್‌ಪರ್‌ಸನ್, ಜಿ.ವಿ. ಶ್ರೀರಾಮರೆಡ್ಡಿ ಮಾಜಿ ಶಾಸಕರು ಮಾರ್ಕ್ಸ್ ವಾದಿ ಕಮ್ಯುನಿಸ್ಟ್ ಪಕ್ಷ, ಜಿ.ಹೆಚ್. ನಾಗರಾಜ್, ಸ್ವಾಗತ ಸಮಿತಿಯ ಅಧ್ಯಕ್ಷರು, ವಿಮಾ ನೌಕರ ಸಂಘಟನೆಯ ಇತರೆ ವಿಭಾಗಗಳಿಂದ ಆಗಮಿಸಿದ್ದ ಪ್ರಧಾನ ಕಾರ್ಯದರ್ಶಿಗಳಾದ ಎಸ್.ಎಸ್. ನಾಗೇಶ್, ಡೇರಿಕ್‌ರೆಬೆಲ್ಲೋ, ಜೋಸೆಫ್, ಜೆ. ಸುರೇಶ್, ಕುರಿಯನ್ ಜಾರ್ಜ್ ವಿಮಾ ಕಾರ್ಪೊರೇಷನ್ ಪಿಂಚಣಿದಾರರ ಸಂಘ, ಎ.ಎಸ್. ಆಚಾರ್ಯ ವಿಮಾ ನೌಕರ ಸಂಘಟನೆಯ ಹಿರಿಯ ಮುಖಂಡರು ಭಾಗವಹಿಸಿದ್ದರು.

ದೇಶ ಪ್ರೇಮಿ ಕರ್ತವ್ಯ

ವೇಣುಗೋಪಾಲ್ ಸಮ್ಮೇಳನವನ್ನು ಉದ್ಘಾಟಿಸಿ ಧ್ವಜವನ್ನು ಎತ್ತರಕ್ಕೆ ಒಯ್ಯುತ್ತಿರುವ ಬೆಂಗಳೂರಿನ ಸಂಗಾತಿಗಳನ್ನು ಅಭಿನಂದಿಸಿದರು. ವಾಜಪೇಯಿ ಸರ್ಕಾರ ಅನುಸರಿಸುತ್ತಿರುವ ಆರ್ಥಿಕ ಮತ್ತು ಸಾಮಾಜಿಕ ನೀತಿಗಳು ದೇಶ ಎದುರಿಸುತ್ತಿರುವ ಅಪಾಯಗಳು ಈ ನೀತಿಗಳು ಹೇಗೆ ದೇಶದ ಅವನತಿಗೆ ಮತ್ತು ದೇಶದ ಭದ್ರತೆಗೆ ಬೆದರಿಕೆಯೊಡ್ಡಿದೆ ಎಂದು ವಿವರಿಸಿದರು. ಎಲ್.ಐ.ಸಿ. ಉತ್ತಮವಾಗಿ ಪ್ರಗತಿ ಸಾಧಿಸುತ್ತಿದೆ. ಒಟ್ಟು ಆಸ್ತಿ 2 ಲಕ್ಷ 90 ಸಾವಿರ ಕೋಟಿ ಜೀವನಿಧಿ 2 ಲಕ್ಷ, 70 ಸಾವಿರ ಕೋಟಿ ಹೊಸ ಪಾಲಿಸಿ ಮಾರಾಟ ಮಾಡಿದ್ದು 2.45 ಕೋಟಿ 80 ಸಾವಿರ ಕೋಟಿಗೂ ಮಿಗಿಲಾದ ಆದಾಯ ಗಳಿಸುವ ನಿಷ್ಠೆಯಿದೆಯಾದರೂ ಕೇಂದ್ರ ಸರ್ಕಾರದ ರಾಜ್ಯಖಾತೆಯ ವಿತ್ತಮಂತ್ರಿ ಆನಂದರಾವ್ ವಿಠೋಭ ಅಡ್ಸುಲ್ ಉದ್ದೇಶಪೂರ್ವಕವಾಗಿ ಎಲ್.ಐ.ಸಿ.ಯ ವಿರುದ್ಧ ಅಪಪ್ರಚಾರ ಮುಂದುವರಿಸುತ್ತಿದ್ದಾರೆ. ದೇಶದಲ್ಲಿ ಎಲ್.ಐ.ಸಿ. ನಂ. 1 ಹಣಕಾಸು ಸಂಸ್ಥೆ, ದೇಶದ ಅಭಿವೃದ್ಧಿಗೆ ಮತ್ತು ಸಾಮಾಜಿಕ ಯೋಜನೆಗಳಿಗೆ ಎಲ್.ಐ.ಸಿ.ಯ ಕೊಡುಗೆ ಅಗಾಧ, ಇಂತಹ ಸಂಸ್ಥೆಯನ್ನು ಖಾಸಗೀ ಮತ್ತು ಬಹುರಾಷ್ಟ್ರೀಯ ಕಂಪನಿಗಳ ಬಾಯಿಗೆ ಹಾಕುವ ದೇಶದ್ರೋಹಿ ಕೆಲಸವನ್ನು ಈ ಕೇಂದ್ರಸರ್ಕಾರ ಮಾಡುತ್ತಿದೆ. ಇಂತಹ ಸಂಸ್ಥೆಗಳನ್ನು ಯಾವುದೇ ಬೆಲೆ ತೆತ್ತಾದರೂ ರಕ್ಷಿಸುವ ಜವಾಬ್ದಾರಿ ದೇಶಪ್ರೇಮಿ ಜನಗಳಿಗಿದೆ ಎಂದರು. ಉತ್ತಮವಾಗಿ ಪ್ರಗತಿ ಸಾಧಿಸಿದರೂ ನ್ಯಾಯಬದ್ಧವಾಗಿ ಕೊಡಬೇಕಾದ ವೇತನ ಪರಿಷ್ಕರಣೆಯನ್ನು ಈ ಸರ್ಕಾರ ನೀಡುತ್ತಿಲ್ಲ. ಈ ಬಗ್ಗೆ ಮುಂದಿನ ಹೋರಾಟಗಳನ್ನು ರೂಪಿಸಲಾಗುತ್ತದೆ ಎಂದರು.

ಭಾರತಕ್ಕೆ ಜೀವ ವಿಮೆ ಮಾಡಬೇಕಾದ ಪ್ರಸಂಗ ಬಂದಿದೆ

ಮುಖ್ಯ ಅತಿಥಿಗಳಾದ ಎಲ್.ಸಿ.ಜೈನ್ ಮಾತಾನಾಡುತ್ತಾ ಮಹಿಳಾ ನೌಕರರು ದೊಡ್ಡ ಸಂಖ್ಯೆಯಲ್ಲಿ ಆಗಮಿಸಿರುವುದಕ್ಕೆ ಸಂತಸ ವ್ಯಕ್ತಪಡಿಸಿದರು, ನಮ್ಮ ಪೋಷಕರು ತ್ಯಾಗ ಬಲಿದಾನಗಳಿಂದ ಬ್ರಿಟಿಷರೊಂದಿಗೆ ಹೋರಾಟಮಾಡಿ ಸ್ವಾತಂತ್ರ್ಯಗಳಿಸಿಕೊಟ್ಟು ಉತ್ತಮ ಬದುಕು ನಡೆಸಲು ಹೆಮ್ಮೆಯ ನಾಗರೀಕರಾಗಿರಲು ಈ ಪ್ರಜಾಪ್ರಭುತ್ವದೇಶದಲ್ಲಿ ಘನತೆ ಮತ್ತು ಗೌರವದಿಂದ ಬದುಕುವ ಅವಕಾಶ ಕಲ್ಪಿಸಿದ್ದಾರೆ. ಅಂತಹ ತ್ಯಾಗ ಬಲಿದಾನಗಳನ್ನು ಇಂದಿನ ಆಳುವವರ್ಗ ಜನವಿರೋಧಿ ನೀತಿಗಳನ್ನು ಮುಂದುವರೆಸುತ್ತಾ ಹಾಳು ಮಾಡುತ್ತಿದೆ. ಅಮೇರಿಕನ್ ಸಾಮ್ರಾಜ್ಯಶಾಹಿಗೆ ಶರಣಾಗುತ್ತಿರುವ ಕೇಂದ್ರ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು. ಭಾರತದ ಸ್ವಾತಂತ್ರ್ಯವನ್ನು ಉಳಿಸಿ ಮಕ್ಕಳ



ಮುಂದಿನ ಭವಿಷ್ಯಕ್ಕೆ ಸಹಕರಿಸಬೇಕೆಂದು ತಿಳಿಸುತ್ತಾ ಇಲ್ಲಿಯವರೆಗೆ ಮನುಷ್ಯರ ಜೀವಕ್ಕೆ ವಿಮೆ ಮಾಡಿಸುತ್ತಿದ್ದಿರಿ, ಈಗ ಭಾರತಾಂಬೆಯ ಜೀವಕ್ಕೆ ವಿಮೆ ಮಾಡಿಸುವಂತ ಜವಾಬ್ದಾರಿ ನಿಮ್ಮ ಮೇಲಿದೆ ಎಂದು, ಅಪರಾಧ ಮತ್ತು ಭ್ರಷ್ಟಚಾರದಿಂದ ದೇಶವನ್ನು ವಿಮುಕ್ತಿಗೊಳಿಸಬೇಕೆಂದು ಅದಕ್ಕಾಗಿ ರಾಷ್ಟ್ರವ್ಯಾಪ್ತಿ ಚಳುವಳಿ ನಡೆಸಬೇಕೆಂದು ಕರೆ ನೀಡಿದರು.

ರಾಜಕೀಯ ಪರ್ಯಾಯದ ಅಗತ್ಯತೆ

ಜಿ.ವಿ. ಶ್ರೀರಾಮರೆಡ್ಡಿ ಮಾತನಾಡುತ್ತ ದೇಶದಲ್ಲಿ ಕೋಮುವಾದಿ ಶಕ್ತಿಗಳು ಗರಿಕೆದರಿ ನಿಂತಿವೆ. ಆ ಪಕ್ಷದ ಸರ್ಕಾರ ಕೇಂದ್ರದಲ್ಲಿ ಅಧಿಕಾರದಲ್ಲಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ಜನವಿರೋಧಿ ನೀತಿಗಳನ್ನು ಅನುಸರಿಸುತ್ತಿವೆ ಎಂದರಲ್ಲದೇ ರಾಜಕೀಯ ಪರ್ಯಾಯಕ್ಕೆ ಮುಂದಾಗಲು ಕರೆ ನೀಡಿದರು.

ಸೈದ್ಧಾಂತಿಕ ಬದ್ಧತೆ

ಅಮಾನುಲ್ಲಖಾನ್‌ರವರು ಕಾಂ. ಕೆ.ವಿ. ಶೀನಿವಾಸನ್ ಮತ್ತು ಕಾಂ.ಕೆ. ಶ್ರೀನಿವಾಸ್ ಮೂರ್ತಿಯವರ ತ್ಯಾಗ ಬಲಿದಾನಗಳನ್ನು ಸ್ಮರಿಸಿದರು. ಅಂತಹ ಸಾವಿರಾರು ಪ್ರತ್ಯಕ್ಷ ಮತ್ತು ಪರೋಕ್ಷ ಸಂಗಾತಿಗಳನ್ನು ಎ.ಐ.ಐ.ಇ.ಎ ಸೃಷ್ಟಿಸಿದೆ. ಇಂದಿನ ಸವಾಲುಗಳನ್ನು ಎದುರಿಸಲು ಸೈದ್ಧಾಂತಿಕ ಗುಣಗಳನ್ನು ಹೊಂದಿರುವ ಸಂಘಟನೆಯು ಪ್ರಸ್ತುತವೆಂದು, ಅಂತಹ ನಂಬಿಕೆ ಮತ್ತು ವಿಶ್ವಾಸ ವಿಮಾನೌಕರರ ಮೇಲಿದೆ ಎಂದರು. ದಕ್ಷಿಣ ಮಧ್ಯವಲಯದ ವಿಮಾ ನೌಕರ ಸಂಘಟನೆಯ ಜಂಟಿಕಾರ್ಯದರ್ಶಿ ವಿ. ರಮೇಶ್ ಮತ್ತಿತರ ಸಂಗಾತಿಗಳು ಶುಭಕೋರಿ ಮಾತನಾಡಿದರು.


ಸಮ್ಮೇಳನದ ಹಿಂದಿನ ದಿನ ನಾಲ್ಕು ಜಾಥಾಗಳು ದೊಡ್ಡ ಬಳ್ಳಾಪುರ, ಚಿಂತಾಮಣಿ, ಕೋಲಾರ ಮತ್ತು ಕೆ.ಜಿ.ಎಫ್.ಗಳಿಂದ ಪ್ರತಿಷ್ಠಿತ ವ್ಯಕ್ತಿಗಳಿಂದ ಉದ್ಘಾಟನೆಯಾಗಿ 50ಕ್ಕೂ ಹೆಚ್ಚಿನ ಕೇಂದ್ರಗಳಲ್ಲಿ ಸಭೆ ನಡೆಸಿತು. ಎಲ್ಲ ಕಡೆಗಳಲ್ಲಿಯು ಜನರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ಈ ಜಾಥ ಸಂದರ್ಭದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಜನವಿರೋಧಿ ನೀತಿಗಳು ಖಾಸಗೀಕರಣ, ಕೋಮುವಾದ, ಎಲ್.ಐ.ಸಿ. ಪ್ರಗತಿ ಸಾಮಾಜಿಕ ಯೋಜನೆಗಳಿಗೆ ಹಣತೊಡಗಿಸಿರುವ ವಿವರಗಳನ್ನು ಭಾಷಣಗಳ ಮೂಲಕ ತಿಳಿಸಲಾಯಿತು. ವಿಮಾ ಕಾರ್ಪೊರೇಷನ್ ನೌಕರ ಸಂಘಟನೆಯ ಸ್ಥಳೀಯ ಘಟಕಗಳೇ ಈ ಜಾಥಗಳ ನೇತೃತ್ವವಹಿಸಿದ್ದವು.

ಎರಡು ವಿಭಾಗಗಳಿಂದ ನೂತನ ಪದಾಧಿಕಾರಿಗಳು ಆಯ್ಕೆಯಾಗಿದ್ದು ವಿಭಾಗ 1 ರ ಅಧ್ಯಕ್ಷರಾಗಿ ಭಾಸ್ಕರ ಸೋಮಯಾಜಿ ಮತ್ತು ಪ್ರಧಾನ ಕಾರ್ಯದರ್ಶಿಯಾಗಿ ಎಸ್.ಕೆ.ಗೀತಾ ಹಾಗೂ ವಿಭಾಗ 2 ರ ಅಧ್ಯಕ್ಷರಾಗಿ ಪಿ.ನಾಗೇಂದ್ರ ಮತ್ತು ಕಾರ್ಯದರ್ಶಿಯಾಗಿ ಎನ್.ನಾಗರಾಜ್ ಆಯ್ಕೆಯಾದರು.

- ವಿಜಯಕುಮಾರ್


ಎಸ್‌ಎಫ್‌ಐ ಮುಖಂಡ ಯಶವಂತ್ ಮೇಲೆ ಎಬಿವಿಪಿ ಗೂಂಡಾಗಳ ಹಲ್ಲೆ

ಮಂಡ್ಯ ಜಿಲ್ಲೆಯಲ್ಲಿ ಕೋಮುವಾದಿ ಸಂಘ ಪರಿವಾರದ ಸಂಘಟನೆಗಳಿಗೆ ಎಸ್‌ಎಫ್‌ಐ ನುಂಗಲಾರದ ತುತ್ತಾಗಿದೆ. ಇದರಲ್ಲಿ ಸಕ್ರಿಯ ಪಾತ್ರ ವಹಿಸುತ್ತಿರುವವರು ಸಂಗಾತಿ ಯಶವಂತ. ಎಸ್‌ಎಫ್‌ಐನ ಜಿಲ್ಲಾ ಕಾರ್ಯದರ್ಶಿ, ರಾಜ್ಯ ಸಹ ಕಾರ್ಯದರ್ಶಿಯಾಗಿರುವ ಯಶವಂತರವರ ಮೇಲೆ ಸಂಘ ಪರಿವಾರದ ಜನ ನಿರಂತರವಾಗಿ ವಿಷಕಾರುತ್ತಿದ್ದಾರೆ. ಎಬಿವಿಪಿ, ಸಂಘ ಪರಿವಾರದ ಪೊಳ್ಳುತನ, ಕೋಮುವಾದವನ್ನು ಬಯಲಿಗೆಳೆದು ವಿದ್ಯಾರ್ಥಿಗಳಿಗೆ, ಜನರಿಗೆ ತಿಳಿ ಹೇಳುವಲ್ಲಿ ಯಶವಂತ್ ಮತ್ತು ಎಸ್‌ಎಫ್‌ಐ ನ ಕಾರ್ಯಕರ್ತರು ಸದಾ ಮುಂಚೂಣಿಯಲ್ಲಿದ್ದಾರೆ. ಎಬಿವಿಪಿಯವರು ಯಶವಂತನ ಮೇಲೆ ಹಲ್ಲೆ ಮಾಡಿದ ದಿನವೂ (16.07.2003) ಎಸ್‌ಎಫ್‌ಐ ಕಾರ್ಯಕರ್ತರು ಶಾಲೆ-ಕಾಲೇಜುಗಳಿಗೆ ತೆರಳಿ ಎಸ್‌ಎಫ್‌ಐನ ಸದಸ್ಯತ್ವ ಮಾಡಿಸುತ್ತಾ ಎಬಿವಿಪಿಯವರು ಸಿಇಟಿ ವಿಚಾರದಲ್ಲಿ ವಿದ್ಯಾಥಿಗಳನ್ನು ದಾರಿ ತಪ್ಪಿಸುತ್ತಿರುವುದನ್ನು ಬಯಲಿಗೆಳೆಯುತ್ತಾ, ಎಬಿವಿಪಿಯವರಿಗೆ ಮುಖಭಂಗ ಮಾಡುತ್ತಿದ್ದರು. ಇದನ್ನು ಸಹಿಸಲಾರದ ಇವರು ಮಂಡ್ಯನಗರ ಗುತ್ತಲುಕಾಲೋನಿ ಕಾಲೇಜಿನ ಮುಂದೆ ಪ್ರಚಾರದಲ್ಲಿ ನಿರತರಾಗಿದ್ದ ಯಶವಂತರ ಮೇಲೆ ಹಲ್ಲೆ ನಡೆಸಿದ್ದಾರೆ.



ಮಂಡ್ಯ ಜಿಲ್ಲಾ ಕೋಮು ಸೌಹಾರ್ದ ಸಂಘಟನೆಯನ್ನು ಹುಟ್ಟು ಹಾಕುವಲ್ಲಿ, ಕೋಮುವಾದಿ ಶಕ್ತಿಗಳ ವಿರುದ್ಧ ಜಾತ್ಯಾತೀತ, ಪ್ರಗತಿಪರ ಶಕ್ತಿಗಳನ್ನು, ಬುದ್ಧಿಜೀವಿಗಳನ್ನು ಒಂದುಗೂಡಿಸುವಲ್ಲಿ, ಗಣನೀಯ ಪಾತ್ರ ವಹಿಸಿರುವ ಯಶವಂತ ನಾಗಮಂಗಲದ ದರ್ಗಾ ಸ್ಫೋಟದ ವಿಚಾರದಲ್ಲಿ, ವಿಚಾರ ಸಂಕಿರಣ, ಕಾರ್ಯಕ್ರಮ ಸಂಘಟಿಸಿ ಸಂಘ ಪರಿವಾರಿಗಳ ಕುತಂತ್ರಗಳನ್ನು ಜನರಿಗೆ ತಿಳಿಸಿದ್ದರು.

ಕೆಲವೇ ತಿಂಗಳ ಹಿಂದೆ ಸಾಹಿತಿ ಹೆಚ್.ಎಲ್.ಕೇಶವಮೂರ್ತಿಯವರ ಮೇಲೆ ಹಲ್ಲೆಗೆ ಮುಂದಾಗಿದ್ದ ಮತಿಹೀನರು ಈಗ ಯಶವಂತರ ಮೇಲೆ ಹಲ್ಲೆ ನಡೆಸಿದ್ದಾರೆ. ಆದರೆ ಈರೀತಿಯ ಹಲ್ಲೆಗಳಿಂದ ಎಸ್‌ಎಫ್‌ಐನ್ನು, ಮುಖಂಡರನ್ನು ಪ್ರಗತಿಪರ ಕಾರ್ಯಗಳನ್ನು ತಡೆಯಲು ಸಾಧ್ಯವಿಲ್ಲ ಎಂಬುದನ್ನು ಎಬಿವಿಪಿ-ಸಂಘ ಪರಿವಾರದ ಜನ ಅರಿಯಬೇಕು. ಯಶವಂತರಂತಹ ಕಾರ್ಯಕರ್ತರು ಯಾವುದೇ ಕಾರಣಕ್ಕೂ ಇಂತಹ ಹಲ್ಲೆಗಳಿಗೆ ಹೆದರುವುದಿಲ್ಲ. ಅವರಜೊತೆ ಪ್ರಗತಿಪರ ಜನರಿದ್ದಾರೆ ಎಚ್ಚರ.




ಜಗತ್ತಿನ ಮಾಧ್ಯಮದ ಅಧಿಪತಿ ರೂಪರ್ಟ್ ಮುರ್ಡೋಕ್ ಭಾರತದ ಮಾಧ್ಯಮದಲ್ಲೂ ತನ್ನ ಕಬಂಧ ಬಾಹುವನ್ನು ಬೆಳೆಸುತ್ತಿದ್ದಾನೆ. ಆತ ನುಗ್ಗುತ್ತಿರುವ ರೀತಿಯನ್ನು ನೋಡಿದರೆ ಇಡೀ ಭಾರತದ ಮಾಧ್ಯಮ ಕ್ಷೇತ್ರವನ್ನು ಬಹಳ ಬೇಗ ಅವನು ನುಂಗಿ ನೀರು ಕುಡಿಯುವ ದಿನಗಳು ದೂರವಿಲ್ಲ. ಇದು ನಿಜಕ್ಕೂ ನಮ್ಮ ಪ್ರಜಾಸತ್ತೆಗೆ ದೊಡ್ಡ ಅಪಾಯ. ಇದಕ್ಕೆ ಕೇಂದ್ರದ ದೇಶಭಕ್ತ ವಾಜಪೇಯಿ ಸರ್ಕಾರ ಮುರ್ಡೋಕ್‌ನ ತಾಳಕ್ಕೆ ಕುಣಿಯುತ್ತಿದೆ.

ಮುರ್ಡೋಕ್-ವಾಜಪೇಯಿ ಸರ್ಕಾರದ ಈ ಸಂಬಂಧ ಎಂತಹದು ?

ಸಂಸತ್ತಿನ ಸ್ಥಾಯೀ ಸಮಿತಿಯ ಅತ್ಯುಗ್ರ ವಿರೋಧದ ನಡುವೆಯೂ ವಾಜಪೇಯಿ ಸರ್ಕಾರ ಮುದ್ರಣ ಮಾಧ್ಯಮದಲ್ಲಿ ಶೇ. 26 ವಿದೇಶಿ ಬಂಡವಾಳ ಹೂಡಲು ಅನುಮತಿ ನೀಡಿದೆ. ಆ ನಂತರ, ವಿದ್ಯುನ್ಮಾನ ಮಾಧ್ಯಮದಲ್ಲೂ ಶೇ 26 ವಿದೇಶಿ ಬಂಡವಾಳಕ್ಕೆ ಸರ್ಕಾರ ಅನುವು ಮಾಡಿಕೊಟ್ಟಿದೆ. ಇದರರ್ಥ ವಾರ್ತಾ ಚಾನಲ್‌ಗಳ ಒಡೆತನವು ಶೇ 74 ಭಾರತಿಯರ ಕೈಯಲ್ಲೇ ಇರುತ್ತದೆ.

ಭಾರತೀಯ ಮಾಧ್ಯಮ ಕಂಪನಿಗಳು ವಾಸ್ತವದಲ್ಲಿ ವಿದ್ಧೇಶಿ ಒಡೆತನದ ಕೈಗೆ ಜಾರಿ ಹೋಗುತ್ತದೆ ಎಂದು ಎಚ್ಚರಿಸಲಾಗಿತ್ತು. ಸ್ಟಾರ್ ನ್ಯೂಸ್ ಮುರ್ಡೋಕ್‌ನ ಒಡೆತನದಲ್ಲಿರುವುದು ಇಡೀ ಜಗತ್ತಿಗೇ ಗೊತ್ತು. ಈಗ ನಡೆಯುತ್ತಿರುವ ಪ್ರಸಂಗವನ್ನು ಗಮನಿಸಿದರೆ ಮುರ್ಡೋಕ್ ಹವಣಿಕೆ ಏನು ಎಂದು ತಿಳಿಯುವುದು ಏನೂ ಕಷ್ಟವಲ್ಲ. 'ಸ್ಟಾರ್ ನ್ಯೂಸ್' ನಲ್ಲಿನ ತನ್ನ ಬಂಡವಾಳವನ್ನು ಶೇ 26 ಕ್ಕೆ ಮಿತಿಗೊಳಿಸುತ್ತೇನೆ. ಆದ್ದರಿಂದ ಸ್ಟಾರ್ ನ್ಯೂಸ್‌ನ್ನು ಭಾರತೀಯ ಕಂಪನಿಯೆಂದು ಪರಿಗಣಿಸಿ ಎಲ್ಲಾ ಸೌಲಭ್ಯಗಳನ್ನು ಒದಗಿಸಬೇಕೆಂದು ಮುರ್ಡೋಕ್ ಕೇಳುತ್ತಿದ್ದಾನೆ. ಇದರರ್ಥ ಭಾರತೀಯ ಕಂಪನಿಯಾಗಿ ಸ್ಟಾರ್ ನ್ಯೂಸ್ ಇದ್ದರೂ ಅದರ ನಿಜವಾದ ಒಡೆತನ ಮುರ್ಡೋಕ್‌ನ್ನದ್ದೇ ಆಗಿರುತ್ತದೆ ಎಂಬ ಸಂಗತಿ ಯಾರಿಗಾದರೂ ತಿಳಿಯುತ್ತದೆ. ಸ್ಟಾರ್ ಟಿ.ವಿ.ಯು ಒಂದು ಶೆಲ್ ಕಂಪನಿಯನ್ನು 1 ಲಕ್ಷ ರೂಪಾಯಿಗಳ ಶೇರು ಬಂಡವಾಳದೊಂದಿಗೆಸ್ಥಾಪಿಸಿ ಅದರ ಶೇ 74 ಶೇರುಗಳನ್ನು ಭಾರತೀಯರು ಹೊಂದಿರುತ್ತಾರೆ. ಸ್ಟಾರ್ ಟಿ.ವಿ. ಯ ಸಂಪೂರ್ಣ ಒಡೆತನದಲ್ಲಿರುವ ನೂರಾರು ಕೋಟಿರೂಪಾಯಿಗಳ ಮೌಲ್ಯದ ಆಸ್ತಿಯಾದ ಉಪಕರಣ ಹಾಗೂ ಸಿಬ್ಬಂದಿಗಳನ್ನು ಈ ಶೆಲ್ ಕಂಪನಿಯೇ ನಿಯಂತ್ರಿಸುತ್ತದೆ ಹಾಗೂ ನಡೆಸುತ್ತದೆ.





ಮೀಡಿಯಾ ಕಂಟೆಂಟ್ ಎಂಡ್ ಕಮ್ಯುನಿಕೇಷನ್ಸ್ ಸರ್ವಿಸಸ್ ಎಂಬ ಈ ಶೆಲ್ ಕಂಪನಿಯು ರೂಪರ್ಟ್ ಮುರ್ಡೋಕ್‌ನ ಮಾಧ್ಯಮ ಸಾಮ್ರಾಜ್ಯದ ಏಶಿಯಾ ಖಂಡದ ಅಂಗಸಂಸ್ಥೆಯಾಗಿರುವ ಸ್ಟಾರ್ ಟಿವಿಯ'ಭಾರತೀಯ ಮುಖ'. ಇಂತಹ ನಾಚಿಕೆಗೆಟ್ಟ ತಂತ್ರದ ಬಗ್ಗೆ ವ್ಯಾಪಕ ಟೀಕೆಗಳು ಬಂದ ಮೇಲೆ, ಈಗ ತನ್ನ ಶೇರು ಬಂಡವಾಳವನ್ನು 6 ಕೋಟಿ ರೂಪಾಯಿಗಳಿಗೆ ಏರಿಸಿರುವುದಾಗಿ ಸ್ಟಾರ್ ಘೋಷಿಸಿದೆ. ಅದರ ಸರಿಸಮಾನ ಅನೇಕ ಟಿವಿ ಚಾನಲ್‌ಗಳ ಆಸ್ತಿ ನೂರಾರು ಕೋಟಿ ರೂಪಾಯಿ ಮೌಲ್ಯ ಹೊಂದಿರಬೇಕಾದರೆ, ಇದೂ ಕೂಡಾ ಹಾಸ್ಯಾಸ್ಪದ ಸಂಗತಿಯೇ.

ಈ ನಾಟಕಕ್ಕೆ ಕೊನೆ ಹಾಡುವ ಬದಲು ವಾಜಪೇಯಿ ಸರ್ಕಾರವು ಸ್ಟಾರ್ ನ್ಯೂಸ್ ಚಾನಲ್‌ಗೆ ಪದೇ ಪದೇ ವಿಸ್ತರಣೆ ನೀಡುತ್ತಲೇ ಇದೆ ಹಾಗೂ ಮತ್ತೆ ಮತ್ತೆ ಸ್ಪಷ್ಟನೆಗಳನ್ನು ಕೇಳುತ್ತಲೇ ಇದೆ. ಇರುವ ಅತ್ಯಲ್ಪ ದುರ್ಬಲ ಕಾನೂನು ನಿಯಮಾವಳಿಗಳನ್ನು ಗಾಳಿಗೆ ತೂರುವ ಕಲೆಯಲ್ಲಿ ಅವರು ಎಷ್ಟು ನೈಪುಣ್ಯತೆ ಹೊಂದಿದ್ದಾರೆಂಬುದೇ ತೋರಿಸುತ್ತದೆ. ರೂಪರ್ಟ್ ಮುರ್ಡೋಕ್‌ಗೆ ಬಿಜೆಪಿ ನೇತೃತ್ವದ ಸರ್ಕಾರದೊಂದಿಗೆ ಎಂತಹ ಸಂಬಂಧವಿದೆಯೆಂದು ಈಗಾಗಲೇ ಮುರ್ಡೋಕ್ ನಡೆಸುತ್ತಿರುವ ಶೇ 74 ಭಾರತೀಯ ಶೇರುಗಳನ್ನು ಹೊಂದಿರುವ ಶೆಲ್ ಕಂಪನಿಯು ಅನೇಕ ಸರಣಿ ಎಫ್.ಎಂ. ರೇಡಿಯೋ ಸ್ಟೇಷನ್‌ಗಳನ್ನು ನಡೆಸುತ್ತಿದೆ. ಇದರ ಮುಸುಕಿನಡಿಯಲ್ಲಿ ಸ್ಟಾರ್ ನಾಲ್ಕು ಎಫ್.ಎಂ. ರೇಡಿಯೋ ಸ್ಟೇಷನ್‌ಗಳನ್ನು ನಮ್ಮ ದೇಶದಲ್ಲೇ ನಡೆಸುತ್ತಿದೆ. ಕೇಬಲ್ ಆಪರೇಟರುಗಳ ಅಗತ್ಯವೇ ಇಲ್ಲದೆ ನೇರವಾಗಿ ಮನೆಗೆ (DTH) ತಂತ್ರಜ್ಞಾನವನ್ನು ಅಳವಡಿಸಲು ಸ್ಟಾರ್ ಸಲ್ಲಿಸಿರುವ ಅರ್ಜಿಯನ್ನು ಪುರಸ್ಕರಿಸಲು ವಾಜಪೇಯಿ ಸರ್ಕಾರ ತುದಿಗಾಲ ಮೇಲೆ ನಿಂತಿದೆ. ಡಿಟಿಹೆಚ್ ಲೈಸೆನ್ಸಿಗಾಗಿ ಸಲ್ಲಿಸಿರುವ ಅರ್ಜಿಯಲ್ಲಿ ಒಂದು ಶೆಲ್ ಕಂಪನಿಯಲ್ಲಿ ತನ್ನ ಇಬ್ಬರು ನೌಕರರು ಶೇ 74 ಶೇರುಗಳನ್ನು ಹೊಂದಿದಾರೆಂದು ಸ್ಟಾರ್ ತೋರಿಸಿದೆ. ಇಷ್ಟೆಲ್ಲ ಕಣ್ಣಿಗೆ ರಾಚುವಂತಿದ್ದಾಗ್ಯೂ, ಭಾರತದಲ್ಲಿ ಡಿಟಿಹೆಚ್ ಪ್ರಾರಂಭಿಸಲು ಸ್ಟಾರ್ ಗೆ ಸರ್ಕಾರ ಅನುಮತಿ ಪತ್ರವನ್ನು ನೀಡಿದೆ.

ಇದೇ ತಂತ್ರಗಳನ್ನು ಭಾರತದ ಮುದ್ರಣ ಮಾಧ್ಯಮದಲ್ಲೂ ಬಳಸಿ, ಒಂದು ದೊಡ್ಡ ವೃತ್ತಪತ್ರಿಕೆಯನ್ನು ಮುರ್ಡೋಕ್ ವಶಪಡಿಸಿಕೊಳ್ಳುವ ಕಾಲ ಬಹಳ ದೂರವೇನಿಲ್ಲ. ಪಾಶ್ಚಾತ್ಯ ಮಾಧ್ಯಮ ದೊರೆಗಳ ಬೂಟು ನೆಕ್ಕುವ ಪಾಲುದಾರನಾಗಲು ಈಗಾಗಲೇ ಭಾರತದ ಕೆಲವು ವೃತ್ತ ಪತ್ರಿಕೆಗಳ ಮಾಲೀಕರು ಮತ್ತು ಸಂಪಾದಕರು ತಮ್ಮ ಇಂಗಿತ ತೋರಿದ್ದಾರೆ. ಭಾರತದ ಮುದ್ರಣ ಮಾಧ್ಯಮದಲ್ಲಿ ವಿದೇಶಿ ಬಂಡವಾಳ ಹೂಡಿಕೆ ಕುರಿತಾದ ಚರ್ಚೆಗಳಲ್ಲಿ ಇಂಡಿಯನ್ ಎಕ್ಸ್‌ಪ್ರೆಸ್ ಸಂಪಾದಕ ಶೇಖರ್ ಗುಪ್ತ, ಇಂಡಿಯಾ ಟುಡೇ ಸಮೂಹ ಮತ್ತು ದೈನಿಕ ಜಾಗರಣದ ಮಾಲೀಕರಂಥ ಮಹಾನುಭಾವರುಗಳು ವಿದೇಶಿ ಬಂಡವಾಳ ಹೂಡಿಕೆ ಪರವಾಗಿ ವಕಾಲತ್ತು ಮಾಡುವವರಲ್ಲಿ ಮುಂದಿನ ಸಾಲಿನಲ್ಲಿದ್ದರು.

ರೂಪರ್ಟ್ ಮುರ್ಡೋಕ್ ಭಾರತದ ಮಾಧ್ಯಮದಲ್ಲಿ ನುಸುಳಿ ಅದರ ಯಜಮಾನಿಕೆಯನ್ನು ಪಡೆಯುವುದು ಭಾರತದ ಪತ್ರಿಕೋದ್ಯಮ ಮತ್ತು ದೂರದರ್ಶನದ ಮಾಲೀಕರ ಹಿತಾಸಕ್ತಿಗೆ ಮಾತ್ರ ಗಂಭೀರ ಪರಿಣಾಮಗಳನ್ನು ಬೀರುವುದಿಲ್ಲ. ಇಂತಹ





ಜಾಗತಿಕ ಬಂಡವಾಳ ಹಾಗೂ ಮಾಧ್ಯಮದ ಲಾಭ ಬಡುಕರು ನಮ್ಮ ದೇಶದ ಪ್ರಜಾಸತ್ತಾತ್ಮಕ ಹಾಗೂ ರಾಜಕೀಯ ತಳಪಾಯವನ್ನು ಬುಡಮೇಲು ಮಾಡುವ ಶಕ್ತಿ ಉಳ್ಳವರು. ಮೂರು ಖಂಡಗಳಲ್ಲಿ 175 ಕ್ಕೂ ಹೆಚ್ಚಿನ ಆಸ್ತಿ ಹಕ್ಕನ್ನು ಹೊಂದಿರುವ ನ್ಯೂಸ್ ಕ್ರಾಪ್ ಎಂಬ ಕಂಪನಿಯ ಅಧ್ಯಕ್ಷ ಮುರ್ಡೋಕ್ ಎಂಬುದನ್ನು ಮರೆಯಬಾರದು. ಬ್ರಿಟನ್, ಆಸ್ಟ್ರೇಲಿಯ ಮತ್ತು ನ್ಯೂಜಿಲೆಂಡ್‌ನ ಮುದ್ರಣ ಮಾಧ್ಯಮದಲ್ಲಿ ಅವನದೇ ಪ್ರಾಬಲ್ಯವಿದೆ. ಅಮೆರಿಕದ ಸ್ಟಾರ್ಸ್ ಚಾನಲ್‌ಗೆ ಹಾಗೂ ಬ್ರಿಟನ್‌ನ ಸ್ಕೈ ಟಿವಿಗೆ ಮುರ್ಡೋಕ್‌ನೇ ಒಡೆಯ. ಎಲ್ಲೆಲ್ಲಿ ಅವನು ತನ್ನ ಒಡೆತನವನ್ನು ಮುದ್ರಣ ಹಾಗೂ ಟಿವಿ ಮಾಧ್ಯಮಗಳಲ್ಲಿ ಹೊಂದಿದ್ದಾನೋ ಆ ದೇಶಗಳಲ್ಲೆಲ್ಲಾ ಆಂತರಿಕ ರಾಜಕೀಯದಲ್ಲಿ ಅವನು ತನ್ನ ಮೂಗು ತೂರಿಸುತ್ತಿದ್ದಾನೆ. ಬ್ರಿಟನ್ನಿನಲ್ಲಿ ಬ್ಲೇರ್‌ಗೆ ಹಾಗೂ ಅಮೆರಿಕದಲ್ಲಿ ಬುಷ್‌ಗೆ ಅವನ ಬೆಂಬಲವಿರುವುದು ಎಲ್ಲರಿಗೂ ತಿಳಿದ ವಿಷಯವೇ. ಇರಾಕ್ ವಿರುದ್ಧದ ಯುದ್ಧವನ್ನು ಮುರ್ಡೋಕ್ ಎಷ್ಟರ ಮಟ್ಟಿಗೆ ಸಮರ್ಥಿಸುತ್ತಿದ್ದನೆಂದರೆ ಸಿಎನ್‌ಎನ್ ಚಾನಲ್‌ನ ಹಿಂದಿನ ಅಧ್ಯಕ್ಷ ಮುರ್ಡೋಕ್‌ರನ್ನು 'ಯುದ್ಧ ಖೋರ' ಎಂದು ಕರೆದಿದ್ದ. ಇರಾಕ್‌ನಲ್ಲಿ ಯುದ್ಧ ಪ್ರಾರಂಭವಾಗುವುದಕ್ಕೆ ಕೆಲವು ವಾರಗಳ ಮುಂಚೆಯಷ್ಟೇ ದಿ ಗಾರ್ಡಿಯನ್ ಪತ್ರಿಕೆಯು "ಇರಾಕ್ ವಿರುದ್ಧ ಯುದ್ಧದ ಪರವಾಗಿ ಮುರ್ಡೋಕ್ ಈ ವಾರ ಎಷ್ಟು ಗಟ್ಟಿಯಾಗಿ ತನ್ನ ವಾದ ಮಂಡಿಸಿದನೆಂದರೆ ವಿಶ್ವಾದ್ಯಂತ 175 ಸಂಪಾದಕರು ಯುದ್ಧದ ಬೆಂಬಲವಾಗಿ ಏಕೆ ಬರೆದರೆಂಬುದು ನಮಗೆ ಅರ್ಥವಾಗುತ್ತದೆ' ಎಂದು ಟೀಕಿಸಿತ್ತು. ಒಂದು ಪತ್ರಿಕೆಯನ್ನು ಮುರ್ಡೋಕ್ ನಾಳೆ ಕೊಂಡುಕೊಂಡರೆ, ಭಾರತೀಯ ಮುರ್ಡೋಕ್ ನಿಲುವನ್ನು ಗುಲಾಮರಂತೆ ಸಮರ್ಥಿಸುವ ಸಂಪಾದಕರಿಗೇನೂ ಕೊರತೆಯಿಲ್ಲ.

ಮುರ್ಡೋಕ್ ನಿಯಂತ್ರಣದ ಮಾದ್ಯಮ ಬಿಜೆಪಿ ನೇತೃತ್ವದ ಸರ್ಕಾರವನ್ನು ಬೆಂಬಲಿಸುತ್ತದೆ. ಅಥವಾ ಅವನ ವಾಣಿಜ್ಯ ಹಿತಾಸಕ್ತಿಯನ್ನು ರಕ್ಷಿಸಲು ಮುಂದಾಗುವ ಯಾವುದೇ ಸರ್ಕಾರವನ್ನು ಅವನು ಬೆಂಬಲಿಸುತ್ತಾನೆ. ತಾನೆ ರಚಿಸಿದ ಕಾನೂನು ಕಟ್ಟಳೆಗಳನ್ನು ತಾನೇ ತಿರುಚಿ ವಾಜಪೇಯಿ ಸರ್ಕಾರ ನಮ್ಮ ದೇಶದ ಮಾಧ್ಯಮದ ಮಾಲಕರಿಗೆ ಮಾತ್ರ ಅಪಾಯ ತಂದೊಡ್ಡಿಲ್ಲ, ಇಡೀ ಭಾರತದ ಪ್ರಜಾಸತ್ತಾತ್ಮಕ ವ್ಯವಸ್ಥೆಗೇ ಹಾಗೂ ರಾಜಕೀಯ ಸಮಗ್ರತೆಗೆ ದೊಡ್ಡ ಆಘಾತ ತರುತ್ತಿದ್ದಾರೆ. ಈ ಹಂತದಲ್ಲೂ ಸರ್ಕಾರ ತೆಗೆದುಕೊಳ್ಳಬೇಕಾದ ಸರಿಯಾದ ಕ್ರಮವೇನೆಂದರೆ ಸ್ಟಾರ್‌ನ ಅರ್ಜಿಯನ್ನು ತಿರಸ್ಕರಿಸಬೇಕು ಮತ್ತು ನಮ್ಮ ದೇಶದ ಮುದ್ರಣ ಹಾಗೂ ವಿದ್ಯುನ್ಮಾನ ಮಾಧ್ಯಮಗಳ ಕೆಲವು ವಿಭಾಗಗಳ ಮೇಲೆ ಶೆಲ್ ಕಂಪನಿಗಳು ಅಧಿಪತ್ಯ ನಡೆಸುವುದನ್ನು ತಡೆ ಹಿಡಿಯಬೇಕು. ●

ಕೋರ್ಟು ತೀರ್ಮಾನವೊಂದೇ ಪರಿಹಾರ

ಅಯೋಧ್ಯ ವಿವಾದ

ತಾನು ಆರ್‌ಎಸ್‌ಎಸ್.ನ ಶಿಸ್ತಿನ ಸ್ವಯಂ ಸೇವಕ ಎಂಬುದನ್ನು ಪ್ರಧಾನ ಮಂತ್ರಿ ವಾಜಪೇಯಿ ಇನ್ನೊಮ್ಮೆ ಸ್ಪಷ್ಟ ಪಡಿಸಿದರು. ರಾಮಜನ್ಮ ಸ್ಥಾನದಲ್ಲಿ ಅದ್ದೂರಿಯಾದ ದೇವಸ್ಥಾನವನ್ನು ಕಟ್ಟಿಸಲಾಗುವುದು ಎಂದು ಅಯೋಧ್ಯೆಯಲ್ಲಿ ಘೋಷಿಸಿದುದು ಮಾತ್ರವಲ್ಲದೆ ವಿವಾದಿತ ಸ್ಥಳದಲ್ಲಿ ದೇವಾಲಯ ಕಟ್ಟುವುದನ್ನು ವಿರೋಧಿಸುವವರನ್ನು ಹೀಯಾಳಿಸಿದರು.

ಅದೇ ಸಂದರ್ಭದಲ್ಲಿ ಮಾತನಾಡಿದ ಉಪ ಪ್ರಧಾನಿ ಅಡ್ವಾನಿಯವರು ದೇವಾಲಯ ಕಟ್ಟುವುದು ರಾಷ್ಟ್ರೀಯ ಸಮಸ್ಯೆಯಾಗಿದ್ದು, ಇದೊಂದು 'ರಾಷ್ಟ್ರೀಯ ಮನೋಭಾವದ ಪ್ರತೀಕ' ಎಂದು ಕೆಲವರ್ಷಗಳ ಹಿಂದೆ ಲೋಕಸಭೆಯಲ್ಲಿ ವಾಜಪೇಯಿ ಹೇಳಿದುದನ್ನು ನೆನಪಿಸಿದರು. 'ಹಿಂದೂ ಮನೋಭಾವ ಮಾತ್ರವೇ ರಾಷ್ಟ್ರೀಯ ಮನೋಭಾವ ಎಂದು ರಾಷ್ಟ್ರೀಯ ಸ್ವಯಂ ಸೇವಕ ಹೇಳುವುದನ್ನೇ ಅಡ್ವಾನಿ ಪ್ರತಿಪಾದಿಸುತ್ತಿದ್ದಾರೆ. ಪ್ರಧಾನ ಮಂತ್ರಿ ಮತ್ತು ಉಪ ಪ್ರಧಾನಿಯವರ ಹೇಳಿಕೆಗಳು ಸಂವಿಧಾನದ ಆಶಯಕ್ಕೆ ವಿರುದ್ಧವಾಗಿದ್ದು, ಮುಗ್ಧ ಜನರನ್ನು ತಪ್ಪುದಾರಿಗೆಳೆಯುವಂತದ್ದು.

ಅಕ್ಟೋಬರ್ ನಲ್ಲಿ ನಡೆಯಲಿರುವ ನಾಲ್ಕು ರಾಜ್ಯಗಳ ವಿಧಾನಸಭಾ ಚುನಾವಣೆಗಳನ್ನು ಗಮನದಲ್ಲಿಟ್ಟು ಇಂತಹ ಹೇಳಿಕೆಗಳನ್ನು ನೀಡಲಾಗುತ್ತಿದೆ. ಮುಗ್ಧ ಜನರು ಸಂಘ ಪರಿವಾರದವರು ಪ್ರಚೋದಿಸುತ್ತಿರುವ ಕೋಮು ಭಾವನೆಗೆ ಬಲಿ ಬೀಳಬಾರದು, ಬದಲಾಗಿ ನ್ಯಾಯಾಂಗ ಪ್ರಕ್ರಿಯೆಯ ಮೂಲಕವೇ ಸಮಸ್ಯೆಗೆ ಪರಿಹಾರ ಕಾಣ ಬೇಕಾಗಿದೆ.

ಕೃಷಿ ರಂಗದ ಪರಿಸ್ಥಿತಿ ಆಸ್ಫೋಟಕಾರಿ-ಆಘಾತಕಾರಿ. ರೈತ-ಕೂಲಿಕಾರರು, ಅವರ ಕುಟುಂಬವೇ ಸಾವಿನ ದವಡೆಗೆ ಸಿಕ್ಕಿದೆ. ದಾರಿಕಾಣದೆ ಆತ್ಮಹತ್ಯೆಗೆ ಮೊರೆ ಹೋಗುತ್ತಿದ್ದಾರೆ. ರೋಗರುಜಿನಗಳು, ಹಸಿವಿನ ಸಾವು ಹೆಚ್ಚುತ್ತಿವೆ. ಇದು ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಬಂಗಾಳದ ಬರದ ಭೀಕರತೆಯ ಕಾಲದಲ್ಲಿಯೂ ಇದ್ದ ತಲಾ ಆಹಾರದ ಲಭ್ಯತೆಗಿಂತಲೂ ಈಗ ಕಡಿಮೆಯಾಗಿದೆ. ಈ ಧಾರುಣ ಸ್ಥಿತಿಯಲ್ಲಿ ಕೃಷಿ ಬಿಕ್ಕಟ್ಟಿಗೂ ಆಳುವವರ ನೀತಿಗಳಿಗೂ ಸಂಬಂಧಗಳನ್ನು ಗುರುತಿಸಿ ಅವುಗಳ ವಿರುದ್ಧ ಜನತೆಯನ್ನು ಉಳಿಸುವ ಹೋರಾಟ ಬೃಹತ್ತಾಗಿ ಹೊಮ್ಮಬೇಕು ಎಂದು ಕರೆ ನೀಡಿದ್ದಾರೆ

ಎಸ್.ರಾಮಚಂದ್ರ ಪಿಳ್ಳೆಯವರು

ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದ ಕೃಷಿ ಧೋರಣೆಗಳು ಕೃಷಿ ವಲಯವನ್ನು ಒಂದು ಗಂಭೀರ ಬಿಕ್ಕಟ್ಟಿನಲ್ಲಿ ಸಿಲುಕಿಸಿವೆ. ಹಸಿವಿನಿಂದ ಸಾವು, ರೈತರ, ಕೃಷಿ ಕೂಲಿಕಾರರ ಆತ್ಮಹತ್ಯೆಗಳು ಹೆಚ್ಚುತ್ತಿವೆ. ಬಡತನ ಎಂಬುದು ಹೊಸ-ಹೊಸ ಪ್ರದೇಶಗಳಿಗೆ, ವಿಭಾಗಗಳಿಗೆ ಹರಡುತ್ತಿದೆ. ಇನ್ನಷ್ಟು ವೇಗವಾಗಿ ಜನ ಕಡು ಬಡವರಾಗುತ್ತಿದ್ದಾರೆ. ನಿರುದ್ಯೋಗ ಹೆಚ್ಚುತ್ತಿದೆ. ದೇಶ ತೀವ್ರಗತಿಯಲ್ಲಿ ಆಹಾರ ಕೊರತೆ, ಬರ, ಹಸಿವಿನಿಂದ ಸಾವುಗಳತ್ತ ಧಾವಿಸುತ್ತಿದೆ. ಪ್ರತಿ ವರ್ಷ ಪ್ರವಾಹಗಳು, ಬರಗಳು - ವರ್ಷ ಕಳೆದಂತೆ ಅವೂ ತೀವ್ರಗೊಳ್ಳುತ್ತಿವೆ. ಸಾಂಕ್ರಾಮಿಕ ಕಾಯಿಲೆಗಳು ಮತ್ತೆ ತಲೆ ಎತ್ತುತ್ತಿವೆ. ಬೆಳವಣಿಗೆಯಲ್ಲಿ ಅಸಮಾನತೆ ಎಲ್ಲಾ ವಲಯಗಳಲ್ಲಿ, ಎಲ್ಲಾ ಪ್ರದೇಶಗಳಲ್ಲಿ ಹೆಚ್ಚುತ್ತಿದೆ. ವಿಶ್ವದ ಬಡವರಲ್ಲಿ ಶೇ 22 ಭಾರತದಲ್ಲೇ ಇದ್ದಾರೆ. ಗ್ರಾಮೀಣ ಬಡವರಲ್ಲಿ ಬಹುಪಾಲು ಕೃಷಿ ಕೂಲಿಕಾರರು, ಬಡ ಮತ್ತು ಮಧ್ಯಮ ರೈತರು ಹಾಗೂ ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿರುವ ಕ್ಯಾಶುವಲ್ ಕಾರ್ಮಿಕರು.



ಮೂರು ವರ್ಷದ ಕೆಳಗಿನ ಮಕ್ಕಳಲ್ಲಿ ಅರ್ಧದಷ್ಟು (47 ಶೇ) 'ಕುಪೋಷಣೆ'ಯಿಂದ ನರಳುತ್ತಿದ್ದಾರೆ. ವಾಸ್ತವತೆ ಈ 'ಕುಪೋಷಣೆ'ಯೆಂಬುದು ಹಸಿವಿಗೆ ಇನ್ನೊಂದು ಹೆಸರು. ಮಹಿಳೆಯರಲ್ಲಿ ಶೇ 50 ರಷ್ಟು, ಮಕ್ಕಳಲ್ಲಿ ಶೇ 74 ರಷ್ಟು ರಕ್ತಹೀನತೆಯಿಂದ ಬಳಲುತ್ತಿದ್ದಾರೆ.

ಸ್ವಾತಂತ್ರ್ಯದ ನಂತರ ಆಹಾರ ಧಾನ್ಯ ಉತ್ಪಾದನೆಯಲ್ಲಿ ಮಾಡಿದ ಪ್ರಗತಿಯ ಬಗ್ಗೆ ಭಾರತ ಹೆಮ್ಮೆ ಪಡುತ್ತಿತ್ತು. ಆದರೆ ಈಗ ಪರಿಸ್ಥಿತಿ ಗಮನಾರ್ಹವಾಗಿ ಬದಲಾಗಿದೆ-ವಿಶೇಷವಾಗಿ 1991 ರಿಂದ ಹೊಸ ಆರ್ಥಿಕ ಮತ್ತು ಕೃಷಿ ನೀತಿಗಳನ್ನು ಆರಂಭಿಸಿದಂದಿನಿಂದ. 1990 ರ ದಶಕದಲ್ಲಿ ತಲಾ ಆಹಾರ ಮಟ್ಟ ಇಳಿದಿದೆಯಷ್ಟೇ ಅಲ್ಲ, 2002-03 ರಲ್ಲಿ ಸಿಗುತ್ತಿರುವ ತಲಾ ಆಹಾರ ಎರಡನೇ ಮಹಾಯುದ್ಧದ ವೇಳೆಯಲ್ಲಿ ಕಂಡ ಭಯಾನಕ ಬಂಗಾಳ ಬರದ ವರ್ಷಗಳಲ್ಲಿ ಸಿಗುತ್ತಿದ್ದ ಆಹಾರಕ್ಕಿಂತಲೂ ಕಡಿಮೆ ಎಂದು ತಜ್ಞರೊಬ್ಬರು ಹೇಳಿದ್ದಾರೆ.

ಇದೇ ಪರಿಸ್ಥಿತಿಯ ಗಂಭೀರತೆಯನ್ನು ಎತ್ತಿ ತೋರುತ್ತಿದೆ. ಕಳೆದ ದಶಕದಲ್ಲಿ ಆಹಾರ ಉತ್ಪಾದನೆಯ ಬೆಳವಣಿಗೆಯ ದರ (1.1ಶೇ) ಜನಸಂಖ್ಯೆಯ ಬೆಳವಣಿಗೆ ದರ (1.9 ಶೇ) ಕ್ಕಿಂತ ಕಡಿಮೆಯಾಗಿದೆ. ಭಾರತ ಸರ್ಕಾರದ 2002-03 ರ ಆರ್ಥಿಕ ಸರ್ವೇಕ್ಷಣೆಯ ಪ್ರಕಾರವೂ 1991 ರಲ್ಲಿ ತಲಾ 510.1 ಗ್ರಾಂ ಆಹಾರಧಾನ್ಯಗಳು ಸಿಗುತ್ತಿದ್ದರೆ, 2001 ರಲ್ಲಿ ಅದು 414.1 ಗ್ರಾಂ ಕ್ಕಿಳಿದಿದೆ. ದೇಶದ ಹಲವು ಭಾಗಗಳಲ್ಲಿನ ಬರ ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸಲಿದೆ.

'ಉದಾರ' ಧೋರಣೆಗಳ ಫಲ


ಆಹಾರ ದಾಸ್ತಾನು ಹೆಚ್ಚಿರುವುದು ಹೆಚ್ಚು ಆಹಾರ ಉತ್ಪಾದನೆಯಿಂದಲ್ಲ. ಬದಲಾಗಿ ಗ್ರಾಮೀಣ ಬಡವರ ಕೊಳ್ಳುವ ಶಕ್ತಿ ಇಳಿದಿರುವುದರಿಂದಾಗಿ. ಉದಾರೀಕರಣ ನೀತಿಗಳಿಂದಾಗಿ ಅವರ ಕೊಳ್ಳುವ ಶಕ್ತಿ ಕ್ಷೀಣಗೊಂಡಿದೆ.

ವಾಸ್ತವವಾಗಿ ಆಹಾರ ಉತ್ಪಾದನೆ ಇಳಿಮುಖವಾಗುತ್ತಿದೆ. ಉತ್ಪಾದಕತೆಯೂ ಇಳಿಮುಖವಾಗುತ್ತಿದೆ. ಇವಕ್ಕೆಲ್ಲಾ ಕಾರಣ ಹೊಸ ಆರ್ಥಿಕ ಮತ್ತು ಕೃಷಿ ನೀತಿಗಳೇ. ಈ ಹಿಂದೆ ನೀರಾವರಿ, ವಿದ್ಯುತ್, ಕೃಷಿ ಸಂಶೋಧನೆ, ರಸ್ತೆಗಳು, ಮಾರುಕಟ್ಟೆಗಳು, ಸಂಪರ್ಕ ಇತ್ಯಾದಿಗಳನ್ನು ಅಭಿವೃದ್ಧಿ ಪಡಿಸುವಲ್ಲಿ ಸಾರ್ವಜನಿಕ ಹಣ ಹೂಡಿಕೆ ಪ್ರಮುಖ ಪಾತ್ರ ವಹಿಸುತ್ತಿತ್ತು. ಆದರೆ ಈಗ ಹೊಸ ನೀತಿಗಳ ಅನುಷ್ಠಾನದ ನಂತರ ಇವೆಲ್ಲಾ ಇಳಿಮುಖವಾಗುತ್ತಿದೆ. 1993-94 ರಲ್ಲಿ ಒಟ್ಟು ರಾಷ್ಟ್ರೀಯ ಉತ್ಪನ್ನದ 1.6 ಶೇ. ರಷ್ಟು ಕೃಷಿಯಲ್ಲಿ ಹಣ ತೊಡಗಿಸುತ್ತಿದ್ದಾರೆ. ಈಗ ಅದು 1.3 ಶೇ ಕ್ಕೆ ಇಳಿದಿದೆ.

ಇದರೊಂದಿಗೆ ಹೆಚ್ಚಿನ ಕೃಷಿ ಉತ್ಪನ್ನಗಳಿಗೆ ಸಿಗುವ ಬೆಲೆಗಳಲ್ಲಿ ತೀವ್ರ ಇಳಿಕೆ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸಿದೆ. ಇದಕ್ಕೆ ಕಾರಣ ಆಮದಿನ ಪ್ರಮಾಣದ ಮೇಲಿದ್ದ ಮಿತಿಗಳನ್ನು ತೆಗೆದುಹಾಕಿದ್ದು ಮತ್ತು ಇತರ ಕೆಲವು ಕಾರಣಗಳು. ಸರಕಾರ ಇಂತಹ ಕೃಷಿಕರ ನೆರವಿಗೆ ಬರುತ್ತಿಲ್ಲ. ಇದು ಕೃಷಿಯಲ್ಲಿ ಉತ್ಪಾದಕತೆ ಹೆಚ್ಚಿಸುವ ಹಣ ಹೂಡಿಕೆಯ ಮೇಲೂ ಪ್ರಭಾವ ಬೀರುತ್ತಿದೆ. ಆಹಾರ ಧಾನ್ಯಗಳ ಬದಲು ಇತರ ಕೃಷಿಗೆ, ಶ್ರಮ ಹೆಚ್ಚು ಪ್ರಮಾಣದಲ್ಲಿ ಬೇಕಾಗುವ ಬೆಳೆಗಳ ಬದಲು ಕಮ್ಮಿ ಶ್ರಮದ ಬೆಳೆಗಳತ್ತ ಒಲವು ಹೆಚ್ಚುತ್ತಿರುವ ಸಂಕೇತಗಳಿವೆ.

ಗ್ರಾಮೀಣ ಬಡವರ ಪರಿಸ್ಥಿತಿ

ಗ್ರಾಮೀಣ ಭಾಗಗಳಲ್ಲಿ ನಿರುದ್ಯೋಗ ದರ ಹೆಚ್ಚುತ್ತಿದೆ. ಏಕೆಂದರೆ ಉದ್ಯೋಗದ ಬೆಳವಣಿಗೆಯ ವಾರ್ಷಿಕ ದರ 1990 ರ ದಶಕದಲ್ಲಿ ಇಳಿದಿದೆ. ಇದು ಕೇವಲ 0.58 ಶೇ. ಅಂದರೆ ಜನಸಂಖ್ಯಾ ಬೆಳವಣಿಗೆಗಿಂತ ಎಷ್ಟೋ ಕಮ್ಮಿ. ಅಂದರೆ ಈ ಅವಧಿಯಲ್ಲಿ ನಿರುದ್ಯೋಗಿಗಳ ಸಂಖ್ಯೆ ದೊಡ್ಡ ಪ್ರಮಾಣದಲ್ಲಿ ಬೆಳೆದಿದೆ. ಉತ್ಪಾದನೆಯಲ್ಲಿ ಇಳಿಕೆ,



ಬೆಲೆಗಳಲ್ಲಿ ತೀವ್ರ ಇಳಿಕೆ, ಸಾಲ ಸೌಲಭ್ಯಗಳ ಅಭಾವ, ಕೃಷಿ ಲಾಗುವಾಡುಗಳ ಬೆಲೆಗಳಲ್ಲಿ ಏರಿಕೆ, ಮಾರುಕಟ್ಟೆ ರಕ್ಷಣೆ ಕ್ರಮಗಳ ಅಭಾವ, ಮತ್ತೆ ಮತ್ತೆ ಬರ-ಪ್ರವಾಹ, ಕೀಟಗಳು ಇತ್ಯಾದಿಗಳಿಂದಾಗಿ ರೈತಾಪಿ ಜನಗಳ ಬಡ ವಿಭಾಗಗಳು ಶ್ರೀಮಂತ ವಿಭಾಗಗಳೊಡನೆ ಸ್ಪರ್ಧಿಸಲಾಗದೆ ತಮ್ಮ ಜಮೀನನ್ನು ಅವರು ಮಾರಬೇಕಾದ ಅಥವಾ ಲೀಸಿಗೆ ಕೊಡಬೇಕಾದ ಸ್ಥಿತಿ ಬಂದಿದೆ. ಬಡ ಮತ್ತು ಮಧ್ಯಮ ರೈತರು ಜಮೀನು ಕಳಕೊಳ್ಳುತ್ತಿದ್ದಾರೆ. ಭೂ ಹೀನರ ಸಂಖ್ಯೆ 1991 ರಲ್ಲಿ 7.46 ಕೋಟಿ ಇದ್ದದ್ದು 2001 ರಲ್ಲಿ 10.74 ಕೋಟಿಗೇರಿದೆ.

ಕೃಷಿ ಕೂಲಿಕಾರರಿಗೆ ಕೆಲಸ ಸಿಗುವ ದಿನಗಳು ಕಮ್ಮಿಯಾಗಿವೆ, ಕೂಲಿ ದರಗಳೂ ಕಮ್ಮಿಯಾಗಿವೆ. ಕನಿಷ್ಟ ಕೂಲಿಯಿಲ್ಲ, ಸಾಮಾಜಿಕ ಭದ್ರತೆಯ ಯಾವ ಸೌಲಭ್ಯಗಳೂ ಇಲ್ಲ. ವ್ಯಾಪಕ ಕೃಷಿ ಯಾಂತ್ರೀಕರಣದಿಂದ ಉದ್ಯೋಗವಕಾಶಗಳೂ ಲಕ್ಷಾಂತರ ಕೃಷಿ ಕಾರ್ಮಿಕರ ಬಗ್ಗೆ ಕೆಲಸವಿಲ್ಲದಂತಾಗಿದೆ. 'ಕೆಲಸಕ್ಕಾಗಿ ಆಹಾರ' ದಂತಹ ಗ್ರಾಮೀಣ ಉದ್ಯೋಗ ಕಾರ್ಯಕ್ರಮಗಳು ಕೂಡಾ ಯಂತ್ರಗಳನ್ನು ಬಳಸುವ ಕಂಟ್ರಾಕ್ಟರುಗಳಿಗೆ ನೀಡಿ ಅದರ ಮೂಲ ಉದ್ದೇಶವನ್ನೇ ವಿಫಲಗೊಳಿಸಿದೆ. ಯಂತ್ರಗಳು ಮಾಡಲಾಗದ ಕೆಲಸಗಳನ್ನು ಮಾತ್ರ, ಅದೂ ಅತಿ ಕಡಿಮೆ ಕೂಲಿಗೆ ಕೊಡಲಾಗುತ್ತಿದೆ. ಕಡಿಮೆ ಶ್ರಮದ ಬೆಳೆಗಳತ್ತ ಹೆಚ್ಚುತ್ತಿರುವ ಒಲವು ಕೂಡಾ ಕೃಷಿ ಕೂಲಿಕಾರರನ್ನು ಹೆಚ್ಚೆಚ್ಚು ನಿರುದ್ಯೋಗಿಗಳಾಗಿಸುತ್ತಿದೆ.

ಪ್ರತಿವರ್ಷ ದೇಶದ 10 ಕೋಟಿ ಹೆಕ್ಟೇರ್ ಜಮೀನು ಬರ ಪೀಡಿತ ಅಥವಾ ಪ್ರವಾಹ ಪೀಡಿತವಾಗುತ್ತಿದ್ದು ಇದರಿಂದ ಅತ್ಯಂತ ಹೆಚ್ಚು ಸಂಕಟ ಪಡುವವರು ಗ್ರಾಮೀಣ ಬಡವರು. ಕೇಂದ್ರ ಸರ್ಕಾರ, ಹೆಚ್ಚಿನ ರಾಜ್ಯಸರ್ಕಾರಗಳು ಬರ ಸಂತ್ರಸ್ತರಿಗೆ, ಪ್ರವಾಹ ಸಂತ್ರಸ್ತರಿಗೆ ಸಾಕಷ್ಟು ಪರಿಹಾರಗಳನ್ನು ಕೊಡುವುದಿಲ್ಲ, ಬರ, ಪ್ರವಾಹಗಳನ್ನು ತಡೆಯಲು ಕ್ರಮಗಳನ್ನು ಕೈಗೊಳ್ಳುವುದಿಲ್ಲ.

ಸರ್ಕಾರ ಹೇರಿರುವ ಸಮಸ್ಯೆಗಳು

ಭೂಮಿ, ನೀರಿನಂತಹ ಪ್ರಾಕೃತಿಕ ಸಂಪನ್ಮೂಲಗಳ ಸಮಸ್ಯೆಗಳನ್ನು ಎದುರಿಸುವಲ್ಲಿ ಸರಕಾರದ ನೀತಿಗಳು ವಿಫಲವಾಗಿವೆ. ಭಾರತದಂತಹ ದೇಶದಲ್ಲಿ ಇಂತಹ ಸಮಸ್ಯೆಗಳನ್ನು ಪರಿಹರಿಸಬೇಕಾದ್ದು ಬಹಳ ಮುಖ್ಯವಾಗುತ್ತದೆ.

ಏಕೆಂದರೆ ವಿಶ್ವದ ಶೇ 16 ಜನಸಂಖ್ಯೆಗೆ ಉಣ್ಣಿಸಲು ಇರುವ ಜಮೀನು ವಿಶ್ವದ ಒಟ್ಟು ಭೂಮಿಯ ಶೇ2.4 ಮಾತ್ರ ಹಾಗೂ ನೀರಿನ ಸಂಪನ್ಮೂಲ ಶೇ 4 ಮಾತ್ರ. ಒಟ್ಟು ಸಾಗುವಳಿ ಯೋಗ್ಯಜಮೀನಿನ ಶೇ 40 ಕ್ಕೆ ಮಾತ್ರ ನೀರಾವರಿ ಸಾಧ್ಯ. ಉಳಿದದ್ದು ಮಳೆಯನ್ನು ಅವಲಂಬಿಸಿದೆ. ಭೂಮಿಯೊಳಗಿನ ಜಲಸಂಪನ್ಮೂಲಗಳು ವಿಪರೀತ ಬಳಕೆ ಇತ್ಯಾದಿಗಳಿಂದ ತ್ವರಿತವಾಗಿ ಬತ್ತಿ ಹೋಗುತ್ತಿವೆ. ನಮ್ಮ ಒಟ್ಟು 32.873 ಕೋಟಿ ಹೆಕ್ಟೇರ್ ಭೌಗೋಳಿಕ ಪ್ರದೇಶದಲ್ಲಿ 10.74 ಕೋಟಿ ಹೆಕ್ಟೇರು ಬರಡಾಗಿದೆ

ಕೃಷಿ ತೀವ್ರ

ಎಂದು ಪರಿಗಣಿಸಲಾಗಿದೆ. ಸರಕಾರ ಅಭಿವೃದ್ಧಿ ಚಟುವಟಿಕೆಗಳಿಂದ ಹಿಂದೆಗೆಯುವ ಈಗಿನ ನೀತಿಗಳಿಂದ ಇವೆಲ್ಲಾ ಕಷ್ಟಗಳು ಇನ್ನಷ್ಟು ಉಲ್ಬಣಗೊಂಡಿವೆ.

ವಿದ್ಯುತ್ ಕೊರತೆ ಮತ್ತು ವಿಪರೀತ ವಿದ್ಯುತ್ ದರಗಳು ಇನ್ನೊಂದು ಸಮಸ್ಯೆ. ರೈತರಿಗೆ ಸತತ ವಿದ್ಯುತ್ ಪೂರೈಕೆಯ ಕೊರತೆ ದೇಶದ ಹಲವು ಭಾಗಗಳಲ್ಲಿನ ತೀವ್ರ ಸಮಸ್ಯೆ. ಕೇಂದ್ರ ಸರ್ಕಾರ ನೀರಾವರಿ, ವಿದ್ಯುತ್, ವೈಜ್ಞಾನಿಕ ಸಂಶೋಧನೆಯ ಮೇಲೆ ಹಣ ಹೂಡಿಕೆಗಳನ್ನು ಕಡಿ... ಮಾಡಿರುವುದಷ್ಟೇ ಅಲ್ಲ, ಇದನ್ನು ದೊಡ್ಡ ಬಂಡವಾಳಿಗರಿಗೆ, ಬಹುರಾಷ್ಟ್ರೀಯ ಕಂಪನಿಗಳಿಗೆ ಹಸ್ತಾಂತರಿಸುವ ಕ್ರಮಗಳನ್ನು ಕೈಗೊಂಡಿದೆ. ಈಗಾಗಲೇ ಛತ್ತೀಸ್ ಗಡ್‌ದ ಶಿವನಾಥ್ ನದಿ ಒಂದು ಬಹುರಾಷ್ಟ್ರೀಯ ಕಂಪನಿಯ ಕೈಗಳಲ್ಲಿದೆ. ನೀರಾವರಿಯೋಜನೆಗಳನ್ನೂ ಖಾಸಗೀಕರಿಸಲು ಕೇಂದ್ರ ಸರ್ಕಾರ,



ಎಸ್.ರಾಮಚಂದ್ರನ್ ಪಿಳ್ಳೆ

ಹಲವು ರಾಜ್ಯ ಸರ್ಕಾರಗಳು ಮುಂದಾಗುತ್ತಿವೆ. ವಿದ್ಯುತ್ ಕಾನೂನು, 2003 ನ್ನು ಬಿಜೆಪಿ ನೇತೃತ್ವದ ಸರಕಾರ ಪಾಸು ಮಾಡಿಸಿಕೊಂಡಿದ್ದು ಇದು ಕೃಷಿ ಮತ್ತು ಗ್ರಾಮೀಣ ಭಾರತದ ಜನಸಾಮಾನ್ಯರ ಮೇಲೆ ತೀವ್ರ ದುಷ್ಪರಿಣಾಮಗಳನ್ನುಂಟು ಮಾಡಲಿದೆ. ಹೆಚ್ಚಿನ ನೀರಿನ, ವಿದ್ಯುತ್ತಿನ ದರಗಳು ಕೃಷಿ ಉತ್ಪಾದಕ... ಮತ್ತು ಉತ್ಪಾದನೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ.

ಎಡ ಸರಕಾರಗಳನ್ನು ಬಿಟ್ಟು ಉಳಿದ ರಾಜ್ಯ ಸರ್ಕಾರಗಳು ಭೂ ಸುಧಾರಣೆ ಕ್ರಮಗಳನ್ನು ಕೈಬಿಟ್ಟಿದೆಯಷ್ಟೇ ಅಲ್ಲ, ಅವನ್ನೀಗ ತಿರುಗುಮುರು... ಗೊಳಿಸಲಾಗುತ್ತಿದೆ. ಭೂಮಿತಿಗಳನ್ನು ಸಡಿಲಗೊಳಿಸಿ ದೊಡ್ಡ ಬಂಡವಾಳಿಗರಿಗೆ, ಬಹುರಾಷ್ಟ್ರೀಯ ಕಂಪನಿಗಳಿಗೆ ವ್ಯಾಪಕ ಪ್ರಮಾಣದಲ್ಲಿ ಜಮೀನನ್ನು ವಶಪಡಿಸಿಕೊಳ್ಳಲು ಅನುವು ಮಾಡಿಕೊಡಲಾಗುತ್ತಿದೆ. ಬಂಜರು ಭೂಮಿಯನ್ನು ಕೃಷಿಕೂಲಿಕಾರರು, ಬಡ ರೈತರಿಗೆ ನೀಡುವ ಬದಲು ದೊಡ್ಡ ಬಂಡವಾಳಿಗರಿಗೆ, ಬಹುರಾಷ್ಟ್ರೀಯ ಕಂಪನಿಗಳಿಗೆ ನೀಡಿ, ಅವರು ಅವನ್ನು ಅಭಿವೃದ್ಧಿ ಪಡಿಸಲು ದೊ...

ಸ್ತುಗಳನ್ನು ನೀಡಲಾಗುತ್ತಿದೆ.
ಸುಧಾರಣೆಯ ಜ್ಯಾರಿ, ಭೂಮಿತಿ
ಮಿಗುತಾಯ ಭೂಮಿಯ ಹಂಚಿಕೆ, ಗೇಣಿ
ಕ್ಕಲೆಬ್ಬಿಸುವಿಕೆಗೆ ತಡೆ, ನ್ಯಾಯಯುತ ಗೇಣಿ
ಇತ್ಯಾದಿಗಳಲ್ಲಿ ರಾಜ್ಯ ಸರ್ಕಾರಗಳದ್ದು
ಶೋಚನೀಯ ದಾಖಲೆ. ಕೇವಲ ಪಶ್ಚಿಮ
, ತ್ರಿಪುರಾ ಮತ್ತು ಕೇರಳ ಸರ್ಕಾರಗಳು
ಈ ನಿಟ್ಟಿನಲ್ಲಿ ಕ್ರಮಗಳನ್ನು ಕೈಗೊಂಡಿವೆ.
ರಾಜ್ಯ ಸರ್ಕಾರಗಳು ಭೂಮಿಯನ್ನು
ಕೊಳ್ಳುವುದರಲ್ಲಾಗಲೀ, ಭೂಸುಧಾರಣಾ
ಗಳಲ್ಲಿನ ತೂತುಗಳನ್ನು ಮುಚ್ಚಲೂ ಏನೂ
ನ್ನು ಕೈಗೊಳ್ಳುತ್ತಿಲ್ಲ. ಕೇಂದ್ರ ಸರ್ಕಾರದ
ಒಂದು ಸುತ್ತೋಲೆಯ ಪ್ರಕಾರ ಹಲವು
ಳಲ್ಲಿ ಬುಡಕಟ್ಟು ಜನಗಳನ್ನು
ಸಲಾಗುತ್ತಿದೆ. ಬುಡಕಟ್ಟು ಜನಗಳ

ಮನುಷ್ಯರ ಮೇಲೆ ಗಂಭೀರ ಪರಿಣಾಮ ಬೀರುವಂತವು. ಬಿಟಿ ಹತ್ತಿಯನ್ನು ಸಾಕಷ್ಟು ಕ್ಷೇತ್ರ ಪ್ರಯೋಗ ನಡೆಸದೆ ರೈತರಿಗೆ ಪೂರೈಸಲಾಗಿದೆ. ಈ ದಿಕ್ಕಿನಲ್ಲಿ ರೈತರ ಮತ್ತು ಕೃಷಿಯ ಹಿತ ರಕ್ಷಣೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಾಕಷ್ಟು ಜಾಗರೂಕತೆ ವಹಿಸುತ್ತಿಲ್ಲ.

ವಿಶ್ವ ವ್ಯಾಪಾರ ಸಂಸ್ಥೆಯನ್ನು ಸ್ಥಾಪಿಸಿದ 1994 ರ ಮರಾಕೇಶ್ ಒಪ್ಪಂದ ಒಂದು ಅಸಮಾನ ಒಪ್ಪಂದ, ರೈತರ ಮತ್ತು ಕೃಷಿಯ ಹಿತಗಳಿಗೆ ವಿರುದ್ಧವಾದ ಒಪ್ಪಂದ. ಭಾರತ ಇದನ್ನು ಜಾರಿಗೆ ತಂದಿದೆ. ಆ ಒಪ್ಪಂದದ ಪ್ರಕಾರ ವಿಧಿಸಿದ ಸಮಯ ಮಿತಿಯು ಬಹಳಷ್ಟು ಮೊದಲೇ ಆಮದಿನ ಪ್ರಮಾಣದ ಮೇಲಿನ ಮಿತಿಗಳನ್ನು ತೆಗೆಯಲಾಗಿದೆ, ಆಮದು ಸುಂಕಗಳನ್ನು ಕಡಿತ ಮಾಡಲಾಗಿದೆ. ಆದರೆ ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ಬರಲಿದೆ.

ಆದ್ದರಿಂದ ಈಗ ನಡೆಯುತ್ತಿರುವ ವಿಶ್ವ ವ್ಯಾಪಾರ ಸಂಸ್ಥೆಯ ಮಾತುಕತೆಗಳಲ್ಲಿ ಭಾರತ ಒಂದು ಗತಿಶೀಲ ಪಾತ್ರ ವಹಿಸಬೇಕು. ಈಗಿರುವ ಪ್ರವೃತ್ತಿಯನ್ನು ತಡೆದು ನಿಲ್ಲಿಸಿ ಕೃಷಿಯ ವಿವಿಧ ಅಂಶಗಳ ಬಗ್ಗೆ ಮರು ಮಾತುಕತೆ ನಡೆಯುವಂತೆ ಚೌಕಾಶಿ ನಡೆಸಬೇಕು. ಅಭಿವೃದ್ಧಿಶೀಲ ದೇಶಗಳ ಮಾರುಕಟ್ಟೆಯಲ್ಲಿ ಪ್ರವೇಶಿಸಲು ಅಭಿವೃದ್ಧಿ ಹೊಂದಿದ ದೇಶಗಳು ಸುಂಕಗಳನ್ನು ಇಳಿಸಬೇಕು ಎಂದು ಒತ್ತಾಯಿಸುತ್ತಿವೆ. ಆದರೆ ಆ ದೇಶಗಳು, ಮುಖ್ಯವಾಗಿ ಅಮೆರಿಕಾ, ಯುರೋಪು ಸಂಘ ಮತ್ತು ಜಪಾನ್ ತಾವು ನೀಡುತ್ತಿರುವ



...ಕ್ಕಟ್ಟು-ಧೋರಣೆಗಳಲ್ಲಿ ...ದಲಾವಣೆಗೆ ಹೋರಾಟ

...ಗೆ ಕೇಂದ್ರ ಸರ್ಕಾರವಾಗಲೀ, ಹಲವು
...ರ್ಕಾರಗಳು ಕೂಡಾ ಏನೂ ಮಾಡುತ್ತಿಲ್ಲ.

...ಬೇಡಿಕೆಗಳು

...ಯ ಉತ್ಪಾದಕತೆ, ಲಾಭದಾಯಕತೆಯನ್ನು
... ಹಣ ಹೂಡಿಕೆಯಾಗುವಂತೆ ಬೆಂಬಲ
... ಸಾಲ ಸೌಲಭ್ಯಗಳನ್ನು ವಿಸ್ತರಿಸಬೇಕು.
...ತ್ರ ರೈತರಿಗೆ ಇಂತಹ ಸೌಲಭ್ಯಗಳು ಸಾಕಷ್ಟು
... ಅವರು ವಿಪರೀತ ಬಡ್ಡಿಯ ಸಾಲಗಳಿಗೇ
...ಗಬೇಕಾಗಿದೆ. ಕೇಂದ್ರ ಸರ್ಕಾರ ಬಡ್ಡಿ
... ಕಡಿತ ಘೋಷಿಸಿದರೂ ಅದರಿಂದ
...ಪ್ರಯೋಜನವಾಗುವುದಿಲ್ಲ. ಸಂಸ್ಥೆಗಳಿಂದ
...ಡೆದ ವಿಭಾಗಗಳಿಗಷ್ಟೇ ಪ್ರಯೋಜನ
... ಸರಕಾರ ಎಲ್ಲಾ ವಿಭಾಗಗಳ ರೈತರಿಗೆ
...ಬಡ್ಡಿ ದರದಲ್ಲಿ ಸಂಸ್ಥೆಗಳಿಂದ ಸಾಲ
...ನ್ನು ಒದಗಿಸಬೇಕು. ಬ್ಯಾಂಕುಗಳು ಕೃಷಿಗೆ
...ೀಡುವ ಸಾಲದ ಪ್ರಮಾಣ
...ಡಿಮೆಯಾಗಿದೆ. 1991 ರಲ್ಲಿ ಗ್ರಾಮೀಣ
...ಲ ಮತ್ತು ಠೇವಣಿಯ ಅನುಪಾತ ಶೇ
...58 ಇದ್ದದ್ದು 2001 ರಲ್ಲಿ 0.73 ಶೇ. ಕ್ಕೆ
...ಳಿದಿದೆ. ಅಂದರೆ ಗ್ರಾಮೀಣ ಭಾರತದಲ್ಲಿ
...ಸಂಗ್ರಹಿಸಿದ ಹಣವನ್ನು ಆರ್ಥಿಕದ ಬೇರೆ
...ವಲಯದಲ್ಲಿ ಹೊರಗಿಡಲಾಗುತ್ತಿದೆ.
...ದರಿಂದಾಗಿ ಗ್ರಾಮೀಣ ವಲಯದಲ್ಲಿ
...ಸಾರ್ವಜನಿಕ ವಲಯದ ಬಂಡವಾಳ
... ಇಳಿಮುಖವಾಗಲು ಕಾರಣವಾಗಿದೆ.
...ಗಳ ಪೂರೈಕೆ ಕೃಷಿ ಉತ್ಪಾದಕತೆ ಮತ್ತು
... ಹೆಚ್ಚಿಸಲು ಇನ್ನೊಂದು ಅಗತ್ಯ
...ಡು, ರಸಗೊಬ್ಬರ, ನೀರಾವರಿ,
...ಕಗಳು ಇತ್ಯಾದಿಗಳು
...ಕಾರಿಯಾಗಬೇಕಾದರೂ ಉತ್ತಮ
...ದ ಬೀಜಗಳು ಅಗತ್ಯ. ಕೇಂದ್ರ ಸರ್ಕಾರ
...ಲವು ರಾಜ್ಯ ಸರ್ಕಾರಗಳು ಬೀಜ
... ಮತ್ತು ವಿತರಣೆಯಲ್ಲಿ ಬಹುರಾಷ್ಟ್ರೀಯ
...ಗೆ, ದೊಡ್ಡ ವ್ಯಾಪಾರಸ್ಥರಿಗೆ ಅವಕಾಶ
... ಇದಕ್ಕೆ ರೈತರು ಹೆಚ್ಚಿನ ಬೆಲೆ
...ಗಿದೆ. ಹಲವು ಖಾಸಗಿ ಕಂಪನಿಗಳು
...ಬೀಜಗಳನ್ನು ಪೂರೈಸಿರುವುದರಿಂದ ಬೆಳೆ
...ಡು ಬಂದಿದೆ. ಮೊನ್ಸಾಂಟೋದಂತಹ
...ಯ ಕಂಪನಿಗಳು ಭಾರತದ ಮಣ್ಣನ್ನು
...ಕ ತಂತ್ರಜ್ಞಾನದಿಂದ ಪರಿಷ್ಕರಿಸಿದ
...ಪ್ರಯೋಗಾಲಯವಾಗಿ ಬಳಸುತ್ತಿವೆ.
...ಇತರ ಬೆಳೆಗಳು, ಪ್ರಾಣಿಗಳು ಮತ್ತು

ದೇಶಗಳು ಇನ್ನೂ ಅದನ್ನು ಜಾರಿ ಮಾಡಿಲ್ಲ. ಕೃಷಿ ವಲಯಕ್ಕೆ ಈಗಲೂ ಅವು ಬೃಹತ್ ಪ್ರಮಾಣದಲ್ಲಿ ಸಬ್ಸಿಡಿಗಳನ್ನು ಒದಗಿಸುತ್ತಿವೆ. ಇಂತಹ ಭಾರಿಸಬ್ಸಿಡಿ ಪಡೆದ ಕೃಷಿ ಸರಕುಗಳೊಂದಿಗೆ ನಮ್ಮ ಕೃಷಿ ಸರಕುಗಳು ಅಸಮಾನ ಸ್ಪರ್ಧೆಯನ್ನು ಎದುರಿಸಬೇಕಾಗಿ ಬಂದಿವೆ. ಇದು ಭಾರತದಲ್ಲಿ ನಮ್ಮ ಕೃಷಿ ಸರಕುಗಳ ಬೆಲೆಗಳು ತೀವ್ರವಾಗಿ ಇಳಿಯಲು ಒಂದು ಕಾರಣ. ಈ ವಿಶ್ವ ವ್ಯಾಪಾರ ಸಂಸ್ಥೆಯ ವಿವಿಧ ಅಂಶಗಳು ಮತ್ತು ಒಪ್ಪಂದ ನಮ್ಮ ದೇಶದ ಹಿತಾಸಕ್ತಿಗಳಿಗೆ ವಿರುದ್ಧವಾಗಿ ಕೆಲಸ ಮಾಡಿವೆ ಎಂಬುದು ನಮ್ಮ ಅನುಭವ. ಈ ಒಪ್ಪಂದವನ್ನು ಮುಂದುವರೆಯಲು ಬಿಟ್ಟರೆ ಭಾರತದ ಕೃಷಿಯ ಉಳುವಿಗೇ ಸಂಚಕಾರ

ಸಬ್ಸಿಡಿಗಳನ್ನು, ರಫ್ತು ಸಹಾಯ ಧನಗಳನ್ನು ಕಡಿಮೆ ಮಾಡಲು ಸಿದ್ಧವಿಲ್ಲ. ವಿಶ್ವ ವ್ಯಾಪಾರ ಸಂಘಟನೆಯ ಮಾತುಕತೆಗಳನ್ನು ಅಭಿವೃದ್ಧಿ ಹೊಂದಿದ ದೇಶಗಳು ಈ ಸಬ್ಸಿಡಿಗಳನ್ನು ತೆಗೆದುಹಾಕುವಂತೆ ಒತ್ತಾಯ ತರಲು ಅಭಿವೃದ್ಧಿಶೀಲ ದೇಶಗಳನ್ನು ಅಣಿನೆರೆಸೇಕು. ಆಮದು ಸುಂಕ ಕಡಿತದ ಮಾತುಕತೆಗಳಲ್ಲಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಕಡಿತದ ಶೇಕಡವಾರು ಅಭಿವೃದ್ಧಿ ಹೊಂದಿದ ದೇಶಗಳಿಗೆ ಕಡಿತದ ಶೇಕಡಾವಾರಿನ ಅರ್ಧದಷ್ಟಿರಬೇಕು ಹಾಗೂ ಇದಕ್ಕೆ ನೀಡುವ ಅವಧಿ ಅಭಿವೃದ್ಧಿ ಹೊಂದಿದ ದೇಶಗಳಿಗೆ ನೀಡುವ ಅವಧಿಯ ಇಮ್ಮಡಿ ಇರಬೇಕು ಎಂಬ ನಿಲುವನ್ನು ಭಾರತ ತಳೆಯಬೇಕು. ಅಭಿವೃದ್ಧಿ ಹೊಂದಿದ ದೇಶಗಳ

ಸಬ್ಸಿಡಿ ಪಡೆದ ರಫ್ತುಗಳ ಎಂಟು ಅಭಿವೃದ್ಧಿ ಶೀಲ ದೇಶಗಳ ಕೃಷಿಗೆ ಪರಿಣಾಮಕಾರಿ ರಕ್ಷಣೆ ಇರಬೇಕು. ತಮ್ಮ ಆಮದುಗಳಿಗೆ ಸಹಾಯಧನ ಅಥವಾ ಬೆಂಬಲ ನೀಡುವ ಅಭಿವೃದ್ಧಿ ಹೊಂದಿದ ದೇಶಗಳ ಅಂತಹ ಉತ್ಪಾದನೆಗಳಿಗೆ ಆಮದಿಗೆ ಸಂಬಂಧಪಟ್ಟಂತೆ ಪ್ರಮಾಣದ ಮೇಲೆ ಮಿತಿಯೂ ಸೇರಿದಂತೆ ಆಮದು ಹತೋಟಿ ಕ್ರಮಗಳನ್ನು ಅನ್ವಯಿಸಲು ಅಭಿವೃದ್ಧಿಶೀಲ ದೇಶಗಳಿಗೆ ಅವಕಾಶವಿರಬೇಕು. ಅಭಿವೃದ್ಧಿ ಹೊಂದಿರುವ ದೇಶಗಳಲ್ಲಿ ರಫ್ತು ಸಬ್ಸಿಡಿ ಮತ್ತು ಆಂತರಿಕ ಸಬ್ಸಿಡಿಗಳು ಇದುವರೆಗೆ ಅಭಿವೃದ್ಧಿ ಶೀಲದೇಶಗಳು ಮಾಡಬೇಕಾದ ಸುಂಕದರ ಕಡಿತಗಳನ್ನು ಅಮಾನತ್ತಿನಲ್ಲಿಡಬೇಕು. ಒಂದು ಅಭಿವೃದ್ಧಿಶೀಲ ದೇಶ ತನ್ನ 'ಆಹಾರ ಭದ್ರತೆ'ಗಾಗಿ, ಗ್ರಾಮೀಣ ಅಭಿವೃದ್ಧಿಗಾಗಿ ಕೆಲವು ಆರಿಸಿದಉತ್ಪಾದನೆಗಳನ್ನು, ವಿಶೇಷವಾಗಿ ಸಣ್ಣ ತೋಟ, ಜಮೀನುಗಳಲ್ಲಿ ಬೆಳೆಸುವ ಉತ್ಪಾದನೆಗಳನ್ನು 'ಅತ್ಯಗತ್ಯ ಉತ್ಪಾದನೆಗಳು' ಎಂದು ಗುರುತಿಸಲು ಅವಕಾಶ ನೀಡಬೇಕು. ಇಂತಹ ಕೃಷಿ ಉತ್ಪನ್ನಗಳಿಗೆ ಆಮದು ಸುಂಕ ದರಗಳ ಕಡಿತ, ಸಬ್ಸಿಡಿಗಳ ಕಡಿತ ಇತ್ಯಾದಿಗಳು ಅನ್ವಯವಾಗಬಾರದು.

●

ಆಳುವವರ ಲೂಟಿಗೆ ವರದಾನವಾದ ಬರ!

ಗುಲ್ಬರ್ಗಾ ಜಿಲ್ಲೆಯ ರಾಜಕೀಯ ವಿದ್ಯಮಾನಗಳತ್ತ ಒಂದು ಕಿರುನೋಟ

ಗುಲ್ಬರ್ಗಾ-ಬೀದರ್ ಜಿಲ್ಲೆಗಳಲ್ಲಿ ಮುಂಬರುವ ಚುನಾವಣೆಯ ಸಿದ್ಧತೆಯ ಭಾಗವಾಗಿ ಬ್ಲಾಕ್ ಕಾಂಗ್ರೆಸ್ ಸಮಿತಿಯ ಸಮಾವೇಶಗಳು ನಡೆಸುತ್ತಿದೆ. ಎರಡು ಜಿಲ್ಲೆಗಳ ಉಸ್ತುವಾರಿ ಸಚಿವರು ಆಡಳಿತ ಚುರುಕುಗೊಳಿಸಲು ಪ್ರಯತ್ನಿಸುತ್ತಿದ್ದಾರೆ. ಮಾಸಿಕ ರಿವ್ಯೂ ಖುದ್ದಾಗಿ ಮಂತ್ರಿಗಳೇ ನಡೆಸಿದ್ದಾರೆ.

ಬರಗಾಲದ ಕಾಮಗಾರಿಗಳಲ್ಲಿ ಯಥೇಚ್ಛವಾಗಿ ಯಂತ್ರಗಳು ಬಳಸುತ್ತಿದ್ದಾರೆ. ಕಾಂಗ್ರೆ ಮುಖಂಡರುಗಳಿಗೆ ಹಣ ಲೂಟಿ ಮಾಡಲು ಬರಗಾಲ ವರದಾನವಾಗಿದೆ. ಬರಗಾಲ ಕಾಮಗಾರಿಗಳ ಹೆಸರಿನಲ್ಲಿ ಉಪ ಸಮಿತಿ ಸ್ಥಾನ ಬಳಸಿಕೊಂಡು ಉಸ್ತುವಾರಿ ಸಚಿವರು ಹೆಚ್ಚು ಹಣ ಸರಕಾರದಿಂದ ಬಿಡುಗಡೆ ಮಾಡಿಸಿದ್ದಾರೆ. ಕೋಟ್ಯಾಂತರ ರೂಪಾಯಿಗಳ ಅಕ್ಕಿ ಹಿಂದಿನ ಜಿಲ್ಲಾಧಿಕಾರಿಗಳು ಮಾರಿಕೊಂಡಿರುವ ದೂರುಗಳು ಬಹಿರಂಗಗೊಳ್ಳುತ್ತಿವೆ.

ಮೇಯರ್ ಚುನಾವಣೆಯಲ್ಲಿ ಕಾಂಗ್ರೆಗೆ ಪಕ್ಷೇತರ ಸದಸ್ಯರ ಒಂದು ತಂಡ ಸೇರಿದೆ. ರಾಜ್ಯದ ಕಾಂಗ್ರೆನ ಉಸ್ತುವಾರಿ ಕಾರ್ಯದರ್ಶಿ ವಯಲಾರ ರವಿ ಬೀದರ-ಗುಲ್ಬರ್ಗಾಕ್ಕೆ ಭೇಟಿ ನೀಡಿ ಕಾರ್ಯಕರ್ತರ ಸಭೆ ನಡೆಸಿದ್ದಾರೆ.

ಗುಲ್ಬರ್ಗಾ ನಗರದ ನೀರು ಸರಬರಾಜು ಖಾಸಗೀಕರಣದ ಹಿನ್ನೆಲೆಯಲ್ಲಿ ವಿಶ್ವ ಬ್ಯಾಂಕ್ ತಂಡ ಗುಲ್ಬರ್ಗಾ ನಗರಕ್ಕೆ ಭೇಟಿ ನೀಡಿದೆ. ಖಾಸಗೀಕರಣ ಪ್ರಕ್ರಿಯೆ ಆರಂಭವಾಗಿದೆ.

ಕೃಷ್ಣಾ-ಕಾಡಾ ಪ್ರದೇಶದಲ್ಲಿ 10 ವರ್ಷಗಳ ಕಾಲ ಭೂಮಿ ಮಾರಾಟ, ಲೀಜಿಂಗ್ ಸ್ಥಗಿತಗೊಳಿಸಲಾಗಿದೆ. ಭೂಮಿ ಸಮತಲಗೊಳಿಸಲಾಗದೇ ಇದ್ದುದ್ದರಿಂದ ಫಲವತ್ತತೆ ಕಡಿಮೆಯಾಗಿದೆ. ಲಕ್ಷಾಂತರ ಎಕರೆ ಜವಳು ಭೂಮಿಯಾಗಿದೆ. ಇಳುವರಿ ಕುಸಿದಿದೆ. ರೈತರ ಸಹಾಯಕ್ಕೆ ಬಾರದ ಸರ್ಕಾರ ಭೂಮಿ ಮಾರಾಟ ತಡೆದಿರುವುದು ಸ್ಥಳೀಯ ಜಮೀನ್ದಾರರಿಗೆ ಅನುಕೂಲವಾಗಿದೆ. ಜಮೀನ್ದಾರರ ಕೈಯಲ್ಲಿ ಹೆಚ್ಚು ಭೂಮಿ ಶೇಖರಣೆಯಾಗಲು ಸಹಕಾರಿಯಾಗಿದೆ. ಇದಕ್ಕಾಗಿ ಭೂ ಸುಧಾರಣೆ ಜಾರಿಗೆ ಒತ್ತಾಯಿಸುವುದೇ ಏಕೈಕ ಪರಿಹಾರ. ಮತ್ತು ಸರ್ಕಾರ ನೀರಾವರಿ ಸದ್ಬಳಕೆಗೆ ಯೋಜನೆಗಳು ರೂಪಿಸುವುದು ಅಗತ್ಯವಿದೆ.

ಕೃಷ್ಣಾ ಹಗುರ ನೀರಾವರಿಯಾಗಿದೆ. ಭತ್ತ ಬೆಳೆಯುವುದನ್ನು ತಡೆಯಲು ಕ್ರಮ ಕೈಗೊಳ್ಳಲು ಮುಂದಾಗಿದೆ. ಜವಳು ಭೂಮಿಯಲ್ಲಿ ಭತ್ತವಲ್ಲದೆ ಬೇರೇನು ಬೆಳೆಯಲು ಸಾಧ್ಯವಿಲ್ಲವೆಂದು ರೈತರ ವಾದವಾಗಿದೆ. ಸಂಘರ್ಷದ ವಾತಾವರಣ ಸೃಷ್ಟಿಯಾಗಿದೆ.

ಆಳಂದ ಸಕ್ಕರೆ ಕಾರ್ಖಾನೆ ಬಿಕ್ಕಟ್ಟು ಹೆಚ್ಚಾಗಿದೆ. ಹಣದ ದುರ್ಬಳಕೆ, ಕಾರ್ಮಿಕರಿಗೆ ಸಂಬಳವಿಲ್ಲದಂತಹ ಪರಿಸ್ಥಿತಿ ಒದಗಿದೆ. ರೈತರಿಗೆ ಕಬ್ಬಿನ ಹಣ ಪಾವತಿ ಮಾಡಲಾರದ ಪರಿಸ್ಥಿತಿ ಬಂದೊದಗಿದೆ. ಈ ಕಾರ್ಮಿಕರ ಚಳುವಳಿಯನ್ನು ಸಂಕುಚಿತ ರಾಜಕೀಯಕ್ಕೆ ಬಳಸಿಕೊಳ್ಳುವ ಪಯತ್ನ ನಡೆದಿದೆ. ಬಂಜಾರಾ ಸೇವಾ ಸಂಘವು ಮಕ್ಕಳ ಮಾರಾಟ ವಿಷಯ ಮತ್ತೆ ಎತ್ತಿದೆ. ಇದಕ್ಕೆ ವ್ಯಾಪಕವಾಗಿ ಪತ್ರಿಕೆಗಳು ಪ್ರಚಾರ ನೀಡಿವೆ. ಅಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಭೂಮಿ ಹಕ್ಕಿಗಾಗಿ ಹೋರಾಟ ನಡೆದಿದೆ. ಅರಣ್ಯ ಉತ್ಪನ್ನಗಳು, ಸಾಗುವಳಿ ಮಾಡುತ್ತಿರುವ ಅರಣ್ಯ ಭೂಮಿ ರಕ್ಷಣೆ, ಇತ್ಯಾದಿ ಬೇಡಿಕೆಗಳಿಗೆ ಒತ್ತಾಯಿಸಿ ಬೆಣ್ಣೆ ತೋರಾ ಯೋಜನೆ ಭಾಗದಲ್ಲಿ ಬಿಜೆಪಿ ಪಾದಯಾತ್ರೆ ನಾಟಕ ನಡೆಸಿದೆ. ಅಭಿವೃದ್ಧಿ-ಭ್ರಷ್ಟಾಚಾರದ ಹೆಸರಿನಲ್ಲಿ ಜನರ ಮಧ್ಯದಲ್ಲಿ ಹೋಗಲು ಯತ್ನ ನಡೆದಿದೆ. ಇತ್ತೀಚಿಗೆ ಭಾಲ್ಕಿಗೆ ಅನಂತಕುಮಾರ ಭೇಟಿ ನೀಡಿ ಕುಸಿಯುತ್ತಿರುವ ಬಲ ಉಳಿಸಿಕೊಳ್ಳಲು ಪ್ರಯತ್ನ ನಡೆಸಿದ್ದಾರೆ. ಬೀದರ ಜಿಲ್ಲೆಯಲ್ಲಿ ಬಿಜೆಪಿ ಬಲ ಕುಸಿದಿದೆ. ಕಮಲಾಪುರ ಬಿಜೆಪಿ ಶಾಸಕರಾದ ಕಮಲಾಪೂರ ಜೊತೆ ಬಹಿರಂಗ ತಿಕ್ಕಾಟ ಕಾರ್ಯಕರ್ತರಿಂದ ನಡೆದಿದೆ.


ಜೆಡಿ(ಎಸ್) ಜಿಲ್ಲಾ ಸಮಾವೇಶಗಳ ಸಿದ್ಧತೆ ಎರಡು ಜಿಲ್ಲೆಗಳಲ್ಲಿ ನಡೆದಿದೆ. ಕಾಂಗ್ರೆ ಮತ್ತು ವೀರಶೈವ ಮುಖಂಡತ್ವದ ಒಂದು ಮುಖ್ಯ ವಿಭಾಗ. ಜೆ.ಡಿ. (ಎಸ್) ಸೇರಲು ಪ್ರಯತ್ನ ನಡೆಸಿದೆ. ಇದು ಕಾಂಗ್ರೆಗೆ ಪೆಟ್ಟು ನೀಡಬಹುದು.

ಈಗ ಶ್ರೀಮಂತರಿಗೇ ಆದ್ಯತೆ

ನಿಜವಾದ ಭಾರತ ಹಳ್ಳಿಗಳಲ್ಲಿದೆ. ಎಂದು ಗಾಂಧೀಜಿ ಹೇಳಿದರು. ಐದು ಲಕ್ಷ ಮೂವತ್ತು ಸಾವಿರ ಹಳ್ಳಿಗಳಿರುವ ಭಾರತ ಇಂದಿಗೂ ಹಳ್ಳಿಗಳಲ್ಲೇ ಇದೆ. ಭಾರತದ ಬಡತನದ ಬೇಗೆಯೂ ಈ ಹಳ್ಳಿಗಳಲ್ಲೇ ಇದೆ. ಭಾರತ ಅಭಿವೃದ್ಧಿ ಹೊಂದಬೇಕಾದರೆ ಈ ಹಳ್ಳಿಗಳು ಅಭಿವೃದ್ಧಿ ಹೊಂದಬೇಕು.

ಉದಾರೀಕರಣ ಬಂದ ಮೇಲೆ ಹಳ್ಳಿಗಳನ್ನು ಹೇಗೆ ನಿರ್ಲಕ್ಷಿಸಲಾಗುತ್ತೆ ಎಂಬುದನ್ನು ಬ್ಯಾಂಕುಗಳು ಈ ಪ್ರದೇಶಗಳಿಗೆ ಸಾಲ ನೀಡುವಲ್ಲಿ ತೋರುತ್ತಿರುವ ಆಸಕ್ತಿಯಲ್ಲಿ ಸೂಚಿತವಾಗಿದೆ. ಕೃಷಿ ಗುಡಿಕೈಗಾರಿಕೆಗಳು ಸಣ್ಣ ಕೈಗಾರಿಕೆಗಳು, ಸಣ್ಣ ವ್ಯಾಪಾರ ಇತ್ಯಾದಿಗಳು ಬ್ಯಾಂಕುಗಳ ಆದ್ಯತೆಯ ವಲಯದಲ್ಲಿ ಬರುತ್ತವೆ. ಈ ಆದ್ಯತೆಯ ವಲಯಕ್ಕೆ ಅವು ತಮ್ಮ ಸಾಲಗಳ ಶೇ. 40 ರಷ್ಟನ್ನು ನೀಡಲೇಬೇಕು. ಹೀಗೆ ಅವರು ಆದ್ಯತೆಯ ವಲಯಕ್ಕೆ ಸಾಲ ನೀಡಿದರೆ ಅದು ಗ್ರಾಮೀಣಾಭಿವೃದ್ಧಿಗೆ ನೆರವಾಗುತ್ತದೆ.

ಉದಾರೀಕರಣ ಬಂದ ನಂತರ ಬ್ಯಾಂಕುಗಳು ತಮ್ಮ ಗಮನವನ್ನು ಮಹಾನಗರ, ನಗರ ಮತ್ತು ಅರೆಪಟ್ಟಣ ಪ್ರದೇಶಗಳ ಮೇಲೆ ಕೇಂದ್ರೀಕರಿಸಿವೆ.



ಅಂದರೆ ಪೇಟೆಯ ಜನರಿಗೆ ಸಿಗುವ ಆದ್ಯತೆ ಹಳ್ಳಿಯ ಜನರಿಗೆ ಸಿಗದು. 1994 ರಿಂದ 2002ರ ಅವಧಿಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿನ ಬ್ಯಾಂಕು ಶಾಖೆಗಳ ಸಂಖ್ಯೆ 35,329 ರಿಂದ 32481ಕ್ಕೆ ಇಳಿದಿದೆ. ಅರೆಪಟ್ಟಣ ಪ್ರದೇಶಗಳಲ್ಲಿ ಅದು 11890 ರಿಂದ 14723ಕ್ಕೆ ಏರಿದೆ. ನಗರ ಪ್ರದೇಶಗಳಲ್ಲಿ 8745 ರಿಂದ 10447 ಏರಿದೆ. ಹಾಗೆಯೇ ಮಹಾನಗರಗಳ (ಮೆಟ್ರೋ)ಗಳಲ್ಲಿ ಅದು 5839ರಿಂದ 8557ಕ್ಕೆ ಏರಿದೆ. ಗ್ರಾಮೀಣ ಪ್ರದೇಶಗಳಿಗೆ ಆದ್ಯತೆ ಕಡಿಮೆಯಾಗಿರುವುದು ಇದರಿಂದ ಸ್ಪಷ್ಟವಾಗಿ ತೋರುತ್ತದೆ.

ಕೃಷಿಗೆ ಎಲ್ಲ ಷೆಡ್ಯೂಲ್ಡ್ ಬ್ಯಾಂಕುಗಳ ಸಾಲದ ಮೊತ್ತ ಶೇ. 65599 ಕೋಟಿ ರೂಪಾಯಿಗಳಲ್ಲಿ (ಮಾರ್ಚ್ 2002 ರ ವೇಳೆಗೆ) 64008.55 ಕೋಟಿ ರೂಪಾಯಿಗಳಷ್ಟು ಇತ್ತು. ಇದು ಒಟ್ಟು ಸಾಲದ ಶೇ. 9.8ರಷ್ಟು ಮಾತ್ರ.

ಕೃಷಿಗೆ ಇಂದು ಬ್ಯಾಂಕುಗಳು ನೀಡಿರುವ ಸಾಲ ಮನೆ ಕಟ್ಟಲು, ಬಳಕೆ ಸಾಮಗ್ರಿ ಉಪಕರಣಗಳು, ಕಾರು ಕೊಳ್ಳಲು ಇತ್ಯಾದಿ ಉದ್ದೇಶಗಳಿಗೆ ನೀಡಿರುವುದಕ್ಕಿಂತ ಕಡಿಮೆಯಾಗಿದೆ.

ಅಲ್ಲದೆ ಕೃಷಿಗೆ ಇಂದೆಲ್ಲ ಕಡಿಮೆ ಬಡ್ಡಿದರದಲ್ಲಿ ಸಾಲ ನೀಡಲಾಗುತ್ತಿತ್ತು. ಉದಾರೀಕರಣ ಬಂದ ನಂತರ ಅದು ಹಿಂದಿನಂತೆ ಉಳಿದು ಉಳಿದೆಲ್ಲ ಉದ್ದೇಶಗಳಿಗೆ ನೀಡುವ ಸಾಲಗಳ ಬಡ್ಡಿ ದರಗಳು ಇಳಿದಿವೆ. ಕೃಷಿಗೆ ಸಾಲದ ಬಡ್ಡಿ ದರಗಳು ಮಾತ್ರ ಹಿಂದಿನಂತೆ ಉಳಿದಿವೆ.

ಸಾಲಗಾರರ ಸಂಖ್ಯೆ ತೆಗೆದುಕೊಂಡರೆ ಗ್ರಾಮೀಣ ಭಾರತದ ಸಾಲಗಾರರ ಸಂಖ್ಯೆ ಒಟ್ಟು ಸಾಲಗಾರರ



ಶೇ. 45ರಷ್ಟಿದ್ದರೂ ಅವರುಗಳಿಗೆ ದೊರೆಯುತ್ತಿರುವ ಸಾಲ ಬರೀ ಶೇ. 13.5ರಷ್ಟು ಇದಕ್ಕೆ ವಿರುದ್ಧವಾಗಿ ಮಹಾನಗರಗಳ ಜನರು ಈ ಬ್ಯಾಂಕು ಸಾಲಗಳ ಶೇ. 54ರಷ್ಟನ್ನು ಪಡೆದಿದ್ದಾರೆ. ಹಳ್ಳಿಗರು ಪಡೆದಿರುವುದಕ್ಕಿಂತ 12 ಪಟ್ಟು ಹೆಚ್ಚನ್ನು ಪಟ್ಟಣಿಗರು ಪಡೆದಿದ್ದಾರೆ.

ಇದರಲ್ಲೂ ಇನ್ನೊಂದು ಮುಖ್ಯ ವಿಷಯವಿದೆ. ಖಾಸಗಿ ಮತ್ತು ವಿದೇಶೀ ಬ್ಯಾಂಕುಗಳು ಗ್ರಾಮೀಣ ಜನರಿಗೆ ಅತ್ಯಲ್ಪ ಸಾಲ ನೀಡಿದ್ದಾರೆ. ಗ್ರಾಮೀಣ ಪ್ರದೇಶಗಳಿಗೆ ನೀಡಿರುವ ಸಾಲದಲ್ಲಿ ಶೇ. 93.95ರಷ್ಟನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಅದರ ಏಳು ಸಹವರ್ತಿ ಬ್ಯಾಂಕ್, ರಾಷ್ಟ್ರೀಕೃತ ಬ್ಯಾಂಕುಗಳು ಮತ್ತು ಗ್ರಾಮೀಣ ಬ್ಯಾಂಕುಗಳು ನೀಡಿವೆ. ವಿದೇಶಿ ಬ್ಯಾಂಕುಗಳು ಶೇ. 1.24ರಷ್ಟನ್ನು ನೀಡಿದೆ. ಉಳಿದ ವಾಣಿಜ್ಯ ಬ್ಯಾಂಕುಗಳು (ಖಾಸಗಿ ವಲಯದವು) ಸೇ. 4.81ರಷ್ಟನ್ನು ನೀಡಿದೆ.

ಗ್ರಾಮೀಣ ಭಾರತಕ್ಕೆ ಎಂತಹ ಆದ್ಯತೆ ನೀಡಲಾಗುತ್ತಿದೆ!! ಅಲ್ಲವೆ?

ಆಹಾರ ಧಾನ್ಯಗಳಿಗೆ ಬೆಂಬಲ ಬ

ಆಹಾರ ಧಾನ್ಯಗಳಿಗೆ ಬೆಂಬಲ ಬೆ
ನೀಡುವ ಮೂಲಕ ಯಾವ್ಯಾವ ಆಹಾರ ಧಾ
ಯಾವ ಪ್ರಮಾಣದಲ್ಲಿ ಉತ್ಪಾದನೆ ಆಗಬೇ
ಎಂಬುದನ್ನು ಸ್ಥೂಲವಾ
ನಿರ್ಧರಿಸಲಾಗುತ್ತಿದೆ. ಇದಲ್ಲದೆ ಬೆಳೆ
ರೈತನಿಗೆ ನ್ಯಾಯವಾದ ಪ್ರತಿಫಲವ
ದೊರೆಯುವಂತಾಗಬೇಕು ಕೃಷಿ ಖರ್ಚು ಮ
ಬೆಲೆಗಳ ಸಮಿತಿ ಬತ್ತಕ್ಕೆ ಬೆಂಬಲ ಬೆಲೆಯ
530 ರಿಂದ 550ಕ್ಕೆ ಏರಿಸುವಂತೆ ಶಿಫಾರ
ಮಾಡಿದೆ. ಇದು ಚುನಾವ
ವರ್ಷವಾದ್ದರಿಂದ ಈ ವರ್ಷ ಇಂತ
ಶಿಫಾರಸ್ಸುಗಳು ಜಾರಿಗೆ ಬರಬಹುದು.

ಆದರೆ ಉದಾರೀಕರಣದ ನೀತಿ
ಪರಿಣಾಮವಾಗಿ ಕೆಲವು ವರ್ಷಗಳವ
ಬೆಂಬಲ ಬೆಲೆಗಳನ್ನು ಏರಿಸಲೇಬಾರ
ಎಂಬ ಶಿಫಾರಸ್ಸುಗಳೂ ಸುಧಾರ
ಸಮಿತಿಗಳಿಂದ ಬಂದಿವೆ.

ಎಲ್ಲ ಲಾಗುವಾಡುಗಳ ಬೆಲೆಗಳು ಹೆ
ಉತ್ಪನ್ನದ ಬೆಲೆ ಏರದೇ ಹೋದರೆ ರೈತ
ಹೊಡೆತ ಬೀಳುತ್ತದೆ. ಬೆಲೆ ಏರಿಸಿ
ಬಳಕೆದಾರರಿಗೆ ಹೊಡೆತ ಬೀಳುತ್ತದೆ. ರೈತ
ಹೊಡೆತ ಬಿದ್ದರೆ ರೈತ ಆ ಬೆಳೆ ಬೆಳೆಯ
ಹೋಗಬಹುದು. ಆಗ ಆಹಾರಧಾನ್ಯ
ಉತ್ಪಾದನೆಯಲ್ಲೇ ಏರುಪೇರು ಆಗುತ್ತ

ಉದಾರೀಕರಣ ಹೇಗೆ ಜನವಿರೋ
ಎಂಬುದು ಇದರಿಂದ ಸ್ಪಷ್ಟವ
ಗೊತ್ತಾಗುತ್ತದೆ. ಸರ್ಕಾರ ಬಳಕೆದ
(ಉಣ್ಣುವವರೆಲ್ಲ ಆಹಾರದಾನ್ಯ
ಬಳಕೆದಾರರು) ಮತ್ತು ಉತ್ಪಾದಕರ (
ಆಸಕ್ತಿಗಳನ್ನು ಕಾಯಬೇಕೆ. ಈ ತನ್ನ ಕಾರ್ಯ
ಸರ್ಕಾರ ಬಿಟ್ಟುಕೊಟ್ಟಾಗ ಪರಿ
ಹದಗೆಡುತ್ತದೆ. ಈಗ ಆಗುತ್ತಿರುವುದೇ ಅ

'ಶಕ್ತಿ ಕೊಡಲು ಮುಖ್ಯ ಕಾರ್ಯದರ್ಶಿ ಮುಂದೆ ಅವಲತ್ತುಕೊಂಡ ಮಂತ್ರಿಗಳು!

ಕೊಡಗಿನ ರಾಜಕೀಯ ಸ್ಥಿತಿ

ಕೊಡಗು ಜಿಲ್ಲಾ ಪಂಚಾಯತ್ ಕಾರ್ಯನಿರ್ವಾಹಣಾಧಿಕಾರಿಯಾಗಿದ್ದ ಬಲದೇವಕೃಷ್ಣರಿಗೆ ವರ್ಗಾವಣೆಯಾಗಿದ್ದರೂ, ಸರಕಾರದ ಸ್ಪಷ್ಟ ಆದೇಶವಿದ್ದರೂ ಜಿಲ್ಲೆಯಿಂದ ನಿರ್ಗಮಿಸದೆ ಇನ್ನೂ ಆರು ತಿಂಗಳು ಜಿಲ್ಲೆಯಲ್ಲೇ ಮುಂದುವರಿಯಲು ಶತ ಪ್ರಯತ್ನ ನಡೆಸಿ ವಿಫಲರಾಗಿ ಕೊನೆಗೂ ಹೋಗಿದ್ದಾರೆ. ಜಿಲ್ಲಾ ಪಂಚಾಯತ್ತಿನ ಬಹುತೇಕ ಕಾಂಗ್ರೆಸ್ ಸದಸ್ಯರುಗಳು ಮತ್ತು ಉಸ್ತುವಾರಿ ಸಚಿವ ಎಂ.ಎಂ.ನಾಣಯ್ಯ ನವರ ಸಂಪೂರ್ಣ ಬೆಂಬಲ ಅವರಿಗಿತ್ತು. ಅವರು ಇಲ್ಲಿಂದ ಹೊಗಲೇಬೇಕೆಂದು ಸ್ಪಷ್ಟ ನಿಲುಮೆ ಸ್ವೀಕರಿಸಿದ ಏಕಮಾತ್ರ ಪಕ್ಷ ಸಿಪಿಐ(ಎಂ) ಮಾತ್ರವೇ ಆಗಿತ್ತು.

ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಜಿಲ್ಲೆಗೆ ಭೇಟಿ ನೀಡಿದರು. "ಕೊಡಗಿಗೆ ಬರುವ ಅಧಿಕಾರಿಗಳು ಬೇಗಬೇಗನೆ ವರ್ಗವಾಗಿ ಹೋಗುತ್ತಿದ್ದು, ಇದರಿಂದ ಜಿಲ್ಲೆಯ ಅಭಿವೃದ್ಧಿ ಕುಂಠಿತಗೊಳ್ಳುತ್ತಿದೆ" ಎಂದು ಜಿಲ್ಲೆಯ ಮೂವರೂ ಮಂತ್ರಿಗಳು ಅವರ ಮುಂದೆ ಗೋಗರೆದದ್ದು ಮಂತ್ರಿಗಳ ಅಸಹಾಯಕತೆಯನ್ನೂ ಯೋಗ್ಯತೆಯನ್ನೂ ಪ್ರದರ್ಶಿಸುತ್ತದೆ. ಕೊಡಗಿಗೆ ವಿಶೇಷ ಪ್ಯಾಕೇಜ್ ನೀಡುವಂತೆ ಮಂತ್ರಿಗಳು ಅಧಿಕಾರಿಯನ್ನು ಕೇಳಿಕೊಳ್ಳುತ್ತಿದ್ದಾರೆ! ಮಂತ್ರಿಗಳ ದೌರ್ಬಲ್ಯಗಳನ್ನು ಅಧಿಕಾರಿಗಳು ದುರುಪಯೋಗ ಮಾಡುತ್ತಿದ್ದಾರೆ. ಇದರಿಂದ ಅಧಿಕಾರಶಾಹಿ ಬೆಳೆಯುತ್ತಿದೆ. ಇದು ಪ್ರಜಾಸತ್ತೆಯ ಮೌಲ್ಯಗಳಿಗೆ ಧಕ್ಕೆಯಾಗಿದೆ.

ಕಾಂಗ್ರೆಸ್ ಪಕ್ಷದ ರಾಜ್ಯಾಧ್ಯಕ್ಷರಾಗಿ ಜನಾರ್ಧನ ಪೂಜಾರಿಯವರು ಬಂದಮೇಲೆ ಅವರ ಆದೇಶದಂತೆಯೇ ಎಲ್ಲಾ ಕಡೆಗಳಲ್ಲಿ ಸಮಾವೇಶಗಳಾಗುತ್ತಿವೆ. ಆದರೆ ಕಾಂಗ್ರೆಸ್ಸಿನಲ್ಲಿ ಭಿನ್ನಮತ ಬೆಳೆಯುತ್ತಿದೆ ಈ ಸರಕಾರದಡಿಯಲ್ಲಿ ಜನಪರ ಕೆಲಸಗಳ್ಯಾವವೂ ನಡೆಯುತ್ತಿಲ್ಲ. ಕೇವಲ ಪತ್ರಿಕಾ ಹೇಳಿಕೆಗಳು ದಿನದಿನವೂ ಹೊರಬರುತ್ತವೆ. ಹೊಸ ಯೋಜನೆಗಳು ರೂಪುಗೊಳ್ಳುತ್ತಿಲ್ಲ. ತಾ. 28 ರಂದು ನಡೆದ ಜಿಲ್ಲಾ ಪಂಚಾಯತ್ ಸಭೆಯಲ್ಲಿ ಹಿಂದೆ ಕಾರ್ಯನಿರ್ವಾಹಣಾಧಿಕಾರಿಗಳನ್ನು ಬೆಂಬಲಿಸಿದವರೇ ಇಂದು ವಿರೋಧಿಸಿದ್ದಾರೆ.

ವಿರಾಜಪೇಟೆ, ಸೋಮವಾರಪೇಟೆ ತಾಲೂಕುಗಳಲ್ಲಿ ಬರ ಪರಿಹಾರ ಕಾಮಗಾರಿಕೆಯಲ್ಲಿ ವ್ಯಾಪಕ ಅವ್ಯವಹಾರಗಳು ನಡೆಯುತ್ತಿವೆ. ಜನ ಪ್ರತಿನಿಧಿಗಳೊಂದಿಗೆ ಯಾವುದೇ ಚರ್ಚೆಗಳಿಲ್ಲದೆ ಅಧಿಕಾರಿಗಳದೇ ಆಡಳಿತೆಯಾಗಿದೆ.

ಜಿಲ್ಲೆಯಲ್ಲಿ ಆಡಳಿತ ಪಕ್ಷವಾದ ಕಾಂಗ್ರೆಸ್ ಜನರಿಂದ ದೂರವಾಗುತ್ತಿದೆ.

ಅಖಿಲ ಭಾರತ ಜನತಾದಳದ ಕಾರ್ಯಕರ್ತರ ಸಮಾವೇಶ ನಡೆದಿದೆ. ಜಿಲ್ಲಾ ಮಟ್ಟದಲ್ಲಿ ನಡೆದ ಈ ಸಮಾವೇಶದಲ್ಲಿ ಸುಮಾರು 500 ರಿಂದ 750 ರಷ್ಟು ಜನ ಸೇರಿದ್ದರು. ಈ ಸಮಾವೇಶದಲ್ಲಿ ಶ್ರೀ ಎಂ.ಪಿ.ಪ್ರಕಾಶ್, ಬೊಮ್ಮಾಯಿ, ರಮೇಶ್ ಕುಮಾರ್, ಭೈರೇಗೌಡ ಇನ್ನಿತರ ಮುಖಂಡರುಗಳು ಭಾಗಿಯಾಗಿದ್ದರು. ಈ ಸಮಾವೇಶದಲ್ಲಿ ಎಂ.ಸಿ.ನಾಣಯ್ಯನವರ ಬೆಂಬಲಿಗರೇ ಅಧಿಕವಾಗಿದ್ದರು. ಹೊಸಬರು ತೀರಾ ಕಡಿಮೆ.

ಸೋಮವಾರಪೇಟೆ ತಾಲ್ಲೂಕು ಭಾಜಪ ಶಾಸಕ ಅಪ್ಪಚ್ಚು ರಂಜನ್‌ರವರ ಗೂಂಡಾ ವರ್ತನೆ ಮತ್ತು ಮಂಜುಳಾ ಪ್ರಕರಣವನ್ನು ವಿರೋಧಿಸಿ ಸೋಮವಾರಪೇಟೆಯಲ್ಲಿ ಡಿವೈಎಫ್‌ಐ ಯನ್ನೊಳಗೊಂಡು ವಿವಿಧ ಸಂಘಟನೆಗಳು ಜೊತೆಗೂಡಿ ಪ್ರತಿಭಟನಾ ಕಾರ್ಯಕ್ರಮ ನಡೆಸಿದ್ದು ಯಶಸ್ವಿಯಾಗಿದೆ. ಸುಮಾರು ಒಂಬತ್ತು ವರ್ಷಗಳ ನಂತರ ರಂಜನ್‌ರ ವಿರುದ್ಧ ಧ್ವನಿ ಇಷ್ಟು ಪ್ರಮಾಣದಲ್ಲಿ ಬಹಿರಂಗವಾಗಿ ಕೇಳಿಬಂದದ್ದಾಗಿದೆ.

ಭಾಜಪ ಮಡಿಕೇರಿ ತಾಲೂಕಿನಲ್ಲಿ ತನ್ನ ಚಟುವಟಿಕೆ ನಡೆಸುತ್ತಿದೆ. ವಿರಾಜಪೇಟೆ ತಾಲ್ಲೂಕು ಸಮಿತಿ ಬದಲಾಗಿದೆ.

ಛೇಂಬರ್ ಆಫ್ ಕಾಮರ್ಸ್ ಕರೆಯ ಮೇರೆಗೆ ರಾಜ್ಯ ಸರ್ಕಾರದ ಮಾರಾಟ ತೆರಿಗೆ ವಿರೋಧಿಸಿ ತಾ. 11 ರಂದು ನಡೆಸಿದ ಕೊಡಗು ಬಂದ್ ಯಶಸ್ವಿಯಾಗಿದೆ.


ಜನ ಚಳುವಳಿ ದಮನಕ್ಕೆ ದೌರ್ಜನ್ಯದ ಭಾಷೆ

ಸ್ಥಳೀಯ ಸಮಸ್ಯೆಗಳನ್ನೆತ್ತಿಕೊಂಡು ಅಲ್ಲಲ್ಲಿ ಜನರ ಹೋರಾಟಗಳು ಮೂಡುತ್ತಿವೆ. ಖಾಸಗಿ ಬಸ್ ದರ ಇಳಿಸುವಂತೆ ಹುದಿಕೇರಿಯಲ್ಲಿ ಹೋರಾಟ ನಡೆದಿದೆ. ಏತ ನೀರಾವರಿಗಾಗಿ ಒತ್ತಾಯಿಸಿ ನೆಲ್ಲಿ ಹುದಿಕೇರಿಯಲ್ಲಿ ಹೋರಾಟ ನಡೆದಿದ್ದು ಡಿವೈಎಫ್‌ಐ ಸಂಪೂರ್ಣ ಬೆಂಬಲ ನೀಡಿ ಸಕ್ರಿಯ ಭಾಗವಹಿಸಿದ್ದಾರೆ. ನೇತೃತ್ವ ವಹಿಸಿದ್ದ ವಸಂತ ಕುಮಾರ್ ಹೊಸಮನಿ, ಭರತ್‌ರನ್ನೊಳಗೊಂಡು 200 ಜನರ ಮೇಲೆ
ಮೊಕದ್ದಮೆಯನ್ನು ಪೊಲೀಸರು ಹೂಡಿದ್ದಾ

ಮರದ ಹಕ್ಕು ಮತ್ತು ಕಾಡಾನೆ ಹಾವಳಿ ವಿ
ಸಿಪಿಐ(ಎಂ), ರೈತಸಂಘ ನಡೆಸಿದ ನಿರ
ಹೋರಾಟದ ಪರಿಣಾಮ ರಾಜ್ಯ ಅ
ಮಂತ್ರಿಗಳು ಜಿಲ್ಲೆಗೆ ಬಂದು ರೈತ ಸ
ಮುಖಂಡರನ್ನೊಳಗೊಂಡು ಇತರ ಸಂ
ಮತ್ತು ಪಕ್ಷಗಳ ಮುಖಂಡರುಗಳೊಡನೆ
ನಡೆಸಿದ್ದಾರೆ.

ಜಾತ್ಯಾತೀತ ಜನತಾದಳದ ಜಿಲ್ಲಾ ಪ
ಕಾರ್ಯಕರ್ತರ ಸಮಾವೇಶ ನಡೆದಿದೆ. 100
ಕಾರ್ಯಕರ್ತರು ಭಾಗವಹಿಸಿದ್ದರು. ದೇವೇ
ಸಿದ್ದರಾಮಯ್ಯ, ಇಬ್ರಾಹಿಂ ಭಾಗವಹಿಸಿದ


ಬಡ ಮಹಿಳೆಯರ ದಿನಕೂಲಿ



ಕೃಷಿ ಬಿಕ್ಕಟ್ಟಿಗೆ ಸಿಲುಕಿದ ಗ್ರಾಮೀಣ ಪ್ರದೇಶದ ಕೂಲಿ ಕಾರರ ಬವಣೆ ಹೇಳ ತೀರದು. ಅದರಲ್ಲೂ ಮಹಿಳಾ ಕೂಲಿಕಾರರು ಅತ್ಯಂತ ಕಷ್ಟದ ಕೆಲಸ ಮಾಡುತ್ತಾರೆ. ಆದರೂ ಹೊಟ್ಟೆ ತುಂಬಾ ಗಂಜಿ ಕುಡಿಯುವಷ್ಟೂ ಕೂಲಿ ಸಿಗದು.

ಕೆಳಗಿನವು ಅದಕ್ಕೆ ಉದಾಹರಣೆ

- ಭೂಮಾಲಕರ ಮನೆ ಮತ್ತು ಗದ್ದೆಗಳಿಂದ ಸಗಣಿ ಸಂಗ್ರಹಿಸಿ ಒಣ ಹಾಕುತ್ತಾರೆ ಹಾಗೂ ಅದರಿಂದ ಬೆರಣಿ (ಬೆಣ್ಣಿ) ಮಾಡಿ ಮಾರುತ್ತಾರೆ. 20 ಬೆರಣಿ ಮಾಡಿದರೆ ಹೆಚ್ಚೆಂದರೆ 10 ರೂ - ತಿಂಗಳಿಗೆ ಆದಾಯ 300 ರೂ.
- ಕಾಡುಗಳಿಂದ ಕಟ್ಟಿಗೆ ಸಂಗ್ರಹ : ಪಟ್ಟಣಗಳಲ್ಲಿ ಮಾರಾಟ - ದಿನಕ್ಕೆ 10 ರಿಂದ 12 ರೂ. ಆದಾಯ!
- ಎಲೆಗಳಿಂದ ಊಟದ ತಟ್ಟೆ ತಯಾ
ಮೈಲುಗಟ್ಟಲೆ ನಡೆದು ಎಲೆಗಳ ಸಂಗ್ರಹ -
ಹಾಕುವುದು; ತಟ್ಟೆ ತಯಾರಿಸಿ ಮಾ
ಮಾಡುವುದು. ಆದಾಯ 3 ರಿಂ
ದಿನಗಳಿಗೊಮ್ಮೆ 20 ರಿಂದ 30 ರೂ.
- ಸಿರಿವಂತ ಮನೆಯಲ್ಲಿ ವಿಧವಿಧದ ಕೆ
ಆದರೆ ಸಿಗುವ ಕೂಲಿ-ಕೆಲವು ರೊಟ್ಟಿ
ಇಲ್ಲವೇ ಒಂದಿಷ್ಟು ಅಕ್ಕಿ / ಜೋಳ.
- ಕಟ್ಟಡ ಕಾರ್ಮಿಕರ ಕೆಲಸ - ಅದರಲ್ಲಿ
ಹೆಚ್ಚು ಕೂಲಿ-ಆದರೂ ದಿನಕ್ಕೆ 15 ರಿಂ
ರೂ. ಮಾತ್ರ.



ರೈತರನ್ನು ಉಳಿಸುವ ಕ್ರಮ ತುರ್ತಾಗಿ ಬೇಕು



ಕೃಷ್ಣ ಕಣಿವೆಯ ನೀರಾವರಿ ಜಮೀನಿನ ಪರಭಾರೆಯನ್ನು ನಿಷೇಧಿಸಿದೆ ಕರ್ನಾಟಕ ಸರ್ಕಾರ. ಅಲ್ಲಿನ ನಿಜವಾದ ಪರಿಸ್ಥಿತಿಯೇನು? ಯಾಕೆ ರೈತರು ಜಮೀನು ಮಾರಿಕೊಳ್ಳುತ್ತಿದ್ದಾರೆ? ಸರ್ಕಾರದ ಆಜ್ಞೆ ನಂತರದ ಸ್ಥಿತಿಯ ಬಗ್ಗೆ ವಿವರಿಸಿದ್ದಾರೆ. ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಜಂಟಿ ಕಾರ್ಯದರ್ಶಿ, ಗುಲ್ಬರ್ಗಾ ಜಿಲ್ಲಾ ಕಾರ್ಯದರ್ಶಿಯವರಾದ ಚೆನ್ನಪ್ಪ ಆನೇಗುಂದಿಯವರು ಸಂದರ್ಶನದಲ್ಲಿ

—ಚನ್ನಪ್ಪ ಆನೆಗುಂದಿ

ಪರಭಾರೆ ನಿಷೇಧದ ಸರ್ಕಾರಿ ಆಜ್ಞೆ ಹಿನ್ನೆಲೆಯೇನು?

ಜಮೀನು ಪರಭಾರೆ ನಿಷೇಧದ ಸರ್ಕಾರಿ ಆಜ್ಞೆಯು ಜಮೀನಿನ ಮಾರಾಟವನ್ನು ಒಂದು ಹಂತದಲ್ಲಿ ತಡೆದಿದೆ. ಅದರೆ ನೀರಾವರಿಯಾಗಿ ಹತ್ತು ವರ್ಷ ಕಳೆದರೂ ನೀರಾವರಿ ಇಲಾಖೆಯ ಬೇಜವಬ್ದಾರಿಯಿಂದ 'ನೀರಾವರಿ ಭೂಮಿಯ' ಘೋಷಣೆ ಮಾಡಿಲ್ಲ. ಕೆಲವು ಹಳ್ಳಿಗಳ ಜಮೀನು ನೀರಾವರಿಯೆಂದು ಘೋಷಿದರೂ ಕೂಡಾ ಸಬ್ ರಿಜಿಸ್ಟ್ರಾರ್ ಕಛೇರಿಗೆ ದಾಖಲೆ ಕಳಿಸಿಲ್ಲ. ಇನ್ನು ನೀರಾವರಿಯಾಗಿದ್ದರೂ ಕೂಡಾ ತಹಶೀಲ ಕಛೇರಿಯ ಭ್ರಷ್ಟಾಚಾರದಿಂದ 10 ನಿಮಿಷದಲ್ಲೇ ಪಹಣಿ ಪತ್ರಿಕೆಯಲ್ಲಿ 'ಖುಷ್ಕಿ' (ಒಣ) ಜಮೀನು ಎಂದು ದಾಖಲೆ ಸೃಷ್ಟಿಸಿ ಜಮೀನು ಮಾರಾಟ ನಡೆಯುತ್ತಿದೆ.

ಕಳೆದ ಹತ್ತು ವರ್ಷಗಳಿಂದ ಸರಕಾರಿ ಜಮೀನು ಮಾರಾಟದ ಪ್ರಕರಣ ಶಹಾಪುರ ತಾಲೂಕು-1862 ಕೇಸ್ 4,63,24,983 ಸ್ಟಾಂಪ್ ದಾಖಲೆ ಪ್ರಕಾರ ಸುರಪುರ ತಾಲೂಕು 5,94,30,821 ಸ್ಟಾಂಪ್ ದಾಖಲೆ ಮಾರಾಟವಾಗಿದೆ. ಆದರೆ 2002-2003 ರಲ್ಲಿ ಕೇವಲ ಒಂದೇ ವರ್ಷದಲ್ಲಿ 10 ಕೋಟಿ ರೂ. ಸ್ಟಾಂಪ್ ಪೇಪರ್ ಮಾರಾಟ ದಾಖಲಾಗಿದೆ.

ಈ ಆಜ್ಞೆಯ ಜಾರಿಯ ಪರಿಣಾಮ ಏನಾಗಿದೆ?

ಪರಭಾರೆಯ ನಿಷೇಧದ ಹಿನ್ನೆಲೆಯೇನೆಂದರೆ ಸ್ಥಳೀಯ ಭೂಮಾಲಿಕರ ಹಿಡಿತ- ತಪ್ಪುತ್ತಿದೆ ಎಂಬ ಒತ್ತಡ, ಇನ್ನೂ ರಾಜಕೀಯವಾಗಿ ಕರ್ನಾಟಕದ ಬಳ್ಳಾರಿ, ಸಿರಗುಪ್ಪ, ಕಂಪ್ಲಿ, ಗಂಗಾವತಿ ರಾಯಚೂರಿನ ಸಿಂದನೂರು, ಮಾನವಿಯಲ್ಲಿ ಕಳೆದ 30-40 ವರ್ಷಗಳಿಂದ ನೆಲೆಸಿರುವ ಆಂಧ್ರದ ಶ್ರೀಮಂತ ರೈತರ ಪ್ರಭಾವ ಬೆಳೆಯುತ್ತವೆಂಬ ಕಾರಣ ಸ್ಥಳೀಯ ವಿಶೇಷವಾಗಿ ಬಿಜೆಪಿಯ ಕಿಸಾನ ಸಂಘ ವಿರೋಧಿಸುತ್ತಿದೆ.

ರೈತರು ಯಾಕೆ ಇಷ್ಟು ಪ್ರಮಾಣದಲ್ಲಿ ಭೂಮಿ ಮಾರುತ್ತಿದ್ದಾರೆ?

ಕಳೆದ 15 ವರ್ಷದಿಂದ ನೀರಾವರಿಯನ್ನು ಅಭಿವೃದ್ಧಿಪಡಿಸಿಲ್ಲ. ಶಹಪುರ, ಸುರಪುರ ತಾಲ್ಲೂಕಿನ ರೈತರಿಗೆ ಬೆಳೆದ ಬೆಳೆಗೆ ಬೆಂಬಲ ಬೇರೆ ಇಲ್ಲದೆ ನೂರಾರು ಚೀಲ ಬೆಳೆದರೂ, ಮಾಡಿದ ಒಕ್ಕಲುತನದ ಖರ್ಚು ಸರಿಯಾಗಿ ತೂಗದೇ ಸಾಲಗಾರರಾಗಿದ್ದಾರೆ. ಇನ್ನೊಂದು ಕಡೆಗೆ ಪ್ರಮುಖವಾದ ವಾಣಿಜ್ಯ ಬೆಳೆಗಳಾದ ಸೇಂಗಾ (ನೆಲೆಗಡಲೆ), ಹತ್ತಿ ಬಿತ್ತಿ ಅವು ವೇಗದಿಂದ ನಷ್ಟವಾಗಿ ಉತ್ಪಾದನೆ ಕಡಿಮೆಯಾಗಿ ಖರ್ಚು ಹೆಚ್ಚಾಗಿ, ಬೆಲೆ ಕುಸಿದು ನಷ್ಟಕ್ಕೆ ಈಡಾಗಿದ್ದಾರೆ. ಸೇಂಗಾ ರೂ.800-1000 ಹೀಗೆ ಹತ್ತಿ 800-1200 ರೂ. ಪ್ರತಿ ಕ್ವಿಂಟಲ್ ಬೆಲೆಗೆ ಮಾರಾಟ ಮಾಡಿ ಪ್ರತಿ 4-00 ಎಕರೆ ಇರುವ ಸಣ್ಣ ರೈತನಿಗೂ, 2 ಎತ್ತು ಇಟ್ಟುಕೊಂಡ ರೈತನಿಗೂ 60 ರಿಂದ 80 ಸಾವಿರ ರೂಪಾಯಿ ಹಾಗೇ10-20 ಎಕರೆ ಇದ್ದ ರೈತನಿಗೆ 1 ಲಕ್ಷದಿಂದ 2 ಲಕ್ಷ ರೂ.ವರೆಗೂ ಸಾಲವಾಗಿ ಖಾಸಗಿ ಸಾಹುಕಾರರು 100 ರೂ.ಗೆ ಶೇ.3 ರಿಂದ ಶೇ.5 ಬಡ್ಡಿಯ ಸಾಲ ಬೆಳೆದೂ ಬೆಳೆದೂ ಕೊನೆಗೆ ಜಮೀನು ಮಾರಾಟ ಮಾಡುತ್ತಿರುವುದು ಪ್ರಮುಖ ಪ್ರಶ್ನೆಯಾಗಿದೆ.

ಭೂಮಿ ಅಭಿವೃದ್ಧಿಗೊಳಿಸದೇ ಹೋದರ ಪರಿಣಾಮಗಳೇನು?

ಭ್ರಷ್ಟ ರಾಜಕೀಯ ಹಾಗೂ ಭ್ರಷ್ಟ ಗುತ್ತೇದಾರರ ಕಳಪೆ ಕೆಲಸದಿಂದ ಕಾಲುವೆ ಪ್ರಥಮ ಭಾಗದ ರೈತರಿಗೆ ನೀರು ಅಷ್ಟು ಬೇಕಾಗಿಲ್ಲ. ಹೀಗೆ ಜಮೀನಿನಲ್ಲಿ ಬಸಿ ಬಂದು ಕೇವಲ 10 ಫೀಟ್‌ಗೆ ಬೋರ್‌ವೆಲ್ ಹಾಕಿ ಬಾವಿ ತೋಡಿದರೆ ಸಾಕಾಗುವಷ್ಟು ನೀರು ಬೀಳುತ್ತಿದೆ. ಇನ್ನೊಂದು ಕಡೆಗೆ ಕಾಲುವೆ ಕೊನೆಯ (ಟೈಲೆಂಡ್) ಭಾಗದ ರೈತರಿಗೆ ನೀರು ತಲುಪದೇ ಅವರ ಬೆಳೆ ಹಾಳಾಗಿ ಅವರು ಕೂಡಾ ಸಾಲಗಾರರಾಗಿದ್ದಾರೆ. ಇದರಿಂದ ನೀರು ಬಂದಿದ್ದರೆ ಕೂಡಾ ಖುಷ್ಕಿ ಬೆಳೆಗಳಾದ ಜೋಳ, ಸಜ್ಜೆ, ಸೂರ್ಯಪಾನ, ತೊಗರಿ ಬೆಳೆಯುತ್ತಿದ್ದಾರೆ. ಇದರಿಂದ ಕಡ್ಡಾಯವಾಗಿ ನೀರಾವರಿ ಕಾಯ್ದೆ ಪ್ರಕಾರ ಕಾಲುವೆಯ ಕೊನೆಯ ಭಾಗದ ರೈತರಿಗೆ ಮೊದಲು ನೀರುಣಿಸಿ ನಂತರ ಕಾಲುವೆಯ ಪ್ರಥಮ ಹಂತದ ರೈತರ ಜಮೀನಿಗೆ ನೀರು ಸಿಗುವಂತಾಗಲು ನೀರು ಬಳಕೆದಾರ ಸಹಕಾರ ಸಂಘ ದೃಢ ನಿರ್ಧಾರ ತೆಗೆದುಕೊಂಡರೆ (ನಿಸ್ವಾರ್ಥದಿಂದ) ಮಾತ್ರ ರೈತರ ಉಳಿವು ಸಾಧ್ಯ. ಆದರೆ ಬರೀ ಕಾನೂನಿನಿಂದ ಸಾಧ್ಯವಿಲ್ಲ.

ಭೂಮಿ ಸವರ್ತೆ ಮಾಡದೇ ಹೋದರೆ ಫಲವತ್ತಾದ ಜಮೀನೂ ಕೊಚ್ಚಿ ಬೆಳೆಯು ಉತ್ಪಾದನೆ ಕಡಿಮೆಯಾಗಿದೆ. ಈಗಾಗಲೇ ಅದರ ಪರಿಣಾಮ ರೈತರಿಗೆ ಗೊತ್ತಾಗಿದೆ. ಕಳೆದ 12 ವರ್ಷಗಳ ಹಿಂದೆ ಸುರಪುರ ತಾಲ್ಲೂಕಿನ ನಾರಾಯಣಪುರ ಮತ್ತು ಹುಣಸಗಿ ಪ್ರದೇಶಗಳಲ್ಲಿ ಸರ್ಕಾರ ಜಮೀನು ಅಭಿವೃದ್ಧಿ ಸಾಲ ಕೊಟ್ಟರೂ ಸದುಪಯೋಗವಾಗಿಲ್ಲ. ಕೆಲವು ಕಡೆ ಬೆಳೆ ಬಂದರೂ ಸಾಲ ಮರುಪಾವತಿಯಾಗಿಲ್ಲ. ಕೆಲವು ಕಡೆ ಭೂಮಿ ಅಭಿವೃದ್ಧಿ ಮಾಡದೇ ಸಾಲ ಶೂಲವಾಗಿ ಬೆಳೆಯುತ್ತಿದೆ.

ಭೂಮಿಯನ್ನು ಖರೀದಿಸಿದ ಆಂಧ್ರದ ರೈತರು ಏನು ಮಾಡುತ್ತಾರೆ?

ಶ್ರೀಮಂತ ರೈತರು, ಹೆಚ್ಚು ಜಮೀನು 50-100 ಎಕರೆ ಇದ್ದ ರೈತರು ಪ್ರಾರಂಭದಲ್ಲಿ ನೀರಾವರಿ ಉಪಯೋಗ ತೆಗೆದುಕೊಂಡರು. ಕೇವಲ 3-4 ವರ್ಷಗಳಲ್ಲಿ ಅವರ ಜಮೀನು ನೋಡಿಕೊಳ್ಳುವ ಜನ ಸಿಗದೇ ಇದ್ದುದರಿಂದಲೂ ಇನ್ನೊಂದು ಕಡೆಗೆ ನೀರಾವರಿಯ ಪ್ರಾಮುಖ್ಯತೆ ಗಮನಿಸದೇ ಜಮೀನು ಪಡಾ (ಬೀಳು) ಬಿಟ್ಟಿರುವುದರಿಂದ ಜಮೀನು ಬಸಿಬಿದ್ದು, ಹಾವು, ಜ್ಯಾಲಿ ಬೆಳೆದು ಹೆಬ್ಬಾವು, ಕಾಡುಹಂದಿಗಳಿಗೆ ಆಶ್ರಯವಾಗಿದೆ. ಹೀಗೆ ಸಾವಿರಾರು ಎಕರೆ ಜಮೀನು ಪಡಬಿದ್ದು ಯಾರೂ ಕೇಳದಂತೆ ಆಗಿಬಿಟ್ಟಿತ್ತು.

ಆದರೆ ಈ ಭೂಮಿ 3-5 ಸಾವಿರ ರೂ. ಪ್ರತಿ ಎಕರೆಗೆ ಯಾರು ಕೇಳದಂತಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ಅಂತಹ ಜಮೀನುಗಳಲ್ಲಿ ಕಳೆದ 5 ವರ್ಷಗಳಿಂದ ಗುತ್ತಿಗೆ ಮಾಡಲು ಸಿಂದನೂರು, ಗಂಗಾವತಿ, ಬಳ್ಳಾರಿಯಿಂದ ಬಂದ(ಆಂಧ್ರ) ರೈತರು ಬೀಳುಬಿದ್ದ ಜಮೀನುಗಳನ್ನು ಅಭಿವೃದ್ಧಿಪಡಿಸಿ ಸಾವಿರಾರು ಚೀಲ ಬೆಳೆ ತೆಗೆದರು. ನಂತರ ಭೂಮಿ ಖರೀದಿ ಕೂಡಾ ಮಾಡಿದರು. ಈಗ 5-10 ಸಾವಿರ ರೂ. ಪ್ರತಿ ಎಕರೆ ಬೆಲೆ 2 ಲಕ್ಷ ರೂ.ಗೆ ಪ್ರತಿ ಎಕರೆ ಬೆಲೆ ಕೊಟ್ಟರೂ ಸಿಗದಂತೆ ಆಗಿದೆ. ಇನ್ನು ಜೋಗುಬಿದ್ದ ಪ್ರದೇಶದಲ್ಲಿ ಭತ್ತ ಬೆಳೆ ಬಿಟ್ಟರೆ ಬೇರೆ ಬೆಳೆ ಬೆಳೆಯಲು ಸಾಧ್ಯವಾಗಲಿಲ್ಲ. ಇನ್ನು ಸೇಂಗಾ, ಹತ್ತಿ ಬೆಳೆಗೆ ಬೆಲೆ ಇಲ್ಲದೇ ಗ್ಯಾರಂಟಿ ಇಲ್ಲದ್ದರಿಂದ, ಇದ್ದುದರಿಂದ ಭತ್ತ ಬೆಳೆದರೆ ಕನಿಷ್ಠ ಬೆಳೆ ಗ್ಯಾರಂಟಿ ಮತ್ತು ಬೆಲೆಯೂ ಸಿಗುವುದು ಎಂಬ ಕಾರಣಕ್ಕೆ ಸ್ಥಳೀಯ ರೈತರೂ ಕೂಡ ಭತ್ತ ಬೆಳೆಯಲು ಪ್ರಾರಂಭ ಮಾಡಿದ್ದಾರೆ. ಆಂಧ್ರದ ರೈತರು ಕೂಡಾ ಸುರಪುರ ತಾಲ್ಲೂಕಿನಲ್ಲಿ ಮಾತ್ರ ಭತ್ತ ಬೆಳೆಯುತ್ತಿದ್ದಾರೆ ಶಹಪುರ ತಾಲೂಕಿಗೆ ಬಂದ ಆಂಧ್ರ ರೈತರು (ಗುಂಟೂರು ಭಾಗದ) ಹತ್ತಿ, ಮೆಣಸಿನಕಾಯಿ, ಮುಸುಕಿನ ಜೋಳ ಬೆಳೆಯುತ್ತಿದ್ದಾರೆ.

ಜಮೀನು ಮಾರಾಟದ ನಿಷೇಧ ಕಟ್ಟುನಿಟ್ಟಿನಲ್ಲಿ ನಡೆದಿದೆಯಾ? ಮಾರಾಟ ನಡೆದೇ ಇದೆ ಎಂಬ ವರದಿಗಳಿವೆ, ಸತ್ಯಾಂಶ ಏನು?

ಭೂಮಿ ಮಾರಾಟ ತಡೆಯಲು ಬಡ ರೈತರಿಗೆ ಸರ್ಕಾರವೇ ಜಮೀನುಗಳ (ಮೋರ್ಟಗೇಜ್) ಮಾಡಿಸಿಕೊಂಡು ಭೂಮಿ ಸಮತಳ ಮಾಡಿ ಅಭಿವೃದ್ಧಿಪಡಿಸಲು ಇಡೀ ಒಕ್ಕಲುತನಕ್ಕೆ ಬೇಕಾದ ಹಣವನ್ನು ಪ್ರತಿ ಎಕರೆಗೆ 5-10 ಸಾವಿರ ರೂ. ಸಾಲ ನೀಡಬೇಕು. ಇನ್ನು ಅನಿವಾರ್ಯವಾದಲ್ಲಿ ಜಮೀನು ಮಾರಾಟಕ್ಕೆ ಅವಕಾಶ ನೀಡಬೇಕು. ಇಲ್ಲವಾದಲ್ಲಿ ಈಗಿರುವ ಜಮೀನು ಮಾರಿದರೂ ಸಾಲ ತೀರದೇ ಹೋದೀತು!

ಈ ಪ್ರದೇಶದ ರೈತ ಕೂಲಿಕಾರರ ನಿಜ ಸಮಸ್ಯೆ ಪರಿಹರಿಸಲು ಕೈಗೊಳ್ಳಬೇಕಾದ ಮೂಲ ಕ್ರಮ ಏನು?

ಬಡ ರೈತ- ಕೃಷಿ ಕೂಲಿಕಾರರಿಗೆ ದುಡಿಯಬೇಕೆಂಬ ಹಂಬಲವಿದ್ದರೂ ಭೂಮಿ ಇಲ್ಲ. ಇನ್ನೊಂದು ಕಡೆಗೆ ಶ್ರಮಕ್ಕೆ ತಕ್ಕ ಕೂಲಿ ಇಲ್ಲದಿದ್ದರಿಂದ ಹೆಚ್ಚು ಕೂಲಿ 100-150 ಪ್ರತಿದಿನ ಸಿಗುತ್ತದೆಂಬ ಕಾರಣ ಬಾಂಬೆ, ಬೆಂಗಳೂರು, ಹೈದ್ರಾಬಾದ್ ಪಟ್ಟಣಗಳಿಗೆ ವಲಸೆ ದಿನನಿತ್ಯ ಹೋಗುತ್ತಿದ್ದಾರೆ. ಇನ್ನು ಜಮೀನು ಗುತ್ತಿಗೆ ಹಿಡಿದು ಒಕ್ಕಲುತನ ಮಾಡುವುದು ದುಬಾರಿಯಾಗಿರುವುದರಿಂದ ಶೇ.1.2 ರಷ್ಟು ಜನ ಮಾತ್ರ ಗುತ್ತಿಗೆ ಮಾಡುತ್ತಿದ್ದಾರೆ. ಸಮಸ್ಯೆ ಪರಿಹರಿಸಬೇಕಾದರೆ ಹೆಚ್ಚುವರಿ ಜಮೀನುಗಳನ್ನು ಭೂಮಿತಿ ಕಾಯ್ದೆ ಅನ್ವಯ ಹಂಚಬೇಕು, ಅಂದರೆ ನೀರಾವರಿ 20 ಎಕರೆಗಿಂತ ಹೆಚ್ಚು ಇದ್ದು ಅದನ್ನು ಭೂಹೀನ ಕೂಲಿಕಾರರಿಗೆ ಬೇಕು.

ಸರಕಾರ ನಿಷೇಧಿಸಿದ ಔಷದಿ ಮಾರಲು ಔಷಧಿ ನಿಯಂತ್ರಣದ ಪರವಾನಗಿ



ಭಾರತ ಸರ್ಕಾರದ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಇಲಾಖೆ 14 ಅಕ್ಟೋಬರ್ 1999 ರಲ್ಲಿ ಬಿ$_1$ ಬಿ$_6$ ಬಿ$_{12}$ ಸಮ್ಮಿಶ್ರ ಔಷಧಿಗಳನ್ನು ತಯಾರಿಸಲು, ಮಾರಾಟ ಮಾಡಲು ನಿಷೇದಿಸಿತು. ಆ ನಿಷೇಧ 1.1.2001 ರಂದು ಜಾರಿಯಾಗುವಂತೆ ಆಜ್ಞೆ ಮಾಡಿತು. ಆದರೆ ಈ ಔಷಧಿಗಳು ಹಾಗೂ ಹೊಸ ಘಟಕವುಳ್ಳ ಇತರೇ ಔಷಧಿಗಳು ಮಾರುಕಟ್ಟೆಯಲ್ಲಿ ದೊರಕುತ್ತಿವೆ. ಔಷಧಿ ಮಾರುಕಟ್ಟೆಯಲ್ಲಿ ದೊರಕಲು ಸರ್ಕಾರದ / ಔಷಧಿ ನಿಯಂತ್ರಣದ ಪರವಾನಗಿ ಬೇಕೇ ಬೇಕು. ನಿಷೇಧಿತ ಔಷಧಿ ದೊರಕಲು ಔಷಧಿ ನಿಯಂತ್ರಣ ಪರವಾನಿಗೆ ನೀಡಿದೆಯೇ?


ವೈಜ್ಞಾನಿಕವಾಗಿ ಬಿ$_1$ ಬಿ$_6$ ಬಿ$_{12}$ ಔಷಧಿಯೇ ಅಲ್ಲ, ಯಾವ ಪಠ್ಯ ಪುಸ್ತಕದಲ್ಲೂ ಈ ಔಷಧಿಯ ಪ್ರಸ್ತಾವನೆ ಇಲ್ಲ. ಈ ಔಷಧಿಯನ್ನು ನೊಂದಾಯಿಸಿರುವುದೇ ಮೊದಲ ತಪ್ಪು ಹೆಜ್ಜೆ. ನಂತರ ಈ ಔಷಧಿಯ ನಿಷೇಧದ ನಾಟಕ! ಈ ಔಷಧಿ ನಿಷೇಧ 1 ವರ್ಷ 2 ತಿಂಗಳ ನಂತರ ಜಾರಿಗೆ ಬರುತ್ತಿದೆ. ನಿಷೇಧದ ನಂತರ ಜಾರಿ ಬರಲು ಸಮಯವೇಕೆ? ಈಗ ಔಷಧಿ ನಿಷೇಧವಾದರೂ ಅದು ಮಾರುಕಟ್ಟೆಯಲ್ಲಿ ಲಭ್ಯ. ಇದು ಸಾಧ್ಯವಾಗಲು ಔಷದಿ ನಿಯಂತ್ರಣವೇ ಕಾರಣ.

ನ್ಯುರೋಬಿಯಾನ್ ಔಷಧಿಯನ್ನು ಇತ್ತೀಚಿನವರೆಗೆ ವೈದ್ಯರೂ ಶ್ರದ್ಧಾಭಕ್ತಿಯಿಂದ ಉಪಯೋಗಿಸುತ್ತಿದ್ದು. ಅವರುಗಳೂ ಈ ತರಹದ ಔಷಧಿಗಳು ನಮ್ಮಲ್ಲಿ ದೊರಕಲು ಕಾರಣರಾಗುತ್ತಾರೆ.

ಕಂಪನಿ	ಔಷಧಿ	ನಿಷೇಧ
ಅಲೆನ್‌ಬರಿ	ಮ್ಯಾಕ್ರಾಬೆರಿನ್	ಮೊದಲು ದೊರಕುತ್ತಿದ್ದ ಔಷದಿ
ಮರ್ಕ	ನ್ಯೂರುಂಬಿಯಾನ್	ಮೊದಲು ದೊರಕುತ್ತಿದ್ದ ಔಷಧಿ
ಮರ್ಕ	ನ್ಯೂರುಂಬಿಯನ್	ಹೊಸ ಔಷಧಿ
ಅಲ್ಬರ್ಟ್ ಡೇವಿಡ್ ಸಿಯೋನ್ಯೂರಾನ್		ಮೊದಲು ದೊರಕುತ್ತಿದ್ದ ಔಷಧಿ

ಕಥೆ

ಹಪ್ಪಳ ತರಲು ಅಂಗಡಿಗೆ ಹೊರಟ ಪುಟ್ಟಿ, ಶಂಕುಣ್ಣಿಯಣ್ಣ ಬಂದಿದ್ದು ಒಳ್ಳೆಯದೇ ಎನಿಸಿತು. ಹಪ್ಪಳ, ಚಟ್ನಿ, ಕರಿದ ಕೊಬ್ಬರಿ ಎಣ್ಣೆಯನ್ನು ಹಾಕಿ ಸ್ವಲ್ಪ ಉಪ್ಪು ಬೆರಸಿಕೊಂಡಾಗಿನ ಊಟದ ರುಚಿಯ ಕಲ್ಪನೆ, ಶಂಕುಣ್ಣಿಯಣ್ಣನ ಸ್ನಾನಕ್ಕೆ ಕಂಚಿನ ಬಟ್ಟಲಲ್ಲಿ ಪುಟ್ಟಿ ಎಣ್ಣೆ ಕೊಟ್ಟಾಗ ಅಮ್ಮನ ಕಣ್ಣುಗಳು ಅದರಲ್ಲಿ ನೆಟ್ಟಿದ್ದು, ಅಪರಾಧಿ ದಿಟ್ಟಿಸುವಂತೆ ಮತ್ತು ಉಣ್ಣಿ ತುಂಬಾ ಹಸಿದಿರಬಹುದೆಂದ ಮೀನಾಕ್ಷಕ್ಕ. ಈ ಬಗ್ಗೆ ಓದಿರುವಿರಿ. ಮುಂದೆ..



ಕರ್ಕಟಕ

ಕನ್ನಡಕ್ಕೆ
ಡಾ. ಮೋಹನ್ ಕುಂಬಾರ್

ಎಂ.ಟಿ.ವಾಸುದೇವನ್ ನಾಯರ್

ಅಮ್ಮ ನನಗೆ ಮತ್ತು ಮೀನಾಕ್ಷ್ಯಕ್ಕನಿಗೆ ಕೇಳಿಸುವಂತೆ ಹೇಳಿದರು. ನಾನು ಕೇಳಿಸಿಕೊಳ್ಳದಂತೆ ನಟಿಸಿದೆ.

'ಹೊತ್ತು ಕಂತಲಿ. ಆಮೇಲೆ ಉಣ್ಣಬಹುದು'.

ಬಾಗೇಪುಡಿ ಕಟ್ಟಿತಂದ ಕಾಗದದ ಚೂರನ್ನು ಅಮ್ಮ ಅಂಗಳದಿಂದ ಎತ್ತಿ, ಮೆಟ್ಟಿಲಲ್ಲಿ ಬಿದ್ದ ಎಣ್ಣೆಯನ್ನು ಒರೆಸಿ, ಎಸೆಯುವಾಗ ತನಗೆ ತಾನೆ ಹೇಳಿಕೊಂಡಳು.

'ಎಣ್ಣೆಯಂಥ ಬೆಲೆ! ಆದರೆ ಅಂಡತ್ತೋಡಿನವರು ಬಂದಾಗ ನಾವು ದಾರಿದ್ರ್ಯ ತೋರಿಸಿದೆವೆಂದು ಮಾತು ಬರಬಾರದಲ್ಲ'.

ನನ್ನಲ್ಲಿ ಇದನ್ನೆಲ್ಲ ಏಕೆ ಹೇಳುತ್ತಾರೆ? ಹಪ್ಪಳ ಕಾಯಿಸಿದ ಕೊಬ್ಬರಿ ಎಣ್ಣೆ ಹಾಕಿದ ಅನ್ನದ ರುಚಿಯೇ ನನ್ನ ನಾಲಿಗೆಯಲ್ಲಿ. ಬಾಳೆಯ ಹಿಂಡಿಲಿನೆಡೆಯಿಂದ ಕತ್ತಲಿನ ಕಣಗಳು ಹೊಲೆಯರ ಹುಡುಗರಂತೆ ಅವಿತುಕೊಂಡಿರುವುದನ್ನು ನೋಡುತ್ತಾ ಕುಳಿತಿದ್ದೆ.

ಶಂಕುಣ್ಣಿಯಣ್ಣ ಮಿಂದು ಬಂದು ಮೂಡು ಜಗಲಿಗೆ ಹೋಗಿ ಅಡ್ಡದಲ್ಲಿಟ್ಟ ದೊಡ್ಡ ಪಂಚೆಯನ್ನುಟ್ಟು ಕೈಯಿಂದ ಕೂದಲು ಸರಿಪಡಿಸುತ್ತ ಒದ್ದೆಯಾದ ಬೈರಾಸವನ್ನು ನನಗೆ ಕೊಟ್ಟರು.

ಅಷ್ಟರಲ್ಲಿ ಅಚ್ಚು ಮಾವ ಬರುವ ಸದ್ದು ಕೇಳಿಸಿತು. ಅಚ್ಚುಮಾವ ದೂರದಲ್ಲಿ ಬರುವಾಗಲೇ ತಿಳಿಯುತ್ತದೆ. ತೇಗು, ವಾಯುದೋಷ.

'ಯಾರದು?' ಅಚ್ಚುಮಾವ ಅನುಮಾನಿಸುತ್ತ ಕೇಳಿದರು.

ಅಮ್ಮ ಹೇಳಿದರು 'ಅಂಡತ್ತೋಡಿನಿಂದ'

ತಕ್ಷಣ ಅಚ್ಚುಮಾವನ ಸ್ವರ ತಗ್ಗಿತು.

'ಯಾರು'?

'ಆ ಶಂಕುಣ್ಣಿ'

ಕುಪ್ಪೆಕಲ್ಲಿನ ಬಳಿ ಕಾಲು ತೊಳೆದು ಬಂದ ಶಂಕುಣ್ಣಿಯಣ್ಣ ಒರಗು ಮಂಚದ ಮೇಲೆ ಹತ್ತಿ ಕುಳಿತರು.

'ಏನು ಹೀಗೆ ದಾರಿ ತಪ್ಪಿಬಂದದ್ದು'

ಶಂಕುಣ್ಣಿಯಣ್ಣ ನಗುತ್ತ ಒರಗು ಮಂಚದಿಂದ ಎದ್ದುನಿಂತರು.

'ಕುಳಿತುಕೋ ಕುಳಿತುಕೋ'

ಅಂಡತ್ತೋಡಿನವರನ್ನು ಅಚ್ಚುಮಾವ ಕೂಡಾ ಗೌರವಿಸುತ್ತಾರೆ.

ಅಪ್ಪನ ಮನೆಯ ಅಡುಗೆ ಕೋಣೆಯಲ್ಲಿ ತೆಂಗಿನ ಗರಿಯ ರಾಶಿಯಿಂದ ಕಡ್ಡಿ ತೆಗೆದು ಹಲ್ಲಿಗೆ ಚುಚ್ಚುತ್ತಾ ಅಮ್ಮಿಣಿಯಕ್ಕನ ಕರೆಗೆ ಕಾಯುತ್ತಾ ಹಸಿದು ಕುಳಿತುಕೊಳ್ಳುವ ಶಂಕುಣ್ಣಿಯಣ್ಣನಲ್ಲಿ ಅಚ್ಚು ಮಾವನಿಗೆ ಆದರ!

ಅಚ್ಚುಮಾವ ಜೋರಾಗಿ ತೇಗಿಕೊಂಡು ಕೆಳಗಿನ ಜಗಲಿಯಲ್ಲಿ ಕುಳಿತು ಬೀಡಿ ಹಚ್ಚಿದರು.

'ತೆಂಕಲಾಗಿ ಏನು ವಿಶೇಷ?'

ಒರಗು ಮಂಚದ ಮೇಲೆ ಕಾಲು ಅಲುಗಾಡಿಸುತ್ತ ಕುಳಿತ ಶಂಕುಣ್ಣಿಯಣ್ಣ ಹೇಳಿದರು.

'ಆ.... ವಿಶೇಷವೇನೂ ಇಲ್ಲ. ಅತ್ತೆ ಹಾಗೂ ಮಕ್ಕಳ ಕ್ಷೇಮ ಸಮಾಚಾರ ತಿಳಿದು ಹೋಗೋಣವೆಂದು ಬಂದೆ'.

'ತೆಂಕಲಾಗೆಲ್ಲ ಒಮ್ಮೆ ಬರಬೇಕೆಂದು ತುಂಬಾ ಸಮಯದಿಂದ ಆಲೋಚಿಸಿದ್ದೆ. ಇನ್ನೂ ಭಾವ ಬರುವಾಗಷ್ಟೇ ಆಯಿತು. ಒಮ್ಮೆ ಗುರುವಾಯೂರು ದರ್ಶನ ಮಾಡಬೇಕು'

ಆಷಾಢದಲ್ಲಿ ಎಷ್ಟು ಬೇಗ ಕತ್ತಲಾಗುವುದು. ಚಾವಡಿ ಗೋಡೆಯ ಮೊಳೆಗೆ ಚಿಮಿಣಿ ದೀಪ ಹಚ್ಚಲಾಗಿದೆ. ಒಳಗೆ ದೇವರ ಕೋಣೆಯ ಎದುರು ಹಚ್ಚಿಟ್ಟ ಕಾಲುದೀಪ ನಂದಿಹೋಗಿದೆ. ಬತ್ತಿ ಕರಟಿದ ವಾಸನೆ ಒಂದು ನಿಮಿಷ ಗಾಳಿಯಲ್ಲಿ ತಂಗಿತು. ಅಮ್ಮ ಒಳಗೆ ಹೋಗುವಾಗ ತನ್ನಷ್ಟಕ್ಕೆ ಕೇಳಿಕೊಂಡಳು.

'ಆ ದೊಡ್ಡ ಲ್ಯಾಟೀನಿನ ಕುಪ್ಪಿ ಬಾಪ್ಪುನ ಅಂಗಡಿಗೆ ಬಂದಿಲ್ಲವೆ ಮಕ್ಕಳೆ?'

ಶುಕ್ರವಾರವಾದ್ದರಿಂದ ಓದಬೇಕಾಗಿಲ್ಲ. ಪ್ರತಿದಿನವೂ ಈ ಹೊತ್ತಿನಲ್ಲಿ ಓದುವುದಿದೆ. ಆದರೆ ಶುಕ್ರವಾರ ಅಂತಹ ಪರಿಪಾಠವಿಲ್ಲ. ಏಕೆಂದರೆ ಶನಿ, ಆದಿತ್ಯವಾರ ಹಾಗೇ ಉಳಿದಿರುತ್ತದಲ್ಲ.

ಹೊರಗೆ ಮಳೆ ಹನಿಯಲು ಆರಂಭವಾಗಿದೆ. ಪಡುವಣ ಜಗಲಿಯಲ್ಲಿ ಗೋಡೆಗೊರಗಿ ಮಲಗಿದೆ. ಅಚ್ಚುಮಾವ ಹಿಂದೊಮ್ಮೆ ಅಂಡತ್ತೋಡಿಗೆ ಹೋಗಿದ್ದಾಗ ತಿಂದ ಒಂದು ವಿಶೇಷವಾದ ಮೀನುಸಾರಿನ ಬಗ್ಗೆ ಹೇಳುತ್ತಿದ್ದಾರೆ.

ನನಗೆ ತಲೆಯೆತ್ತಲೂ ತ್ರಾಣವಿಲ್ಲ. ನಿದ್ದೆಬರುತ್ತದೆಂಬಂತೆ ತೋರಿತು. ಒಂದು ಸಣ್ಣ ಗಾಳಿ ಬೀಸಿದಾಗ ಚಳಿಯ ಒಂದು ಅಲೆ ಶರೀರವನ್ನು ಹೊಕ್ಕಂತಾಯಿತು. ಮೈ ರೋಮ ನಿಮಿರಿ ನಿಂತಂತೆ.

ಮತ್ತೆ ಚಾವಡಿಯಲ್ಲಿ ಅಮ್ಮನ ದನಿ ಕೇಳಿತು.

'ಅಚ್ಚುತ ಮೀಯುವುದಕ್ಕಿದೆಯೋ?'

'ಬೇಡ, ಮಳೆ ಆರಂಭವಾದ ಬಳಿಕ ಜಿನುಗುವುದು ನಿಂತಿಲ್ಲ. ಕೈಕಾಲು ತೊಳೆಯಬೇಕು'.

'ಆದರೆ ಶಂಕುಣ್ಣಿ ಬಾ ಊಟ ಮಾಡುವ'

ಶಂಕುಣ್ಣಿಯಣ್ಣ ಎದ್ದುನಿಂತಾಗ ಒರಗುಮಂಚ ಸದ್ದುಮಾಡಿತು.

'ಉಣ್ಣಿ ಎಲ್ಲಿ?'

'ಅವನು ಮತ್ತೆ ಊಟ ಮಾಡುತ್ತಾನೆ. ಶಾಲೆ ಬಿಟ್ಟು ಬಂದಾಗ ಉಂಡದ್ದಲ್ಲವೆ?' ಚಿಮಿಣಿ ದೀಪ ಹಿಡಿದ ಅಮ್ಮನ ಹಿಂದೆಯೇ ಶಂಕುಣ್ಣಿಯಣ್ಣ ಒಳಗೆ ಹೋಗುತ್ತಿದ್ದಾರೆ. ಆಗ ಜೋರಾಗಿ ಅಳಬೇಕೆಂದೆನಿಸಿತು.

ಎದ್ದುನಿಲ್ಲುವುದಕ್ಕೆ ತ್ರಾಣವಿಲ್ಲ. ಆದರೂ ಎದ್ದು ನಿಂತೆ. ಚಾವಡಿಗೆ ಬಂದೆ. ಗೋಡೆಯಲ್ಲಿ ಉರಿಯುವ ದೀಪದ ಸುತ್ತಲೂ ಹಾತೆಗಳು ಹಾರಾಡುತ್ತವೆ. ಅರಿಯದೆ ಒಳಗೆ ಬಿದ್ದ ರೆಕ್ಕೆಯುಳ್ಳ ಜೀವಿಯೊಂದು ದೀಪದ ಕುಪ್ಪಿಯೊಳಗೆ ಪರದಾಡುತ್ತಿದೆ. ಕತ್ತಲೆ ತುಂಬಿದ ತೆಂಕೋಣೆಗೆ ಹೋದೆ. ಉತ್ತರದ ಬಾಗಿಲಲ್ಲಿ ಕಳ್ಳನಂತೆ ಅವಿತುನಿಂತೆ. ಅಡುಗೆ ಕೋಣೆಯಲ್ಲಿ ದೊಡ್ಡ ಕುಡಿ ಬಾಳೆಲೆಯ ಹಿಂದೆ ಹುಲ್ಲುಚಾಪೆಯ ಹಾಸಿನಲ್ಲಿ ಚಕ್ಕಳಮುಂಡಿ ಹೂಡಿದ್ದಾರೆ. ಎದುರಲ್ಲಿ ಹಬೆಯಾಡುವ ಅನ್ನವಿದೆ. ಪಕ್ಕದಲ್ಲಿ ಕಾಯುತ್ತ ಕುಳಿತಿರುವ ಕಂಟಬೆಕ್ಕಿಗೆ ಹಪ್ಪಳ ಪುಡಿಮಾಡಿ ಕೊಟ್ಟು ಶಂಕುಣ್ಣಿಯಣ್ಣ ಊಟ ಮಾಡಲು ಆರಂಭ ಮಾಡಿದಾಗ ಅಮ್ಮ ಹೇಳುತ್ತಿದ್ದಳು:

'ಮಳೆ ಆರಂಭವಾದ ಮೇಲೆ ಸಮುದ್ರವೂ ಹೊತ್ತಿಹೋಗಿದೆ. ಮೀನೇನೂ ಸಿಗುವುದಿಲ್ಲ. ಸಾರು ರುಚಿಕಟ್ಟಾಗಿಲ್ಲ'.

ನಾನು ತಿರುಗಿ ಚಾವಡಿಗೆ ಬಂದೆ.

ಮನಸ್ಸಿನಲ್ಲಿ ಬೇರೆ ಏನಾದರೂ ಆಲೋಚಿಸುತ್ತಿದ್ದರೆ ಹಸಿವೆ ಗೊತ್ತಾಗುವುದಿಲ್ಲ. ಕಲ್ಲಡತ್ತೂರು ಕಾವಿನ ಜಾತ್ರೆಯ ಕುರಿತು ಆಲೋಚಿಸಿದೆ. ವೀರರಾಘವನ್ ಮೇಷ್ಟ್ರ ಚೂಪಾದ ಉಗುರಲ್ಲಿ ಚಿವುಟುವುದರಿಂದ ರಕ್ಷಣೆ ಪಡೆದ ಸಂದರ್ಭವನ್ನು ಆಲೋಚಿಸಿದೆ. ಮತ್ತೆ ಕತ್ತಲು.

ಮೀನಾಕ್ಷ್ಯಕ್ಕ ದೀಪದೊಂದಿಗೆ ಬಂದು ಕರೆದಾಗಲೇ ಕಣ್ಣು ತೆರೆದದ್ದು.

'ಬಾ ಇಷ್ಟುಬೇಗ ನಿದ್ದೆ ಬಂತೆ'?

ಚಾವಡಿಯ ಮೂಲಕ ಹೋಗುವಾಗ ಶಂಕುಣ್ಣಿಯಣ್ಣ ಮೂಡಣ ಜಗಲಿಯಲ್ಲಿ ಕುಳಿತು ಬೀಡಿ ಸೇದುತ್ತಿದ್ದರು. ಒಂದು ತೇಗು ಕೇಳಿಸಿತು. ವಾಯು ಬಾಧೆಯಿಂದಾದ ತೇಗಲ್ಲ. ಬುಟ್ಟಿಯಲ್ಲಿ ಗರಿಕೆ ಹುಲ್ಲನ್ನು ತಂದು ಹಾಕಿದರೆ ಪಾಂಡಿದನ ಹೊರಡಿಸುವ ಶಬ್ದದಂತೆ.


ಅಮ್ಮ ಅಡುಗೆ ಕೋಣೆಯಲ್ಲಿ ದೀಪದ ಸಮೀಪ ಕುಳಿತಿದ್ದಾರೆ. ಗೋಡೆಗೆ ಒರಗಿಸಿಟ್ಟ ಚಿಕ್ಕಮಣೆ ಹಾಕಿ ನಾನು ಕುಳಿತಾಗ ಮೀನಾಕ್ಷ್ಯಕ್ಕ ಬಟ್ಟಲು ತಂದಿಟ್ಟರು. ದುರ್ವಾಸನೆಯುಳ್ಳ ಮೂಟೆ ಅಕ್ಕಿ ಬೆಂದ ನೀರು! ನಾನು ಮುಖವೆತ್ತಲಿಲ್ಲ.

ಅಮ್ಮ ಗುಟ್ಟು ಹೇಳುವಂತೆ ಮೇಲುದನಿಯಲ್ಲಿ ಉಸುರಿದರು:

'ಅನ್ನವಿಲ್ಲ ಮಗುವೆ'..

ಮೀನಾಕ್ಷ್ಯಕ್ಕ ಭಾರವಾದ ಹೆಜ್ಜೆಯಿಟ್ಟು ತಿರುಗಿ ಬಂದು ನನ್ನಲ್ಲಿ ಹೇಳಿದರು:

'ಇನ್ನೂ ಸ್ವಲ್ಪ ಬಲವಂತವಾಗಿ ಅಳಿಯನಿಗೆ ತಿನ್ನಿಸಬಹುದಿತ್ತು. ಮತ್ತೆ ಮತ್ತೆ



ಕೇಳಿಬಡಿಸುತ್ತಿದ್ದರಲ್ಲ. ಅನ್ನ ಬೇಡ; ಬಸಿದ ನೀರಿಗೆ ಹಾಕಲು ಒಂದು ಹಿಡಿ ಅಗುಳಾದರೂ ಉಳಿಸಬೇಡವೆ?'

ಮೀನಾಕ್ಷ್ಯಕ್ಕ ಇಷ್ಟು ಜೋರಾಗಿ ಧೈರ್ಯವಾಗಿ ಈ ಮೊದಲು ಮಾತನಾಡಿದ್ದನ್ನು ನಾನು ಕೇಳಿಲ್ಲ.

ಅಮ್ಮ ತಲೆ ತಗ್ಗಿಸಿ ಕುಳಿತರು. ಮತ್ತು ಮೇಲುದನಿಯಲ್ಲಿ ಹೇಳಿದರು:

ಮೆಲ್ಲ ಹೇಳು ಮೀನಾಕ್ಷಿ. ನಾಳೆ ಅಂಡತ್ತೋಡಿಯವರ ಮುಖ ನಾನು ನೋಡಬೇಕು. ತಿಳಿಯಿತೋ?'

ಮೂಟೆ ಅಕ್ಕಿ ಬಸಿದ ನೀರನ್ನು ನಾಲ್ಕು ಎಲೆಸೌಟು ಕುಡಿದಾಗ ವಾಂತಿ ಬಂದಂತಾಯಿತು. ಉಪ್ಪುಹಾಕಿದ ಬಾಳೆಗಡ್ಡೆ ಒಂದು ತುಂಡು ಕಚ್ಚಿ ನೋಡಿದೆ. ತಣಿದ ಗಂಜಿತಿಳಿ ಒಳಗಿಳಿಯುವುದಿಲ್ಲ. ನಾನು ಎದ್ದು ಕೈತೊಳೆದೆ.

ರಾತ್ರಿ ನಿದ್ದೆಬರಲಿಲ್ಲ. ತೆಂಕೋಣೆಯಲ್ಲಿ ಅಮ್ಮನ ಚಾಪೆಯ ಸಮೀಪದಲ್ಲಿ ನಾನು ನಿತ್ಯವೂ ಮಲಗುವುದು. ಚಾವಡಿಯಿಂದ ಶಂಕುಣ್ಣಿಯಣ್ಣ ಗೊರಕೆ ಎಳೆಯುವುದು ಕೇಳಿಸುತ್ತಿದೆ. ಅಮ್ಮನ ಕಾಲ ಬಳಿಯಲ್ಲಿ ಚಾಪೆ ಬಿಡಿಸಿ ಮಲಗುವ ಮೀನಾಕ್ಷ್ಯಕ್ಕ ಅತ್ತ ಇತ್ತ ಹೊರಳುತ್ತಿದ್ದರು. ಒಳಗೆ ಹಸಿವು ಬೆಂಕಿಯುಂಡೆಯಾಗಿ, ಬಿಸಿಯಾದ ಹಬೆಯಾಗಿ, ನೋವಾಗಿ ಸುತ್ತ ಹರಡುತ್ತಿದೆ. ಮಂಪರು ಬರುವಂತೆ ಅನ್ನಿಸಿತು. ಗೊತ್ತಿಲ್ಲದ ತಕ್ಷಣ ಕಣ್ಣು ತೆರೆದೆ. ಅಜ್ಜಿಯ ಗೂರಲು ಕೆಮ್ಮು ಮತ್ತು ದೂರದಿಂದ ಜೀರುಂಡೆಗಳ ಚೀರಾಟ ಕೇಳಿಸುತ್ತಿದೆ. ದೂರದ ಗದ್ದೆಗಳಲ್ಲಿ ವರಗುಟ್ಟುವ ಕಪ್ಪೆಗಳ ದನಿ ಕೆಲವೊಮ್ಮೆ ಹೆಚ್ಚು ಹೆಚ್ಚಾಗಿ, ಕಿವಿಯ ಸಮೀಪ ಬಂದಂತೆ ಭಾಸವಾಗುತ್ತದೆ. ಮತ್ತೆ ದೂರವಾಗುತ್ತಿತ್ತು.

'ಮೀನಾಕ್ಷ್ಯಿ, ನಿದ್ದೆ ಬಂತಾ?'

ಅಮ್ಮನ ಪ್ರಶ್ನೆ.

'ಉಂ. ಉಂ'

'ಅಮೀನಮ್ಮನ ಹತ್ತಿರ ಹಣವಿರಬಹುದು. ಬೆಳಗ್ಗೆ ಹೋಗಿ ಎರಡು ರೂಪಾಯಿ ಕೊಡಲು ಹೇಳಬೇಕು. ಉಣ್ಣಿಯ ಅಪ್ಪನಿಂದ ಹಣ ಬಂದಾಗ ಕೊಡೋಣವೆಂದು ಹೇಳು ಶಂಕುಣ್ಣಿ ನಾಳೆ ಬೆಳಗ್ಗೆ ಹೊರಟರೆ ಎರಡು ರೂಪಾಯಿಯಾದರೂ ದಾರಿ ಖರ್ಚಿಗೆಂದು ಕೊಡಬೇಡವೆ?'

ಮೀನಾಕ್ಷ್ಯಕ್ಕ ಮಾತನಾಡಲಿಲ್ಲ.

'ಬಸ್ಸಿನ ಹಣವಷ್ಟೇ ಕೊಟ್ಟರೂ ಸಾಲದು. ಬೆಳಗ್ಗೆ ಒಂದಿಷ್ಟು ಚಾಹುಡಿಗೆ ಏನು ಮಾಡುವುದು?

ಮೀನಾಕ್ಷ್ಯಕ್ಕ ಮಾತನಾಡಲಿಲ್ಲ.

'ಹೋದರೂ ಹೋಗದಿದ್ದರೂ ಬೆಳಿಗ್ಗೆ ಒಂದು ಗ್ಲಾಸು ಚಹಾ ಕೊಡಬೇಡವೆ?

ಅಂಡತ್ತೋಡಿನವರು ಬಂದಾಗ ನಾವು ತ... ಮರ್ಯಾದೆಯಾದರೂ ಮಾಡಬೇಡವೆ?'

ಸ್ವಲ್ಪ ತಡೆದು ಅಮ್ಮ ಹೇಳಿದರು:

'ಮೀನಾಕ್ಷ್ಯಿಗೆ ಎಷ್ಟು ಬೇಗ ನಿದ್ದೆ ಹತ್ತುತ್ತದೆ. ಸುತ್ತಲೂ ಹರಡಿರುವ ತಣ್ಣನೆಯ ರಾತ್ರಿಯ... ಚಾವಡಿಯಿಂದ ಶಂಕುಣ್ಣಿಯಣ್ಣ ಗೊರಕೆ ಸದ್ದು ಒಂದು ಕೇರೆ ಹಾವಿನಂತೆ ಹರಿದಾಡುತ್ತಿತ್ತು.

ನಾನು ಕಣ್ಣುಮುಚ್ಚಿ ಕವುಚಿ ಮಲಗಿದೆ. ದೊ... ಹೊದಿಕೆಯನ್ನು ನನ್ನ ಮೇಲೆ ಹಾಕಿ ಮು... ಮೈದಡವಿ ಅಮ್ಮ ಹೇಳಿದರು.

'ಪಾಪ ಹುಡುಗ ಮಲಗಿದ. ಒಮ್ಮೆ ಮಲ... ನಿದ್ರಿಸಿದರೆ ಸಾಕಾಗಿತ್ತು. ನನ್ನ ಗುರುವಾಯೂರಪ್ಪಾ...

(ಮುಗಿಯಿತು)

ಕೃಷ್ಣರಾಜಪುರ ನಗರಸಭಾ ಚುನಾವಣೆ...

ಪುಟ 3 ರಿಂದ

ಕ್ಷೇತ್ರದಲ್ಲಿ ಹೇಳಿಕೊಳ್ಳುವಂತಹ ಕೆಲಸಗಳನ್ನು ಮಾಡಲಿಲ್ಲ.

ಇವರಿಬ್ಬರ ಆರ್ಥಿಕ ನೀತಿಗಳ ವಿರುದ್ಧವಾಗಿಯಾಗಲೀ ಸಿಎಂಸಿ ಭ್ರಷ್ಟಾಚಾರದ ವಿರುದ್ಧವಾಗಲೀ, ಅಭಿವೃದ್ಧಿ ಕಾಮಗಾರಿಗಳಿಗೆ ಆಗ್ರಹಿಸಿಯಾಗಲೀ ಬೀದಿಗಿಳಿದು ಸೆಣಸಾಡಿದವರೂ ಅಲ್ಲ. ಕಾರ್ಖಾನೆಗಳು ಮುಚ್ಚಿ ಸಾವಿರಾರು ಕಾರ್ಮಿಕರು ಬೀದಿಪಾಲಾದಾಗ ಕಾರ್ಮಿಕರ ಪರವಾಗಿ ನಿಂತವರೂ ಅಲ್ಲ. ನಿಮ್ಮ ದುರ್ಬಲತೆಯೆ ನಮಗೆ ಲಾಭವೆಂದು ಕಾಂಗ್ರೆಸ್ ಬಿಜೆಪಿಗೆ ಪರ್ಯಾಯವಾಗಿ ಸ್ಪರ್ಧಿಸಿದೆ ಈ ಪಕ್ಷ.

ಸಿಪಿಐ(ಎಂ) ಹತ್ತಾರು ಜನಪರ ಹೋರಾಟಗಳ ಹಿನ್ನೆಲೆಯಲ್ಲಿ ಜನರ ನಡುವೆ ಕೆಲಸ ಮಾಡುವ ಅಭ್ಯರ್ಥಿಗಳನ್ನು ಆರಿಸಿ ಕಣಕ್ಕಿಳಿಸಿದೆ. 35 ವಾರ್ಡುಗಳ ಕೃಷ್ಣರಾಜಪುರ ನಗರಸಭೆ ಪ್ರತಿಷ್ಠಿತ ಕಣವಾಗಿ ಸಜ್ಜಾಗಿದೆ. ಇದೇತಿಂಗಳ 10 ಕ್ಕೆ ನಡೆಯಲಿರುವ ಚುನಾವಣೆಗೆ ಇದೇ ಮೊದಲಬಾರಿಗೆ ಸಿಪಿಐ(ಎಂ) ಪಕ್ಷ ಏಳು ವಾರ್ಡುಗಳಲ್ಲಿ ಸ್ಪರ್ಧೆಗಿಳಿದಿದೆ.

ಜನಪರ ಅಭ್ಯರ್ಥಿಗಳನ್ನು ಗೆಲ್ಲಿಸುವ ಮೂಲಕ ನಗರಸಭೆಯ ಸಭೆಗಳಲ್ಲಿ ನಿರಂತರ ಭಾಗವಹಿಸಿ ಜನಸಾಮಾನ್ಯರ ಸಮಸ್ಯೆಗಳನ್ನು ಬಿಂಬಿಸಲು ಜೊತೆಗೆ ತೀರ್ಮಾನಗಳನ್ನು ಕೈಗೊಳ್ಳಲು ಅಭಿವೃದ್ಧಿ ಕಾರ್ಯಗಳನ್ನು ಪ್ರಾಮಾಣಿಕವಾಗಿ, ಪಾರದರ್ಶಕವಾಗಿ ಜನರಿಗೆ ತಲುಪಿಸಲು ಅವಕಾಶ ಕಲ್ಪಿಸಬೇಕಾಗಿದೆ.

ವರದಿ : ಎನ್.ಪ್ರಭಾ...

ನೇಪಾಳದಲ್ಲಿ ಪುನಃ ರಾಜಕೀಯ ಬಿಕ್ಕಟ್ಟು

ನೇಪಾಳದ ರಾಜ ಜ್ಞಾನೇಂದ್ರರ ಇತ್ತೀಚಿಗಿನ ...ಜಾಪ್ರಭುತ್ವ ಮುರಿಯುವ ಕ್ರಮ ಪುನಃ ...ಜಕೀಯ ಬಿಕ್ಕಟ್ಟು ಸೃಷ್ಟಿಸಿದೆ. ಬಿರೇಂದ್ರ ...ಮಿಸಿದ ಹೊಸ ಪ್ರಧಾನಿ ಥಾಪಗೆ ...ರ್ಲಿಮೆಂಟಿನ ಪ್ರಮುಖ ಪಕ್ಷಗಳ ಒಪ್ಪಿಗೆ ಇಲ್ಲ. ...ಮ ಪಕ್ಷಗಳು 'ಜನತಾ ಚಳುವಳಿ'ಗೆ ಕರೆಕೊಟ್ಟಿವೆ. ...ಣ್ಣೊಂದು ಕಡೆ ಮಾವೋವಾದಿ ಗೆರಿಲ್ಲಾ - ...ಪಾಳಿ ಸೈನ್ಯದ ನಡುವೆ ಕದನವಿರಾಮ ...ರ್ಣಟ್ಟರೂ ರಕ್ತಪಾತ ಮುಂದುವರೆದಿದೆ. ...ರಿಕ ಈ ಬಿಕ್ಕಟ್ಟು ಬಳಸಿ ಮೂಗು ...ರಿಸುತ್ತಿದೆ. ರಾಜನಿಗೆ ಮಿಲಿಟರಿ-ರಾಜಕೀಯ ...ಬಲ ಕೊಡುತ್ತಿದೆ. ಭಾರತ ಸಹ ಅಮೆರಿಕದ ...ತಿಯ ಹಿಂಬಾಲಕವಾಗಿದೆ. ಇದು ಪರಿಸ್ಥಿತಿಯನ್ನು ...ಲ್ಬಣಗೊಳಿಸಲಿದೆ.



...ರಾಜ ಜ್ಞಾನೇಂದ್ರ ರಾಷ್ಟ್ರೀಯ ಪ್ರಜಾತಂತ್ರ ...ಲಿಸ ಬಹುದಾದ ಥಾಪಾರನ್ನು ಪ್ರಧಾನಿಯಾಗಿ ...ಸಿದ್ದಾರೆ. ಅವರ ಈ ಕ್ರಮ ಪುನಃ ರಾಜಕೀಯ ...ಟ್ಟನ್ನು ಉಲ್ಬಣಗೊಳಿಸಿದೆ. ಥಾಪಾ ಸಣ್ಣ ...ನ-ಪರ ಬಲಪಂಥೀಯ ರಾಷ್ಟ್ರೀಯ ...ತಂತ್ರ ಪಕ್ಷದ ನಾಯಕ. ಇದಕ್ಕಿಂತ ಮೊದಲು ...ರೆ ರಾಜ ನೇಮಿಸಿದ್ದ ಪ್ರಧಾನಿ ಲೋಕೇಂದ್ರ ...ದೂರ ಚಾಂದ್ ರ ವಿರುದ್ಧ ಎಲ್ಲಾ ...ಕೀಯ ಪಕ್ಷಗಳು ನಡೆಸಿದ್ದ ಚಳುವಳಿಯ ...ಡಕ್ಕೆ ಮಣಿದು, ಚಾಂದ್ ರಾಜೀನಾಮೆ ...ದ್ದರು. ಎಲ್ಲಾ ರಾಜಕೀಯ ಪಕ್ಷಗಳಿಗೆ ...ಗೆಯಾಗುವ ಪ್ರಧಾನಿಯನ್ನು ನೇಮಿಸುವುದಾಗಿ ...ಜ್ಞಾನೇಂದ್ರ ಭರವಸೆ ನೀಡಿದ್ದರು. ನೇಪಾಳದ ...ಕೀಯ ಪಕ್ಷಗಳು ಒಂದು ಒಮ್ಮತದ ಹೆಸರು ...ಚಿಸಲಾರವು ಎಂದು ಜ್ಞಾನೇಂದ್ರರ ಎಣಿಕೆಯಾಗಿತ್ತು. ವಿರೋಧ ಪಕ್ಷಗಳು ಒಕ್ಕೊರಲಿಂದ ಮಾಧವ ನೇಪಾಳರ ಹೆಸರನ್ನು ಸೂಚಿಸಿದಾಗ ರಾಜನಿಗೆ ಫಜೀತಿಗೆ ಇಟ್ಟುಕೊಂಡಿತು. ಮಾಧವ ಕುಮಾರ ನೇಪಾಳ ಅಲ್ಲಿನ ಕಮ್ಯುನಿಷ್ಟ ಪಕ್ಷ (ಐಕ್ಯ ಮಾರ್ಕ್ಸವಾದಿ ಲೆನಿನ್‌ವಾದಿ)ದ ಕಾರ್ಯದರ್ಶಿ. ಜ್ಞಾನೇಂದ್ರ ಆ ಸೂಚನೆ ಕಡೆಗಣಿಸಿ ಥಾಪಾರನ್ನು ಪ್ರಧಾನಿಯಾಗಿ ನೇಮಿಸಿದ್ದು, ರಾಜಕೀಯ ಬಿಕ್ಕಟ್ಟು ಉಲ್ಬಣಗೊಂಡಿದೆ.

ಪ್ರಜಾಸತ್ತೆ ಪುನಃ ಸ್ಥಾಪನೆಗೆ 'ಜನತಾ ಚಳುವಳಿ'

ನೇಪಾಳಿ ಕಮ್ಯುನಿಸ್ಟ್ ಪಕ್ಷ(ಐಕ್ಯ ಮಾರ್ಕ್ಸವಾದಿ-ಲೆನಿನ್ ವಾದಿ), ನೇಪಾಳಿ ಕಾಂಗ್ರೆಸ್, ನೇಪಾಳಿ ವರ್ಕರ್ಸ್ ಪಾರ್ಟಿ, ನೇಪಾಳಿ ಪೀಪಲ್ಸ್ ಫ್ರಂಟ್, ಸದ್ಭಾವನಾ ಪಾರ್ಟಿ ಈ ಐದು ರಾಜಕೀಯ ಪಕ್ಷಗಳು ವ್ಯಾಪಕ ಜನತಾ ಚಳುವಳಿಗೆ ಕರೆಕೊಟ್ಟಿವೆ. ರಾಜ ಬೀರೇಂದ್ರ ನಾಶ ಮಾಡಿರುವ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಪುನಃ ಸ್ಥಾಪಿಸಲು ಜನತೆಯ ಒತ್ತಡ ತರುವುದೇ ಇದರ ಉದ್ದೇಶ. ನೇಪಾಳದ ಗ್ರಾಮೀಣ ಪ್ರದೇಶಗಳಲ್ಲಿ ಸರಕಾರದ ಜತೆ ಸಶಸ್ತ್ರ ಹೋರಾಟದಲ್ಲಿ ತೊಡಗಿರುವ ಮಾವೋವಾದಿ ಗುಂಪುಗಳೂ ಇದಕ್ಕೆ ಬೆಂಬಲ ಸೂಚಿಸಿವೆ.

ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ನೇಪಾಳದಲ್ಲಿ ಇನ್ನೂ ಎಳಸು. ಅದು ಪಕ್ವವಾಗಿ ಬೆಳೆಯದಂತೆ ನೇಪಾಳದ ರಾಜಮನೆತನ, ವಿದೇಶಿ ಪ್ರತಿಗಾಮಿ ಶಕ್ತಿಗಳು ಎಂದಿನಿಂದಲೂ ಪ್ರಯತ್ನಿಸುತ್ತಿವೆ. ನೇಪಾಳ ಭೌಗೋಳಿಕವಾಗಿ ಆಯಕಟ್ಟಿನ ಪ್ರದೇಶದಲ್ಲಿದೆ. ರಾಜಕೀಯ, ಸಾಮಾಜಿಕ, ಆರ್ಥಿಕ ಸಮಾನತೆಗೆ ನೇಪಾಳಿ ಜನತೆಯ ಕಾಳಜಿಗೆ ಜಯವಾದರೆ ಎಂಬ ಭಯ ಈ ಶಕ್ತಿಗಳಿಗೆ. ಹಿಂದಿನ ರಾಜ ಬೀರೇಂದ್ರರಿಗೆ ಸಹ ಪಾರ್ಲಿಮೆಂಟಿನ ಜತೆ ಆಗಾಗ ಘರ್ಷಣೆ ಆಗುತ್ತಿತ್ತು. ನೇಪಾಳಿ ಪ್ರಜಾಪ್ರಭುತ್ವ ವ್ಯವಸ್ಥೆ ಸ್ಥಾಪನೆ ಆಗಿದ್ದು ದೀರ್ಘ ಜನತಾ ಚಳುವಳಿ ನಂತರ. ಈ ಚಳುವಳಿಯನ್ನು ನೇಪಾಳಿ ಕಾಂಗೆಸ್ ಮತ್ತು ಕಮ್ಯುನಿಸ್ಟ್ ಪಕ್ಷ ಜಂಟಿಯಾಗಿ ನಡೆಸಿದ್ದವು. ಎರಡು ವರ್ಷಗಳ ಹಿಂದೆ ರಾಜ ಬೀರೇಂದ್ರ ಮತ್ತು ಕುಟುಂಬದ ನಿಗೂಢ ಕೊಲೆಯ ನಂತರ ಜ್ಞಾನೇಂದ್ರ ರಾಜನಾದ ಮೇಲೆ ಪರಿಸ್ಥಿತಿ ಬಿಗಡಾಯಿಸಿದೆ. ಪ್ರಜಾಪ್ರಭುತ್ವ ವ್ಯವಸ್ಥೆ ಮೇಲೆ ನಿತ್ಯ ಹಲ್ಲೆಗಳಾಗುತ್ತಿವೆ. ಕಳೆದ ಅಕ್ಟೋಬರ್‌ನಲ್ಲಿ ನೇಪಾಳಿ ಕಾಂಗ್ರೆಸ್‌ನ ಒಳಜಗಳಗಳನ್ನು ಬಳಸಿ, ರಾಜ ಆಗಿನ ಪ್ರಧಾನಿ ಶೇರ್ ಬಹದ್ದೂರ್ ದೇಬಾ ಸರ್ಕಾರ ವಜಾ ಮಾಡಿದ್ದ. ನವಂಬರ್‌ನ ಪಾರ್ಲಿಮೆಂಟರಿ ಚುನಾವಣೆಗಳನ್ನು ಅನಿರ್ದಿಷ್ಟವಾಗಿ ಮುಂದೆ ಹಾಕಿದ. ಕೈಗೊಂಬೆ ಪ್ರಧಾನಿ ನೇಮಿಸಿದ್ದ. ಮಾವೋವಾದಿ ಗೆರಿಲ್ಲಾಗಳ ಸಶಸ್ತ್ರ ದಂಗೆಯ ಸಮಸ್ಯೆಯನ್ನು ರಾಜಕೀಯ ಮಾತುಕತೆ ಮೂಲಕ ಬಗೆಹರಿಸುವ ಬದಲು, ಮಿಲಿಟರಿ ಪರಿಹಾರಕ್ಕೆ ಒತ್ತು ನೀಡಿದ್ದ. ಇದು ಬಿಕ್ಕಟ್ಟನ್ನು ಇನ್ನಷ್ಟು ಉಲ್ಬಣಗೊಳಿಸಿತ್ತು.

ಮೂಗು ತೂರಿಸುತ್ತಿರುವ ಅಮೆರಿಕ

ಅಮೆರಿಕದ ಮೂಗು ತೂರಿಸುವಿಕೆ

ಆದರೆ ಮಿಲಿಟರಿ ಪರಿಹಾರ ಕೆಲಸ ಮಾಡದೆ ರಾಜ ಮಾವೋವಾದಿಗಳ ಜತೆ ಮಾತುಕತೆಗೆ ಇಳಿಯಬೇಕಾಯ್ತು. ಈಗ ಕದನ ವಿರಾಮ ಜಾರಿಯಲ್ಲಿದ್ದು, ಇತರ ವಿಷಯಗಳ ಬಗ್ಗೆ ಮಾತುಕತೆ ನಡೆಯುತ್ತಿದೆ. ಆದರೆ ಈ ನಡುವೆ ಅಮೆರಿಕ ಮಾವೋವಾದಿ ಪಕ್ಷವನ್ನು 'ಭಯೋತ್ಪಾದಕ ಸಂಘಟನೆ' ಎಂದು ಘೋಷಿಸಿದೆ. ಸರ್ಕಾರ ಮತ್ತು ಮಾವೋವಾದಿಗಳು ಮಾತುಕತೆ ನಡೆಸುತ್ತಿರುವಾಗಲೇ, ಅಮೆರಿಕ ನೇಪಾಳ ಸರ್ಕಾರದ ಜತೆ ಐದು ವರ್ಷಗಳ ಮಿಲಿಟರಿ ಒಪ್ಪಂದ ಮಾಡಿಕೊಂಡಿದೆ. ಇದರನ್ವಯ ಶಸ್ತ್ರಾಸ್ತ್ರ ಮತ್ತು ಹಣಕಾಸು ಎರಡೂ ರೂಪಗಳಲ್ಲಿ ಮಿಲಿಟರಿ 'ನೆರವು' ಇರುತ್ತದೆ. 'ಭಯೋತ್ಪಾದಕತೆ ವಿರುದ್ಧ ಹೋರಾಟದಲ್ಲಿ ಸಹಕಾರ ಮತ್ತು ಭಯೋತ್ಪಾದಕ ದಾಳಿಗಳನ್ನು ತಡೆಗಟ್ಟುವುದು' ಮಿಲಿಟರಿ ನೆರವಿನ ಉದ್ದೇಶ. ಇದು ಪ್ರಜಾಸತ್ತೆ ಪರ ಶಕ್ತಿಗಳನ್ನು ದುರ್ಬಲಗೊಳಿಸಿ, ರಾಜಸತ್ತೆಯನ್ನು ಬಲಗೊಲಿಸುತ್ತದೆ. ಯಾಕೆಂದರೆ ರಾಜಸತ್ತೆ ಪರ ರಾಜಕೀಯ ಶಕ್ತಿಗಳು ಬಹಳ ಕ್ಷೀಣವಾಗಿವೆ. ರಾಜಸತ್ತೆ ಪರ ಇರುವುದು ಮಿಲಿಟರಿ ಮಾತ್ರ. ಈ ಮೂಲಕ ಅಮೆರಿಕ ನೇಪಾಳದ ಆಂತರಿಕ ರಾಜಕಾರಣದಲ್ಲಿ ಮೂಗು ತೂರಿಸುತ್ತಿದೆ. ದುರದೃಷ್ಟವಶಾತ್ ಭಾರತ ಸರ್ಕಾರ ಸಹ ಇದೇ ನೀತಿಯನ್ನು ಪಾಲಿಸುತ್ತಾ, ಅಮೆರಿಕವನ್ನು ಹಿಂಬಾಲಿಸುತ್ತಿದೆ. ನೇಪಾಳಕ್ಕೆ ಮಿಲಿಟರಿ ಬೆಂಬಲವನ್ನು ಗಮನಾರ್ಹವಾಗಿ ಏರಿಸಿದೆ. ರಾಜನ ಬಾಲಬುಡುಕ ಪ್ರಧಾನಿಗೆ ಅಭಿನಂದನೆ ಕಳಿಸಲಾಗಿದೆ. ಅದೇ ಸಮಯದಲ್ಲಿ 'ನೇಪಾಳದಲ್ಲಿ ಬಹು-ಪಕ್ಷೀಯ ಪ್ರಜಾಪ್ರಭುತ್ವ' ಪುನಃ ಸ್ಥಾಪಿಸುವ ಕ್ಷೀಣ ಕೋರಿಕೆ ವ್ಯಕ್ತಪಡಿಸಲಾಗುತ್ತಿದೆ. ಇದು ನೇಪಾಳದ ಜನತೆ ಭಾರತ ಮತ್ತು ಅಮೆರಿಕವನ್ನು ಒಂದೇ ದೃಷ್ಟಿಯಿಂದ (ಆತಂಕ, ಕೋಪ, ಸಂಶಯ)ನೋಡುವ ಸಾಧ್ಯತೆಯನ್ನು ಬಲಪಡಿಸಲಿದೆ. ಶಾಂತಿಯುತ ನೆರೆಹೊರೆ, ಭ್ರಾತೃತ್ವ, ಸಹಕಾರದ ಭಾವನೆಯನ್ನು ಕ್ಷೀಣಿಸಿ ಪರಿಸ್ಥಿತಿ ಬಿಗುವು ಗೊಳಿಸಲಾಗಿದೆ.

ನೇಪಾಳಿ ಜನತೆಯ ಆಕ್ರೋಶ

ಆದರೆ ಇವ್ಯಾವೂ ನೇಪಾಳಿ ರಾಜಸತ್ತೆಯನ್ನು ಜನತೆಯ ಕೋಪದಿಂದ ಬಚಾವು ಮಾಡುವ ಸಾಧ್ಯತೆ ಇಲ್ಲ. ಪ್ರಸ್ತುತ ಪರಿಸ್ಥಿತಿ ಬಗ್ಗೆ ಜನತೆಯಲ್ಲಿ ಕೋಪ, ಪ್ರತಿರೋಧ ವ್ಯಾಪಕವಾಗಿದೆ. ಶೇಕಡಾ 42 ನೇಪಾಳಿಗಳು ಬಡತನದ ರೇಖೆಯ ಕೆಳಗೆ ಇದ್ದಾರೆ. ಕಠ್ಮಂಡು ಮತ್ತು ನೇಪಾಳದ ಗ್ರಾಮೀಣ ಪ್ರದೇಶಗಳ ನಡುವಣ ಬೆಳವಣಿಗೆಯ ಹಂತದಲ್ಲಿ ಕಂದರ ಅಗಾಧವಾಗಿದೆ. ನೇಪಾಳದಲ್ಲಿ ಕಳೆದ ಕೆಲವು ದಶಕಗಳಲ್ಲಿ ಆದ ಆರ್ಥಿಕ ಬೆಳವಣಿಗೆ ಬಹುಸಂಖ್ಯಾತ ಜನತೆಯನ್ನು ಮುಟ್ಟೇ ಇಲ್ಲ. ಆರ್ಥಿಕ ಪರಿಸ್ಥಿತಿ ಸಹ ಕಳೆದ ಕೆಲವು ವರ್ಷಗಳಲ್ಲಿ ಬಿಗಡಾಯಿಸಿದೆ. ನೇಪಾಳದ 'ಆಧುನಿಕ' ಆರ್ಥಿಕ ಕ್ಷೇತ್ರಗಳಾದ ವ್ಯಾಪಾರ, ಕೈಗಾರಿಕಾ ಉತ್ಪಾದನೆ, ಪ್ರವಾಸೋದ್ಯಮ ಕ್ಷೀಣವಾಗಿದೆ. (ಶೇಕಡಾ 11,10 ಮತ್ತು 27 ರಷ್ಟು ಅನುಕ್ರಮವಾಗಿ). ಕಳೆದ ಒಂದು ದಶಕದಲ್ಲಿ ರತ್ನಗಂಬಳಿ ಮತ್ತು ಬಟ್ಟೆಯಲ್ಲಿ ತೊಡಗಿರುವ ಕಾರ್ಮಿಕರ ಸಂಖ್ಯೆ ಅರ್ಧದಷ್ಟು ಆಗಿದೆ. ಇವೆರಡು ಅತ್ಯಂತ ಹೆಚ್ಚಿನ ಉದ್ಯೋಗ ಸೃಷ್ಟಿಸಿದ್ದ ಕೈಗಾರಿಕೆಗಳು. ಈಗಾಗಲೇ ಕೆಟ್ಟ ಪರಿಸ್ಥಿತಿಯಲ್ಲಿದ್ದ ಕೃಷಿ ವಿಶ್ವಬ್ಯಾಂಕ್-ಮಾದರಿಯ 'ಸುಧಾರಣೆ'ಗಳಿಂದ ಇನ್ನಷ್ಟು ಹದಗೆಟ್ಟಿದೆ. ಆಹಾರ ಧಾನ್ಯಗಳಲ್ಲಿ ಸ್ವಯಂಪರಿಪೂರ್ಣವಾಗಿದ್ದ ನೇಪಾಳ, ಈಗ ಆಹಾರಧಾನ್ಯಗಳನ್ನೂ ಆಮದು ಮಾಡುತ್ತಿದೆ.

ಇದರ ವಿರುದ್ಧ ಪ್ರತಿರೋಧ ಭುಗಿಲೆದ್ದಿದೆ. ಇತ್ತೀಚೆಗೆ ಪೆಟ್ರೋಲ್ ಬೆಲೆ ಶೇಕಡಾ 65 ರಷ್ಟು ಹೆಚ್ಚಿಸಿದಾಗ ಕಠ್ಮಂಡು ಹತ್ತಿ ಉರಿಯುವ ಪ್ರಖರತೆಯ ದೊಡ್ಡ ಪ್ರತಿಭಟನೆಗಳು ನಡೆದಿವೆ. ಇತ್ತೀಚೆಗೆ ಜೀತದಾಳುಗಳ ಭಾರಿ ಚಳುವಳಿ ನಡೆದಿತ್ತು. ಈಗ ಪಾರ್ಲಿಮೆಂಟು ಪ್ರಜಾಪ್ರಭುತ್ವ ವ್ಯವಸ್ಥೆ ಪುನಃ ಸ್ಥಾಪಿಸಲು ವ್ಯಾಪಕ 'ಜನತಾ ಚಳುವಳಿ' ನಡೆಯುತ್ತಿದೆ. ಆದ್ದರಿಂದ ನೇಪಾಳ, ಅಮೆರಿಕಾ, ಭಾರತ ಸರ್ಕಾರಗಳು ಬಯಸುವ ರಾಜಕೀಯ ಸುಸ್ಥಿರತೆಯನ್ನು ಮಿಲಿಟರಿ ಮೂಲಕ ಹೊರಿಸಲು ಸಾಧ್ಯವಿಲ್ಲ. ನೇಪಾಳಿ ಜನತೆಯ ಆರ್ಥಿಕ, ಸಾಮಾಜಿಕ ಆಕಾಂಕ್ಷೆಗಳನ್ನು ಪೂರೈಸುವುದರ ಮೂಲಕ ಮಾತ್ರ ಇದು ಸಾಧ್ಯ.

ಭಾರತದಲ್ಲಿ 'ಕ್ಯೂಬಾ ಸೌಹಾರ್ದತಾ ಮಾಸ' ಆಚರಣೆ
...ಮೊಂಕಾಡಾ ದಾಳಿಯ 50 ನೇ ವಾರ್ಷಿಕೋತ್ಸವ ಕ್ಯೂಬಾದಲ್ಲಿ

ಕ್ಯೂಬಾ 'ಮೊಂಕಾಡಾ ಮಿಲಿಟರಿ ನೆಲೆಗಳ ...ಲೆ ದಾಳಿ'ಯ 50 ನೇ ವಾರ್ಷಿಕೋತ್ಸವ ...ರಿಸುತ್ತಿದೆ. ಇದು ಕ್ಯೂಬಾದ ಸಶಸ್ತ್ರ ...ಂತಿಕಾರಿ ಹೋರಾಟದ ಆರಂಭದ ...ೀರಾಟವಾಗಿತ್ತು. ಇದಕ್ಕೆ ಅಮೆರಿಕನ್ ...ಮ್ರಾಜ್ಯಶಾಹಿ ಕೈಗೊಂಬೆ ಸರ್ವಾಧಿಕಾರಿ ...ಟಿಸ್ಟಾ ವಿರೋಧಿ ಹೋರಾಟದಲ್ಲಿ ಚಾರಿತ್ರಿಕ ...ಹತ್ವವಿದೆ. ಜುಲೈ 26, 1953 ರಂದು (50 ...ರ್ಷಗಳ ಹಿಂದೆ) ಫಿಡೆಲ್ ಕ್ಯಾಸ್ಟ್ರೋ ...ಯಕತ್ವದಲ್ಲಿ 160 ಕ್ರಾಂತಿಕಾರಿಗಳು ...ಂಕಾಡಾದ ಮಿಲಿಟರಿ ನೆಲೆಗಳ ಮೇಲೆ ದಾಳಿ ...ಸಿದ್ದರು. ಮೊಂಕಾಡಾ ಚಿಲಿಯ ಎರಡನೇ ದೊಡ್ಡ ನಗರವಾದ 'ಸ್ಯಾಂಟಿಯಗೋ ಡಿ ...ಬಾ' ದಲ್ಲಿರುವ ಮಿಲಿಟರಿ ನೆಲೆ. ಈ ...ದ 'ಮೊಂಕಾಡಾ ದಾಳಿ'ಯ ...ರ್ಷಿಕೋತ್ಸವ ವಿಶೇಷ ಮಹತ್ವ ಹೊಂದಿತ್ತು. ...ಹೋರಾಟದ ಚಿನ್ನದ ಹಬ್ಬವಾದ್ದರಿಂದ ಮಾತ್ರವಲ್ಲ. ಪುನಃ ಅಮೆರಿಕ ಕ್ಯೂಬಾದ ಸಾರ್ವಭೌಮತ್ವ ಪ್ರಶ್ನಿಸುವ, ಹರಣ ಮಾಡುವ ಪ್ರಯತ್ನಗಳನ್ನು ಹೆಚ್ಚಿಸಿರುವ ಹಿನ್ನೆಯಲ್ಲಿ ಇದು ಆಗುತ್ತಿದೆ. ದಕ್ಷಿಣ ಅಮೆರಿಕಾದ ಮೆಕ್ಸಿಕೊ, ಪೆರು, ಯುರೋಪಿನ-ಸ್ಪೈನ್, ಇಟಲಿ ಸರ್ಕಾರಗಳು ಅಮೆರಿಕದ ಕ್ಯೂಬಾ-ವಿರೋಧಿ 'ರಂಗ'ಕ್ಕೆ ಸೇರಿದ್ದು ಹೆಚ್ಚಿನ ಆತಂಕದ ವಿಷಯವಾಗಿದೆ. ಇದರ ವಿರುದ್ಧ ಕ್ಯೂಬಾ ಸರ್ಕಾರ ಮತ್ತು ಜನತೆಗೆ ಸೌಹಾರ್ದ ಬೆಂಬಲ ಸೂಚಿತ ಸಂದೇಶಗಳು ಹರಿದು ಬರುತ್ತಿವೆ.

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್ ಈ ಸಂಬಂಧದಲ್ಲಿ ಇಂತಹ ಒಂದು ಸಂದೇಶ ಕಳಿಸಿದ್ದಾರೆ.

ಒಂದು ತಿಂಗಳ ಕಾಲ ಈ ಚಿನ್ನದ ಹಬ್ಬವನ್ನು ಆಚರಿಸಲು ಭಾರತದ 'ಕ್ಯೂಬಾ ಸೌಹಾರ್ದ ರಾಷ್ಟ್ರೀಯ ಸಮಿತಿ' ನಿರ್ಧರಿಸಿದೆ. ಜುಲೈ 26 ರಲ್ಲಿ ದೆಹಲಿಯಲ್ಲಿ ಆರಂಭಿಸಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಇವಲ್ಲದೆ ಮುಂಬಯಿ, ಚೆನ್ನೈ, ಬೆಂಗಳೂರುಗಳಲ್ಲಿ ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.



ಸಿನಿಮಾ

ಭಾವೈಕ್ಯತೆ ಬೆಸೆಯುವ 'ಮಿಸ್ಟರ್ ಅಂಡ್ ಮಿಸಸ್ ಅಯ್ಯರ್'

ನಿರ್ದೇಶಕಿ ಅಪರ್ಣಾ ಸೇನ್‌ರವರು ನವಿರಾಗಿ ನೋಡುಗರ ಮನ ಸೋಲುವಂತೆ ಈ ಚಿತ್ರವನ್ನು ನಿರೂಪಿಸಿದ್ದಾರೆ. ಕೋಮುದ್ವೇಷದ ಕಠೋರತೆ, ಭಯಾನಕ ಸ್ಥಿತಿಯನ್ನು ಸರಳವಾಗಿಯೇ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿ, ಈ ವೈಷಮ್ಯದ ಬದುಕನ್ನು ಬದಿಗೊತ್ತಿ ಸಮಾನಭಾವದ ಬದುಕಿಗೆ ಪ್ರೇರಣೆ ನೀಡುವಂತಹ ಭಾವೈಕ್ಯತೆಯ ಬೀಜವನ್ನು ಬಿತ್ತಿದ್ದಾರೆ.

ಇಂದು ಕೋಮು ದಳ್ಳುರಿಯ ವ್ಯಾದಿ ದೇಶದ ತುಂಬ ವ್ಯಾಪಿಸಿದೆ. ತೊಗಾಡಿಯಾರಂತಹ ಕ್ರಿಮಿ(ನಲ್)ಗಳು ಈ ವ್ಯಾದಿಯನ್ನು ಹರಡಲು ದೇಶವೆಲ್ಲಾ ಸುತ್ತುತ್ತಿದ್ದಾರೆ. ಇಂತಹ ಅನೇಕ ಕೋಮುವಾದಿ ಕ್ರಿಮಿಗಳು ನಮ್ಮ ಸಮಾಜದ ಸ್ವಾಸ್ಥ್ಯವನ್ನು ಕೆಡಿಸಿ ರೋಗಗ್ರಸ್ತಗೊಳಿಸಲು ಹೊರಟಿವೆ. ಆದರೆ ನಾವು ನಿರಾಶರಾಗಬೇಕಿಲ್ಲ. ಈ ವ್ಯಾದಿಗೆ ಔಷಧಿ ನೀಡುವಂತಹ ಹಲವು ವೈದ್ಯರು ನಮ್ಮ ನಡುವೆ ಇದ್ದಾರೆ. ಕೋಮುದಳ್ಳುರಿಯ ವ್ಯಾದಿಗೆ ಪ್ರತಿರೋಧ ಒಡ್ಡುವ ಟಾನಿಕ್ಕೇ 'ಮಿಸ್ಟರ್ ಅಂಡ್ ಮಿಸಸ್ ಅಯ್ಯರ್' ಎಂಬ ಚಿತ್ರ.

ಸ್ವಯಂ ಘೋಷಿತ ಧರ್ಮರಕ್ಷಕರು ತಮ್ಮ ಸುಳ್ಳಿನ ಕಂತೆ-ಪುರಾಣಗಳ ಮೂಲಕ ನೆರೆಹೊರೆಯವರನ್ನೂ ಗುಮಾನಿಯಿಂದ ನೋಡುವಂತಹ, ಪರಸ್ಪರರಲ್ಲಿ ಅಪನಂಬಿಕೆ ಮೂಡಿಸುವಂತಹ ವಾತಾವರಣವನ್ನು ಸೃಷ್ಟಿ ಮಾಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಭಾವೈಕ್ಯತೆ ಸಾರುವ, ಪರಸ್ಪರರಲ್ಲಿ ನಂಬಿಕೆ ಇಡುವ ಮತ್ತು ಸಹೋದರತೆಯನ್ನು ಬೆಳೆಸುವ ಪುಟ್ಟ ಪ್ರಯತ್ನವನ್ನು ಅಪರ್ಣಾ ಸೇನ್ ಅವರು ತಮ್ಮ 'ಮಿಸ್ಟರ್ ಅಂಡ್ ಮಿಸಸ್ ಅಯ್ಯರ್' ಚಿತ್ರದ ಮೂಲಕ ಮಾಡಿದ್ದಾರೆ.

ಸಂಪ್ರದಾಯಸ್ತ ಕುಟುಂಬದ ಮಹಿಳೆಯೊಬ್ಬಳು ತನ್ನ ಮಗುವಿನೊಂದಿಗೆ ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿರುತ್ತಾಳೆ. ಮಗು ಅಳಲು ಶುರು ಮಾಡುತ್ತದೆ. ಎಷ್ಟೇ ಸಮಾಧಾನ ಪಡಿಸಿದರೂ ಅಳು ನಿಲ್ಲಿಸುವುದಿಲ್ಲ. ಸಹ ಪ್ರಯಾಣಿಕರು ಯಾರೂ ಅವಳ ಸಹಾಯಕ್ಕೆ ಬರುವುದಿಲ್ಲ. ಆದರೆ ಒಬ್ಬ ಯುವಕ ಮಗುವನ್ನು ಎತ್ತಿಕೊಂಡು ಆಡಿಸಿ, ಸಮಾಧಾನ ಪಡಿಸುತ್ತಾನೆ. ಹೀಗೆಯೇ ಅವರಿಬ್ಬರ ಪರಿಚಯವೂ ಆಗುತ್ತದೆ.

ಮುಂದಿನ ಊರಿನಲ್ಲಿ ಕೋಮು ಗಲಭೆ ಉಂಟಾಗಿರುವ ಕಾರಣದಿಂದಾಗಿ ಎಲ್ಲಾ ವಾಹನಗಳನ್ನು ದೂರದಲ್ಲಿಯೇ ನಿಲ್ಲಿಸಲಾಗುತ್ತದೆ. ವಿಷಯ ತಿಳಿದ ಯುವಕ ಮಗುವನ್ನು ಆಕೆಗೆ ಒಪ್ಪಿಸಿ ಅಲ್ಲಿಂದ ಹೊರಡಲು ಅನುವಾಗುತ್ತಾನೆ. ಕಾರಣ ಕೇಳಿದಾಗ ತಾನೊಬ್ಬ ಮುಸ್ಲಿಂ, ಇಲ್ಲೇ ಇದ್ದಲ್ಲಿ ಹಲ್ಲೆಗೆ ಈಡಾಗಬಹುದೆಂಬ ಭೀತಿ ವ್ಯಕ್ತಪಡಿಸುತ್ತಾನೆ. ಆದರೆ ಅಲ್ಲಿಂದ ಹೊರಟರೂ ಅಪಾಯ ತಪ್ಪಿದ್ದಲ್ಲ ಎಂದು ಮನಗಂಡ ಮಹಿಳೆ ಆತನಿಗೆ ಹೋಗಲು ಬಿಡದೆ ತನ್ನೊಂದಿಗೇ ಇರುವಂತೆ ಒಪ್ಪಿಸುತ್ತಾಳೆ.

ಯುವಕನ ಊಹೆ ನಿಜವಾಗುತ್ತದೆ. ಕೋಮುವಾದಿ ರಕ್ಕಸರು ಬಸ್ಸಿಗೆ ಧಾಳಿ ಮಾಡುತ್ತಾರೆ. ಪ್ರತಿಯೊಬ್ಬರು ಯಾವ ಧರ್ಮೀಯರೆಂದು ಪರೀಕ್ಷಿಸಲು ಎಲ್ಲರ ಹೆಸರನ್ನು ಕೇಳುತ್ತಾರೆ, ಅನುಮಾನ ಬಂದವರ ಪ್ಯಾಂಟನ್ನು ಬಿಚ್ಚಿ ನೋಡುವಷ್ಟು ಹೀನ ಮಟ್ಟಕ್ಕೆ ಇಳಿಯುತ್ತಾರೆ. ಕೋಮುವಾದಿಗಳ 'ಧರ್ಮರಾಜ್ಯ'ದಲ್ಲಿ ಸ್ವಧರ್ಮೀಯರು ಮಾನ ಕಳೆದುಕೊಳ್ಳಬೇಕಾದಂತಹ ಪರಿಸ್ಥಿತಿ! ಅನಂತರ ಯುವಕನ ಹೆಸರು ಕೇಳಿದಾಗ ಆ ಮಹಿಳೆಯೇ 'ನಾವು ಮಿಸ್ಟರ್ ಅಂಡ್ ಮಿಸಸ್ ಅಯ್ಯರ್, ಈ ಮಗು ತಮ್ಮಿಬ್ಬರದು'ಎಂದು ಹೇಳಿ ಆತನನ್ನು ಪಾರು ಮಾಡುತ್ತಾಳೆ. ಆದರೆ ಆ ಬಸ್ಸಿನಲ್ಲಿದ್ದ ವೃದ್ಧ ಮುಸ್ಲಿಂ ಪ್ರಯಾಣಿಕನನ್ನು ಯಾವ ದಯೆ-ದಾಕ್ಷಿಣ್ಯವಿಲ್ಲದೆ ಎಳೆದೊಯ್ಯುತ್ತಾರೆ. ಆತ ಕೊಲೆಗೀಡಾದುದು ಅನಂತರ ತಿಳಿಯುತ್ತದೆ. (ಈ ವೃದ್ಧ ಮುಸ್ಲಿಂ ಪ್ರಯಾಣಿಕನ ಪಾತ್ರದಲ್ಲಿ ಖ್ಯಾತ ಲೇಖಕ ದಿವಂಗತ ಭೀಷ್ಮ ಸಹಾನಿ ನಟಿಸಿದ್ದಾರೆ). ಎಲ್ಲಾ ಪ್ರಯಾಣಿಕರು ಈ ಧಾಳಿಯಿಂದಾಗಿ ತತ್ತರಿಸಿಹೋಗುತ್ತಾರೆ.

ಕೋಮು ಗಲಭೆಯಿಂದಾಗಿ ಮುಂದೆ ಪ್ರಯಾಣ ಮಾಡಲು ಸಾಧ್ಯವಾಗದೆ, ಉಳಿದುಕೊಳ್ಳಲು ಸರಿಯಾದ ವ್ಯವಸ್ಥೆಯೂ ಆಗದೆ, ಕೊನೆಗೆ ಪೋಲಿಸ್ ಅಧಿಕಾರಿಯ ಸಹಾಯದಿಂದಾಗಿ ಒಂದು ಗೆಸ್ಟ್ ಹೌಸ್‌ನಲ್ಲಿ 'ಮಿಸ್ಟರ್ ಅಂಡ್ ಮಿಸಸ್ ಅಯ್ಯರ್' ಅಂದರೆ ಆ ಮಹಿಳೆ ಮತ್ತು ಮುಸ್ಲಿಂ ಯುವಕ ಉಳಿದುಕೊಳ್ಳುತ್ತಾರೆ. ಪ್ರತಿ ಹಂತದಲ್ಲಿಯೂ ಮುಸ್ಲಿಂ ಯುವಕ ಹಿಂದು ಮಹಿಳೆಯೊಂದಿಗೆ ಗೌರವಯುತವಾಗಿ ನಡೆದುಕೊಳ್ಳುತ್ತಾನೆ. ಇಬ್ಬರ ಅಭಿರುಚಿ ಬೇರೆ ಬೇರೆಯಾಗಿದ್ದರೂ ಅವರ ಸೌಹಾರ್ದಯುತ ಬಾಂಧವ್ಯಕ್ಕೆ ಅಡ್ಡಿಯಾಗುವುದಿಲ್ಲ. ಅಲ್ಲಿಯೂ ಅವರ ಕಣ್ಣ ಮುಂದೆಯೇ ಕೋಮುವಾದಿಗಳಿಂದ ಅಮಾಯಕನೊಬ್ಬನ ಹತ್ಯೆಯಾಗುತ್ತದೆ. ಅದನ್ನು ಕಂಡ ಆಕೆ ಭಯಭೀತಳಾದಾಗ ಯುವಕನೇ ಆಕೆಗೆ ಸಾಂತ್ವಾನ ನೀಡುತ್ತಾನೆ. ಆಕೆಯೂ ಆತನ ಸ್ನೇಹಪೂರ್ವ ನಡೆವಳಿಕೆಗೆ ಮನಸೋತು ಬಿಚ್ಚು ಮನಸ್ಸಿನಿಂದ ನಡೆದುಕೊಳ್ಳುತ್ತಾಳೆ.



ಕೊನೆಯ ಕ್ಷಣದವರೆಗೂ ... ಬೆಂಗಾವಲಾಗಿ ಕಾಪಾಡುವ ಮುಸ್ಲಿಂ ... ಅವಳನ್ನು ಅವರ ಊರಿಗೆ ತಲುಪಿಸುತ್ತಾನೆ ... ನಿಲ್ದಾಣದಲ್ಲಿ ಆಕೆಯನ್ನು ಕರೆದೊಯ್ಯಲು ... ಪತಿಗೆ ಈತನನ್ನು ಪರಿಚಯಿಸುತ್ತಾಳೆ ... ಮುಸ್ಲಿಂನೆಂದು ತಿಳಿದು ಒಂದು ಕ್ಷಣ ಪೆ... ಪತಿ ಅನಂತರ ಸ್ನೇಹ ಹಸ್ತ ಚಾಚುತ್ತಾನೆ.

ಯಾವುದೇ ಭಾವುಕತೆಗೆ ಒಳಗಾಗದೇ ... ಯುವಕ ಅವರನ್ನು ಬೀಳ್ಕೊಟ್ಟು ಹೊರಡ... ಆದರೆ ಆ ಮಹಿಳೆಗೆ ಆತನ ನಿ... ಸ್ನೇಹಪರತೆಯನ್ನು ಕಂಡು ಕಣ್ಣುಗಳು ... ಬರುತ್ತವೆ.

ನಿರ್ದೇಶಕಿ ಅಪರ್ಣಾ ಸೇನ್‌ರವರು ನ... ನೋಡುಗರ ಮನ ಸೋಲುವಂತೆ ಈ ಚಿ... ನಿರೂಪಿಸಿದ್ದಾರೆ. ಕೋಮುದ್ವೇಷದ ಕ... ಭಯಾನಕ ಸ್ಥಿತಿಯನ್ನು ಸರಳವಾಗಿಯೇ ... ಕಟ್ಟುವಂತೆ ಚಿತ್ರಿಸಿ, ಈ ವೈಷಮ್ಯದ ಬ... ಬದಿಗೊತ್ತಿ ಸಮಾನಭಾವದ ಬದುಕಿಗೆ ... ನೀಡುವಂತಹ ಭಾವೈಕ್ಯತೆಯ ಬೀ... ಬಿತ್ತಿದ್ದಾರೆ.

- ಎಂ.

ಹಲವು ಪ್ರಶಸ್ತಿಗಳು

ಈ ಸಲದ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಯಲ್ಲಿ ಹಲವು ಪ್ರಶಸ್ತಿಗಳನ್ನು 'ಮಿಸ್ಟರ್ ಅಂಡ್ ಮಿಸಸ್ ಅಯ್ಯರ್' ತನ್ನ ಬುಟ್ಟಿಗೆ ಹಾಕಿಕೊಂಡಿದೆ.

ಅಪರ್ಣಾ ಸೇನ್ ಅವರು ಚಿತ್ರ ನಿರ್ದೇಶನಕ್ಕೆ ಉತ್ತಮ ನಿರ್ದೇಶನ ಪ್ರಶಸ್ತಿಯನ್ನು ಗಳಿಸಿದ್ದಾರೆ. ಮಿಸಸ್ ಅಯ್ಯರ್ ಪಾತ್ರದಲ್ಲಿ ನಟಿಸಿರುವ ಕೊಂಕಣ ಸೇನ್ ರವರು ಉತ್ತಮ ಅಭಿನೇತ್ರಿ ಪ್ರಶಸ್ತಿಯನ್ನು ಗಳಿಸಿದ್ದಾರೆ. ಅವರು ತಮ್ಮ ಮನೋಜ್ಞ ಅಭಿನಯದಿಂದ ಗಮನ ಸೆಳೆದಿದ್ದಾರೆ. ಇದಲ್ಲದೆ ಉತ್ತಮ ಭಾವೈಕ್ಯತಾ ಸಂದೇಶಕ್ಕಾಗಿ ನೀಡುವ 'ನರ್ಗಿಸ್ ಪ್ರಶಸ್ತಿ'ಯನ್ನು ಸಹ ಈ ಚಿತ್ರ ಗಳಿಸಿಕೊಂಡಿದೆ.

ಟೆನ್ನಿಸ್ ರಂಗದ ನೂತನ ತಾರೆ 'ಸಾನಿಯಾ ಮಿರ್ಜಾ'

ಪುರುಷರ ಟೆನ್ನಿಸ್‌ನಲ್ಲಿ ಭಾರತಕ್ಕೆ ಈ ಹಿಂದೆಯೂ ಹಲವಾರು ತಾರೆಗಳಿದ್ದರು. ಅಮೃತರಾಜ್ ಸೋದರರಿಂದ ಆರಂಭಿಸಿ ಭೂಪತಿ, ಫೇಸ್‌ವರೆಗೆ ವಿಶ್ವದ ಗಮನ ಸೆಳೆದಿರುವ ಟೆನ್ನಿಸ್ ಪಟುಗಳಿದ್ದಾರೆ. ಭಾರತದ ಮಹಿಳಾ ಟೆನ್ನಿಸ್‌ನಲ್ಲಿ ಅಂತರ್ರಾಷ್ಟ್ರೀಯ ಖ್ಯಾತಿಯ ತಾರೆಯೋರ್ವಳು ಮೂಡಿಬಂದಿರುವುದು ಇದೇ ಪ್ರಥಮ.

ವಿಲಿಯಮ್ಸ್ ಸಹೋದರಿಯರ ಆರ್ಭಟದೊಂದಿಗೆ ಮತ್ತೊಂದು ವಿಂಬಲ್ಡನ್ ಪಂದ್ಯಾವಳಿ ಕೊನೆಗೊಂಡರೆ ಈ ಬಾರಿಯ ವಿಂಬಲ್ಡನ್ ಪಂದ್ಯಾವಳಿ ಭಾರತಕ್ಕೊಬ್ಬಳು ಹೊಸ ತಾರೆಯನ್ನು ನೀಡಿದೆ.

ಹೈದರಾಬಾದಿನ ಮಧ್ಯಮ ವರ್ಗದ ಮುಸ್ಲಿಂ ಕುಟುಂಬದಿಂದ ಬಂದ ಸಾನಿಯಾ ಮಿರ್ಜಾ ಎಂಬ ಹದಿನಾರರ ಬಾಲೆ ವಿಂಬಲ್ಡನ್‌ನ ಬಾಲಕಿಯರ ಡಬಲ್ಸ್‌ನಲ್ಲಿ ಜಯಿಸಿ ಪ್ರಶಸ್ತಿ ಪಡೆದ ಪ್ರಥಮ ಭಾರತೀಯ ಮಹಿಳೆಯೆನಿಸಿದಳು. ಒಂದೇ ವಾರದಲ್ಲಿ ಆಕೆಯನ್ನು ಅರಸಿಕೊಂಡು ಇನ್ನೊಂದು ಪಟ್ಟ ಬಂದಿತು. 'ಜ್ಯೂನಿಯರ್ ಡಬಲ್ಸ್‌ನಲ್ಲಿ ಪ್ರಥಮ ಶ್ರೇಯಾಂಕ'. ಹೀಗೆ ವಿಶ್ವ ಟೆನ್ನಿಸ್ ರಂಗದಲ್ಲಿ ಹೊಸ ತಾರೆಯೊಂದು ರೂಪುಗೊಳ್ಳುತ್ತಿದ್ದಾಳೆ.



ಕಳೆದ ಏಷ್ಯನ್ ಕ್ರೀಡಾಕೂಟದಲ್ಲಿ ಲಿಯಾಂಡರ್ ಫೇಸ್ ಅವರೊಡನೆ ಮಿಕ್ಸೆಡ್ ಡಬಲ್ಸ್‌ನಲ್ಲಿ ಕಂಚಿನ ಪದಕ ಪಡೆಯುವ ಮೂಲಕ ಟೆನ್ನಿಸ್ ಪ್ರಿಯರ ಗಮನಸೆಳೆದಿದ್ದ ಈ ಬಾಲೆ ಆ ಬಳಿಕ ಹಿಂತಿರುಗಿ ನೋಡಿದ್ದೇ ಇಲ್ಲ. ಮನಿಲಾದಲ್ಲಿ ನಡೆದಿದ್ದ ಎರಡು ಅಂತರ್ರಾಷ್ಟ್ರೀಯ ಟೆನ್ನಿಸ್ ಪಂದ್ಯಾವಳಿಗಳಲ್ಲಿ ಏಷ್ಯಾ ಯುರೋಪಿನ ತಾರೆಗಳೊಡನೆ ಹೋರಾಡಿ ಗೆಲುವನ್ನು ಸಾಧಿಸಿದ ಈಕೆ ತನ್ನ ತವರೂರಾದ ಹೈದರಾಬಾದ್‌ನಲ್ಲಿ ನಡೆದಿದ್ದ ಪಂದ್ಯಾವಳಿಯಲ್ಲೂ ಗೆಲುವು ಪಡೆದಳು.

ಜೂನಿಯರ್ ವಿಭಾಗದ ವಿಶ್ವ ಪಂದ್ಯಾವಳಿ ಗಳಲ್ಲಿ ಈವರೆಗೆ ಏಳು ಸಿಂಗಲ್ಸ್ ಪ್ರಶಸ್ತಿಗಳನ್ನು ವಿಂಬಲ್ಡನ್ ಸೇರಿದಂತೆ ಹನ್ನೊಂದು ಡಬಲ್ಸ್ ಪ್ರಶಸ್ತಿಗಳನ್ನೂ ತನ್ನದಾಗಿಸಿ ಕೊಂಡಿದ್ದು ಮುಂದಿನ ವರ್ಷದಿಂದ ಮಹಿಳೆಯರ ವಿಭಾಗದಲ್ಲಿ ಸ್ಪರ್ಧೆಗಿಳಿಯಲು ಸಿದ್ಧಳಾಗುತ್ತಿದ್ದಾಳೆ.

ಹೈದರಾಬಾದಿನ ಇಮ್ರಾನ್ ಮಿರ್ಜಾ ಮತ್ತು ನಸೀಮಾ ದಂಪತಿಗಳ ಪ್ರ... ಪುತ್ರಿಯಾಗಿರುವ ಸಾನಿಯಾ ಎ... ವಯಸ್ಸಿನಲ್ಲಿಯೇ ಟೆನ್ನಿಸ್ ಆಟ ಆರಂಭಿ... ಶ್ರಮದಿಂದ ಈ ಹಂತಕ್ಕೆ ಬೆಳೆದಿದ್ದಾಳೆ. ... ರಿಂದ ಮಹಿಳೆಯ ವಿಭಾಗದಲ್ಲಿ ಸ್ಪರ್ಧಿ... ದಾಗಿ ಪ್ರಕಟಿಸಿರುವ ಸಾನಿಯಾ ಫ್ರೆಂಚ್ ... ಮತ್ತು ವಿಂಬಲ್ಡನ್‌ನಲ್ಲಿ ತನಗೆ ಯಶಸ್ಸು ದ... ಡಬಲ್ಸ್‌ನೊಂದಿಗೆ ಸಿಂಗಲ್ಸ್‌ನಲ್ಲಿಯೂ ... ಗಮನ ನೀಡುವ ಬಗೆಗೆ ಹೇಳುತ್ತಿ... ಅಮೆರಿಕಾ, ಯುರೋಪಿನ ತಾರೆಯರ ... ಭಾರತದ ಧ್ವಜ ಎತ್ತಿ ಹಿಡಿಯುವ ... ಈಕೆಗಿರುವುದು ಈಗಾಗಲೇ ಸಾಬೀತ... ದೇಶದ ಜನತೆ ಈಕೆಯಿಂದ ಇನ್ನೂ ಹೆಚ್ಚ... ನಿರೀಕ್ಷಿಸುತ್ತಿದ್ದಾರೆ.

ಮತ ಧರ್ಮಗಳೂ ಪ್ರಾದೇಶಿಕ... ರೂಪಿಸಿರುವ ತಡೆಗೋಡೆಗಳನ್ನು ... ಮಾನವನನ್ನು ಒಂದಾಗಿಸುವ ಸಾಧ... ಕ್ರೀಡೆಯೂ ಒಂದಾಗಿದ್ದು ಸಾನಿಯಾ... ತಾರೆಯರು ಈ ಬೇಧಗಳನ್ನು ಅಳಿಸಿ... ಶಕ್ತಿಯಿರುವವರು. ಜೂನಿಯರ್ ವಿಭಾ... ಅಗ್ರಶ್ರೇಯಾಂಕ ಪಡೆದು ಮಿಂಚುತ್ತಿರ... ಬಾಲಕಿ ಮಹಿಳೆಯರ ವಿಭಾಗ... ಅಗ್ರಸ್ಥಾನಿಯಾಗಲಿ. ಟೆನ್ನಿಸ್‌ನಲ್ಲಿ ... ಸಾಧ್ಯವಿರುವಷ್ಟರ ಎತ್ತರಕ್ಕೆ ಏರುವುದ... ಗುರಿ ಎನ್ನುತ್ತಿರುವ ಈಕೆ ಮುಂದೊಂ... ವಿಂಬಲ್ಡನ್‌ನ ಕಿರೀಟವನ್ನು ಧರಿಸಿಯ...

- ಶಾಲಿನಿ, ...

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12.18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH